# ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 13 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 235 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಸಂಕ್ರಾಂತಿವರೆಗೆ ಸುಮ್ಮನಿರಿ...!

- ಬೆಂಬಲಿತ ಸಚಿವರು, ಶಾಸಕರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಾಳ್ಮೆ ಮಂತ್ರ
- ಬೆಲ್ಲದ ರುಚಿ ಸವಿಯುವ ಸದವಕಾಶ ನಮ್ಮ–ನಿಮ್ಮೆಲ್ಲರಿಗೂ ಸದ್ಯದಲ್ಲೆ ಬಂದೇ ಬರುತ್ತೆ

ಬೆಂಗಳೂರು, ಡಿ.12(ಕೆಎಂಶಿ)– ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ಎಷ್ಟೇ ಪ್ರಚೋದನೆ ನೀಡಿದರೂ ಅದಕ್ಕೆ ಪ್ರತಿಕ್ರಿಯಿಸದಿರಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಬೆಂಬಲಿತ ಸಚಿವರು, ಶಾಸಕರಿಗೆ ಕಿವಿಮಾತು ಹೇಳಿರುವುದಲ್ಲದೆ, ಸಂಕ್ರಾಂತಿ ವೇಳೆಗೆ ಬೆಲ್ಲದ ರುಚಿ ದೊರೆಯುವ ಮುನ್ಸೂಚನೆ ನೀಡಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಬುಧವಾರ ರಾತ್ರಿ ತಮ್ಮ ಆಪ್ತ ಸಚಿವರು, ಶಾಸಕರಿಗೆ, ಕಾಂಗ್ರೆಸ್‌ನ ಮಾಜಿ ಶಾಸಕ ಫಿರೋಜ್ ಸೇಠ್ ನಿವಾಸದಲ್ಲಿ ಭೋಜನ ಕೂಟ ಏರ್ಪಡಿಸಿದ ಬೆನ್ನಲ್ಲೇ ಶಿವಕುಮಾರ್ ಬೆಳಗಾವಿ ಹೊರವಲಯದಲ್ಲಿರುವ ತಮ್ಮ ಆಪ್ತ ಹಾಗೂ ಗಣಿ ಉದ್ಯಮಿ ದೊಡ್ಡಣ್ಣನವರ್ ಫಾರಂ ಹೌಸ್‌ನಲ್ಲಿ ತಮ್ಮ ಬೆಂಬಲಿಗರಿಗೆ ಔತಣಕೂಟ ಏರ್ಪಡಿಸಿದ್ದರು. ಸಚಿವರು, ಉಭಯ ಸದನಗಳ ಸದಸ್ಯರೂ ಸೇರಿದಂತೆ 57 ಮಂದಿ ಈ ಔತಣಕೂಟದಲ್ಲಿ ಪಾಲ್ಗೊಂಡಿದ್ದರು.

ಭೋಜನಕೂಟಕ್ಕೂ ಮುನ್ನ ನಡೆದ ಸಭೆಯಲ್ಲಿ ಶಿವಕುಮಾರ್ ಮಾತನಾಡಿ, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ವರಿಷ್ಠರ ಅಭಯ ■ 6ನೇ ಪುಟಕ್ಕೆ

### ಯಾವ ಔತಣಕೂಟವೂ ನಡಿತಿಲ್ಲ: ಡಿಕೆಶಿ

ಬೆಂಗಳೂರು, ಡಿ.12(ಕೆಎಂಶಿ)–ಪ್ರತಿದಿನ ಒಬ್ಬೊಬ್ಬ ಸ್ಥಳೀಯರು ಹಾಗೂ ನಮ್ಮ ಕ್ಷೇತ್ರದವರು ಪ್ರೀತಿಯಿಂದ ಊಟ ತಂದು ಕೊಡುತ್ತಿದ್ದಾರೆ. ಊಟ ಬೇಡ ಎನ್ನಲು ಆಗುತ್ತದೆಯೇ. ಪ್ರೀತಿಯಿಂದ ಕರೆಯುತ್ತಾರೆ, ಹಾಗಾಗಿ ಒಂದೊಂದು ದಿನ, ಒಂದೊಂದು ಕಡೆ ಊಟಕ್ಕೆ ಹೋಗುತ್ತೇವೆ. ಇದು ಯಾವ ಔತಣಕೂಟವೂ ಅಲ್ಲ, ಏನೂ ಅಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

**ನಮ್ಮ ಕಾಂಗ್ರೆಸ್ ಕುಟುಂಬದವರು ಕರಿತಾರೆ ಹೋಗದೇ ಇರಕ್ಕಾಗುತ್ತಾ...**

ಬೆಳಗಾವಿಯ ಸರ್ಕೀಟ್‌ಹೌಸ್ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಕ್ಷೇತ್ರದ ಹುಡುಗನೊಬ್ಬ ಇಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಮನೆಯಿಂದ ಇವತ್ತು ಮುದ್ದೆ, ಉಪ್ಸಾರು ಊಟ ಮಾಡಿ ಕಳಿಸುತ್ತೇವೆ ಎನ್ನುತ್ತಿದ್ದಾನೆ. ಹೀಗೇ ಅವರು ಪ್ರೀತಿಯಿಂದ ಹೇಳಿದಾಗ, ಕರೆದಾಗ ಬೇಡ ಎನ್ನಲು ಆಗುತ್ತದೆಯೇ! ನಾಳಿದ್ದು ನಮ್ಮ ಆಸೀಫ್ ಸೇಠ್, ಫಿರೋಜ್ ಸೇಠ್ ಊಟಕ್ಕೆ ಕರೆದಿದ್ದಾರೆ. ದೊಡ್ಡಣ್ಣನವರ್ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷರು, ನನ್ನ ಸ್ನೇಹಿತರೂ ಹೌದು, ಅವರದು ದೊಡ್ಡ ಕುಟುಂಬ, ಕಳೆದ 15 ವರ್ಷಗಳಿಂದ ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ನಮ್ಮ ಕಾಂಗ್ರೆಸ್ ಕುಟುಂಬದವರನ್ನು ಮರೆಯಲು ಆಗುತ್ತದೆಯೇ, ನಾನೂ ಸೇರಿದಂತೆ ಒಂದಷ್ಟು ಜನರು ಊಟಕ್ಕೆ ಹೋಗಿದ್ದೆವು.

## ಯಾವುದೇ ಕ್ಷಣದಲ್ಲಿ ಡಿಕೆಶಿ ಮುಖ್ಯಮಂತ್ರಿಯಾಗ್ತಾರೆ!

**ಡಿಕೆಶಿ ಬೆಂಬಲಿತ ಮದ್ದೂರು ಶಾಸಕ ಕದಲೂರು ಉದಯ್, ರಾಮನಗರ ಶಾಸಕ ಇಕ್ಬಾಲ್ ಹುಸೇನ್ ವಿಶ್ವಾಸ**

ಬೆಂಗಳೂರು, ಡಿ.12(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಯಾವುದೇ ಕ್ಷಣದಲ್ಲಾದರೂ ಅಧಿಕಾರ ಸ್ವೀಕರಿಸಬಹುದೆಂದು ಬೆಂಬಲಿತ ಶಾಸಕ ಕದಲೂರು ಉದಯ್ ಹಾಗೂ ಇಕ್ಬಾಲ್ ಹುಸೇನ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವೆಲ್ಲಾ ಊರು ಬಿಟ್ಟು ಬಂದಿದ್ದೇವೆ. ಆದ್ದರಿಂದ ಒಂದೆಡೆ ಸೇರಿ ಊಟ ಮಾಡಿದೆವು, ಇದು ಮುಂದುವರೆಯುತ್ತದೆ ಎಂದರು.

ಔತಣಕೂಟ ಸಭೆಯಲ್ಲಿ ಯಾವುದೇ ರಾಜಕೀಯ ಇಲ್ಲ. 139 ಶಾಸಕರೂ ಶಿವಕುಮಾರ್ ಪರ ಇದ್ದಾರೆ.



ಇಕ್ಬಾಲ್ ಹುಸೇನ್



ಕದಲೂರು ಉದಯ್

ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬ ಬಯಕೆ ನಮ್ಮದು. ಯಾವುದೇ ಕ್ಷಣದಲ್ಲಿ ಆಗಬಹುದು.

ಶಿವಕುಮಾರ್ ಕಷ್ಟಪಟ್ಟಿದ್ದಕ್ಕೆ ಫಲ ಸಿಗುತ್ತದೆ. ಅಧಿವೇಶನ ಮುಗಿದ ಬಳಿಕ ನಾಯಕತ್ವ ವಿವಾದ ಬಗೆಹರಿಯಲಿದೆ ಎಂದ ಇಕ್ಬಾಲ್ ಹುಸೇನ್, ಇಲ್ಲಿ ನಂಬರ್ ಮುಖ್ಯ ಅಲ್ಲ, ಹೈಕಮಾಂಡ್ ನಿರ್ದೇಶನ ಮುಖ್ಯ.

**ಡಿಕೆಶಿ ಕರೆದರೆ 224 ಜನ ಬರ್‍ತಾರೆ:** ಹೈಕಮಾಂಡ್ ಎಲ್ಲವನ್ನೂ ತೀರ್ಮಾನಿಸುತ್ತದೆ. ಅವರು ಹೇಳಿದರೆ ಯಾರು ಏಕೆ ಕೇಳಲ್ಲ. ನಿನ್ನೆ ರಾತ್ರಿ ನಾವು 50–60 ಶಾಸಕರು ಸೇರಿದ್ದೆವು. ಶಿವಕುಮಾರ್ ಊಟಕ್ಕೆ ಕರೆದರೆ ■ 6ನೇ ಪುಟಕ್ಕೆ

## ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

- ಸಂಸತ್ ಗಮನ ಸೆಳೆದ ಮೈಸೂರು–ಕೊಡಗು ಸಂಸದ ಯದುವೀರ್
- ಮೈಸೂರಲ್ಲಿ ಎಂಡಿಎಂಎ ಜಪ್ತಿ ಸೇರಿದಂತೆ ಹಲವು ಪ್ರಕರಣ ಪ್ರಸ್ತಾಪ

ನವದೆಹಲಿ, ಡಿ.12– ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಇದನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಸೂಕ್ತ ಕಾನೂನು ರೂಪು–ರೇಷೆ ನಿರ್ಧರಿಸಲು ಸಂಬಂಧಪಟ್ಟ ಸಚಿವಾಲಯದ ಮೂಲಕ ಕ್ರಮ ಕೈಗೊಳ್ಳಬೇಕಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದ್ದಾರೆ.



ಚಳಿಗಾಲದ ಸಂಸತ್ ಅಧಿವೇಶನದ ಶುಕ್ರವಾರದ ಕಲಾಪದಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾದ ಎಂಡಿಎಂಎ ವಶ ಹಾಗೂ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದಿರುವುದು, ಪೊಲೀಸ್ ಠಾಣೆ ಮೇಲೆ ದಾಳಿ ಸೇರಿದಂತೆ ರಾಜ್ಯದಲ್ಲಿ ಸಮಾಜದ ಸ್ವಾಸ್ಥ್ಯ ಹಾಗೂ ಶಾಂತಿ–ಸುವ್ಯವಸ್ಥೆಗೆ ಧಕ್ಕೆಯಾಗುವ ಹಲವು ಘಟನೆಗಳು ನಡೆದಿವೆ ಎಂದು ಪ್ರಸ್ತಾಪಿಸಿದರು.

ಹಿಂದಿನ ಕಲಾಪದಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದ್ದೆ. ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಈಗಾಗಲೇ ಹಲವಾರು ಪ್ರಕರಣಗಳು ವರದಿಯಾಗಿದ್ದು, ಈ ಬಗ್ಗೆ ಕರ್ನಾಟಕ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ನನ್ನ ಕ್ಷೇತ್ರದ ■ 6ನೇ ಪುಟಕ್ಕೆ

## ಜಿಪಂ, ತಾಪಂ ಚುನಾವಣೆ ಸನ್ನಿಹಿತ!

ಸುವರ್ಣ ವಿಧಾನಸೌಧ (ಬೆಳಗಾವಿ): ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಅಗತ್ಯ ಸಿದ್ಧತೆಗಳನ್ನು 2026ರ ಏಪ್ರಿಲ್ ಒಳಗೆ ಪೂರ್ಣಗೊಳಿಸಲು ಗುರುವಾರ ನಡೆದ ಸಂಪುಟ ಸಭೆ ನಿರ್ಧರಿಸಿದೆ.

ರಾಜ್ಯದ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಅಂದು ಆಯ್ಕೆಯಾಗಿದ್ದ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಅವಧಿ ಪೂರ್ಣಗೊಂಡ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳಿಗೆ ತಾಂತ್ರಿಕ ಕಾರಣಗಳಿಂದ ಚುನಾವಣೆ ನಡೆಸುವುದು ಸುಮಾರು ಐದು ವರ್ಷ ವಿಳಂಬವಾಗಿದ್ದು, 2026ರ ಬೇಸಿಗೆ ಅವಧಿ ಮುಗಿಯುವ ಮೊದಲು ಚುನಾವಣೆ ನಡೆಸಲು ಅನುಕೂಲವಾಗುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಅಗತ್ಯ ಸಹಕಾರ ನೀಡಲು ತೀರ್ಮಾನಿಸಲಾಗಿದೆ.

ಕೆಲ ವರ್ಷಗಳ ಹಿಂದೆಯೇ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಹಾಗೂ ಮೀಸಲಾತಿ ಕರಡು ಪ್ರಕಟಿಸಿತ್ತು. ಆದರೆ, ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದಿತ್ತು. ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು ■ 6ನೇ ಪುಟಕ್ಕೆ

### ಸರ್ಕಾರಿ ಶಾಲೆಗಳಲ್ಲಿ 2,200 ಕೊಠಡಿಗಳ ನಿರ್ಮಾಣಕ್ಕೆ ಅನುಮೋದನೆ

ಬೆಂಗಳೂರು: 2025–26ನೇ ಸಾಲಿನಲ್ಲಿ ಹೊಸ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ 360.01 ಕೋಟಿ ರೂ. ಅಂದಾಜು ವೆಚ್ಚದಲ್ಲಿ 2,200 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಸಮರ್ಪಕವಾಗಿ ಕೈಗೊಳ್ಳಲು ಶಾಲಾ ಶಿಕ್ಷಣ ಇಲಾಖೆಗೆ ಆದೇಶಿಸಿದೆ. ಅನುದಾನ ಬಳಕೆಗೆ 14 ಮಾನದಂಡಗಳನ್ನ ಬಿಡುಗಡೆ ಮಾಡಿದ್ದು, ಅದರ ಅನ್ವಯವೇ ಅನ್ವಯ ಅನುದಾನ ಬಳಕೆಗೆ ಸೂಚನೆ ನೀಡಿದೆ.

ಶಾಲಾ ಶಿಕ್ಷಣ ಇಲಾಖೆ ಆಯುಕ್ತರು 2025–26ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ 360 ಕೋಟಿ ರೂ. ಮಂಜೂರು ಮಾಡಲಾದ ಪ್ರಸ್ತಾವನೆ ಸಲ್ಲಿಸಿದ್ದಾರೆ. ಒಟ್ಟು 359.86 ಕೋಟಿ ರೂ.ಗಳಿಗೆ ಶಾಲಾವಾರು ಕ್ರಿಯಾ ಯೋಜನೆ ನೀಡಲಾಗಿದೆ. ಇದರಲ್ಲಿ ಸಂಭಾವ್ಯ ಪಟ್ಟಿಯಲ್ಲಿರುವ 912 ಶಾಲೆಗಳಲ್ಲಿ ಅಗತ್ಯವಿರುವ 1,911 ಶಾಲಾ ಕೊಠಡಿಗಳ ನಿರ್ಮಾಣಕ್ಕೆ 325.32 ಕೋಟಿ ರೂ. ಅಂದಾಜು ವೆಚ್ಚವನ್ನು ಲೆಕ್ಕ ಹಾಕಲಾಗಿದೆ. ಅಲ್ಲದೇ ಸರ್ಕಾರಿ ಶಾಲೆಗಳಲ್ಲಿ ಹೊಸ ಶೌಚಾಲಯಗಳ ನಿರ್ಮಾಣಕ್ಕಾಗಿ 63.29 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಲಾಗಿದೆ.



## ಎಂಸಿಡಿಸಿಸಿ ಬ್ಯಾಂಕ್ ಆಡಳಿತ 'ಕೈ' ವಶ!

**ಕೋರ್ಟ್ ಆದೇಶದನ್ವಯ ನಡೆದ ಬಾಕಿ ಮತ ಎಣಿಕೆ ಬಳಿಕ ಎಸ್.ಚಂದ್ರಶೇಖರ್, ನರೇಂದ್ರ, ಮಂಜುನಾಥ್ ಆಯ್ಕೆ**

ಮೈಸೂರು, ಡಿ.12– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಆಡಳಿತ ಮಂಡಳಿಯ ಮೂರು ಸ್ಥಾನಗಳಿಗೆ ನ್ಯಾಯಾಲಯದ ಆದೇಶದಂತೆ ಶುಕ್ರವಾರ ಮತ ಎಣಿಕೆ ನಡೆದಿದ್ದು, ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ರೋಚಕ ಗೆಲುವು ಕಂಡಿದ್ದಾರೆ. ಈ ಮೂಲಕ ಬ್ಯಾಂಕ್ ಆಡಳಿತ ಚುಕ್ಕಾಣಿ 'ಕೈ' ವಶವಾದಂತಾಗಿದೆ.

ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಗೆ ಕಳೆದ ಜೂ.26ರಂದು ಚುನಾವಣೆ ನಡೆದಿತ್ತಾದರೂ ವಿವಿಧ ಕಾರಣದಿಂದ ಮತದಾನದ ಹಕ್ಕು ನಿರಾಕರಿಸಿದ್ದನ್ನು ಪ್ರಶ್ನಿಸಿ ನ್ಯಾಯಾಲಯದ ಅನುಮತಿ ಪಡೆದು ಮೂರು ಕ್ಷೇತ್ರಗಳಲ್ಲಿ ಚಲಾಯಿಸಿದ್ದ ಮತ ಎಣಿಕೆ ಬಾಕಿ ಇರಿಸಿ, ನ್ಯಾಯಾಲಯದ ಆದೇಶದ ನಂತರ ಮುಂದುವರೆಯಲು ನಿರ್ಧರಿಸಲಾಗಿತ್ತು. ಇದೀಗ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮತ ಎಣಿಕೆ ನಡೆಸಿದ್ದು, ಜನತಾ ಬಜಾರ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್, ಶಾಸಕ ತನ್ವೀರ್ ಸೇಠ್ ಆಪ್ತ ಜಿ.ಎನ್.ಮಂಜುನಾಥ್ ಹಾಗೂ ಮಾಜಿ ಶಾಸಕ ಆರ್.ನರೇಂದ್ರ ಗೆಲುವು ಸಾಧಿಸಿದ್ದಾರೆ.



ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಎಸ್.ಚಂದ್ರಶೇಖರ್ ಹಾಗೂ ಜಿ.ಎನ್.ಮಂಜುನಾಥ್ ಅವರೊಂದಿಗೆ ಅವರ ಬೆಂಬಲಿಗರು ಹಾಗೂ ಕಾಂಗ್ರೆಸ್ ಮುಖಂಡರು ಸಂಭ್ರಮಿಸಿದರು.

ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯ ಒಟ್ಟು 16 ಸ್ಥಾನಗಳಲ್ಲಿ ಮೂರು ಕ್ಷೇತ್ರಗಳ ಹೊರತುಪಡಿಸಿ(ಅಧಿಸೂಚನೆ ಆಗಿಲ್ಲ) ಇನ್ನುಳಿದ 13 ಸ್ಥಾನಗಳಿಗೆ ಚುನಾವಣೆ ಘೋಷಿಸಿದ ಬಳಿಕ ಯಳಂದೂರು ಕ್ಷೇತ್ರದಿಂದ ಜಯರಾಮ್ ಅವಿರೋಧವಾಗಿ ಆಯ್ಕೆಯಾದರು. ಇನ್ನು 12 ಕ್ಷೇತ್ರಗಳಿಗೆ ■ 6ನೇ ಪುಟಕ್ಕೆ

> ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಡಳಿತ ಮಂಡಳಿಗೆ ಚುನಾವಣೆ ನಡೆದು, 13ರಲ್ಲಿ ಅವಿರೋಧ ಆಯ್ಕೆ ಸೇರಿ ಏಳು ಮಂದಿ ಕಾಂಗ್ರೆಸ್ ಬೆಂಬಲಿತರು ಮತ್ತು ಮೂರು ಮಂದಿ ಜೆಡಿಎಸ್–ಬಿಜೆಪಿ ಮೈತ್ರಿ ಬೆಂಬಲಿತರು ಆಯ್ಕೆಯಾಗಿದ್ದರು. ಶುಕ್ರವಾರ ಗೆಲುವು ಸಾಧಿಸಿದ ಮೂವರು ಸೇರಿ ಕಾಂಗ್ರೆಸ್ ಬೆಂಬಲಿತರ ಸಂಖ್ಯೆ 10ಕ್ಕೆ ಹೆಚ್ಚಿದೆ. ಈಗಾಗಲೇ ಬ್ಯಾಂಕ್‌ನ ಅಧ್ಯಕ್ಷರಾಗಿ 13 ಶಾಖೆಗಳನ್ನು ಆರಂಭಿಸಿ, ಸಾವಿರ ಕೋಟಿಗೆ ವಹಿವಾಟನ್ನು ಹೆಚ್ಚಿಸಿ, ಅಗತ್ಯ ಸಿಬ್ಬಂದಿ ನೇಮಕ ಮಾಡುವುದರೊಂದಿಗೆ ಬ್ಯಾಂಕ್ ಅಭಿವೃದ್ಧಿ ವಿಷಯದಲ್ಲಿ ಛಾಪು ಮೂಡಿಸಿದ ಎಸ್. ಚಂದ್ರಶೇಖರ್ ಅಧ್ಯಕ್ಷಗಾದಿಗೆ ಮತ್ತೊಮ್ಮೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ.



## ಡ್ರಗ್ ಮಾಫಿಯಾ ವಿರುದ್ಧ ಮೈಸೂರು ನಗರ, ಜಿಲ್ಲೆಯ ಪೊಲೀಸರ ಸಮರ

- ಡ್ರಗ್ಸ್ ದಂಧೆ ಬೇರು ಸಹಿತ ಕಿತ್ತೊಗೆಯಲು ಪಣ
- ಅನುಮಾನಾಸ್ಪದ ಮನೆ, ಅಂಗಡಿ, ಶೆಡ್‌ಗಳ ಮೇಲೆ ದಾಳಿ
- ಡ್ರಗ್ಸ್ ಮುಕ್ತ ಮಾಡಲು ಪೋಷಕರು, ಶಿಕ್ಷಣ ಸಂಸ್ಥೆಗಳ ಸಹಕಾರ ಕೋರಿಕೆ
- ಪೋಷಕರು ಮಕ್ಕಳ ವರ್ತನೆ, ನಡವಳಿಕೆ ಸೂಕ್ಷ್ಮವಾಗಿ ನಿತ್ಯವೂ ಗಮನಿಸಬೇಕು

ಮೈಸೂರು, ಡಿ.12(ಆರ್‌ಕೆ, ಬಿಎಲ್‌ಯು)– ಯುವ ಸಮೂಹದ ಬದುಕನ್ನು ದುರಂತ ಕೂಪಕ್ಕೆ ತಳ್ಳುತ್ತಿರುವ ಡ್ರಗ್ಸ್ ಹಾವಳಿ ಮಟ್ಟ ಹಾಕಲು ರಾಜ್ಯ ಸರ್ಕಾರ ಶಪಥ ಮಾಡಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದ ಮೇರೆಗೆ ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸರು ಡ್ರಗ್ಸ್ ಮಾಫಿಯಾ ಭೇದಿಸಲು ವ್ಯಾಪಕ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಒಂದೆಡೆ ಡ್ರಗ್ಸ್ ತಯಾರಿಕಾ ಹಾಗೂ ಮಾರಾಟ ಜಾಲವನ್ನು ಪೊಲೀಸರು ಭೇದಿಸುತ್ತಿದ್ದರೆ, ಮತ್ತೊಂದೆಡೆ ರಕ್ತ ಬೀಜಾಸುರರಂತೆ ಹುಟ್ಟಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡ್ರಗ್ಸ್ ದಂಧೆಯನ್ನು ಬೇರು ಸಮೇತ ಕಿತ್ತು ಹಾಕಿ, ಸ್ವಚ್ಛ ಸಮಾಜ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡಿದೆ. ಸರ್ಕಾರದ ಕಟ್ಟಾದೇಶವನ್ನು ಗಂಭೀರವಾಗಿ ಪರಿಗಣಿಸಿರುವ ಮೈಸೂರು ಪೊಲೀಸರು ಡ್ರಗ್ಸ್ ಜಾಲ ಮಟ್ಟ ಹಾಕಲು ವ್ಯಾಪಕ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಪ್ರತಿ ದಿನ ಡ್ರಗ್ಸ್ ಪೆಡ್ಲರ್‌ಗಳನ್ನು ಒಂದಲ್ಲ ಒಂದು ಕಡೆ ಪೊಲೀಸರು ಬಂಧಿಸುತ್ತಲೇ ಇದ್ದಾರೆ.

**ಡ್ರಗ್ಸ್ ಮುಕ್ತ ಮೈಸೂರಿಗೆ ಪಣ:** ಈ ಕುರಿತು ಪ್ರತಿಕ್ರಿಯೆ ನೀಡಿರುವ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ನಗರವನ್ನು ಡ್ರಗ್ಸ್ ಮುಕ್ತ ಮಾಡಲು ಪಣ ತೊಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ನಗರದ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದ ಮನೆಗಳು, ಅಂಗಡಿ–ಮುಂಗಟ್ಟುಗಳು, ಶೆಡ್‌ಗಳ ಮೇಲೆ ದಿಢೀರ್ ದಾಳಿ ಮಾಡಿ ತಪಾಸಣೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಡ್ರಗ್ಸ್ ಮಾರಾಟಗಾರರು, ದಾಸ್ತಾನುದಾರರು, ಸಾಗಾಣಿಕೆದಾರರು ಹಾಗೂ ಗ್ರಾಹಕರು (ಡ್ರಗ್ಸ್ ಸೇವನೆ ಮಾಡುವವರು) ಹಾಗೂ ಪ್ರೋತ್ಸಾಹಿಸುವವರನ್ನು ಗುರಿಯಾಗಿಸಿಕೊಂಡು ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದೇವೆ ಎಂದು ಹೇಳಿದರು.

ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಲು ಪೊಲೀಸರ ಕೈಯ್ಯಲ್ಲಿ ಮಾತ್ರವೇ ಸಾಧ್ಯವಿಲ್ಲ. ಪೊಲೀಸರ ಜೊತೆಗೆ ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳು ಕೂಡ ಬೆಂಬಲ ನೀಡಬೇಕು. ಈ ಹಿನ್ನೆಲೆಯಲ್ಲಿ ಮಾದಕ ವಸ್ತು ಮುಕ್ತ ಮಾಡಲು ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಪಾತ್ರ ಕೂಡ ಬಹಳ ಮುಖ್ಯವಾಗಿದೆ ಎಂದರು. ಮನೆಗಳಲ್ಲಿ ಮಕ್ಕಳ ವರ್ತನೆ, ನಡವಳಿಕೆಗಳನ್ನು ■ 6ನೇ ಪುಟಕ್ಕೆ

### ಮೈಸೂರಲ್ಲಿ 17 ಲಕ್ಷ ಮೌಲ್ಯದ ಹೈಡ್ರೋ ಗಾಂಜಾ ವಶ



ಮೈಸೂರಿನ ಸಿಸಿಬಿ ಪೊಲೀಸರು ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿದ ವೇಳೆ ವಶಪಡಿಸಿಕೊಂಡಿರುವ ಹೈಡ್ರೋ ಗಾಂಜಾ

ಹೈಡ್ರೋ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮೈಸೂರು ನಗರದ ವಾಸಿಗಳಾದ ಅಫ್ತಾಫ್ ಅಲಿ ಬೇಗಂ ಹಾಗೂ ಪ್ರತಾಪ್ ಕುಮಾರ್ ಬಂಧಿತ ಆರೋಪಿಗಳಾಗಿದ್ದಾರೆ. ಆರೋಪಿಗಳಿಂದ 17 ಲಕ್ಷ ರೂಪಾಯಿ ಮೌಲ್ಯದ ಹೈಡ್ರೋ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಹೈಡ್ರೋ ಫೋನಿಕ್ ಕಳೆ ಅಥವಾ ಹೈಡ್ರೋ ವೀಡ್ ವಿಧಾನದಿಂದ ಈ ಇಬ್ಬರು ಹೈಡ್ರೋ ಗಾಂಜಾವನ್ನು ತಯಾರಿಸುತ್ತಿದ್ದರು.

ಮೈಸೂರಿನ ನಾಯ್ಡು ನಗರದ ಮನೆಯೊಂದರ ಮೇಲೆ ದಾಳಿ ಮಾಡಿದ ಸಿಸಿಬಿ ಪೊಲೀಸರು ಹೈಡ್ರೋ ಗಾಂಜಾ ತಯಾರಿಸುತ್ತಿದ್ದ ಇಬ್ಬರಿಗೆ ಕೋಳ ತೊಡಿಸಿದ್ದಾರೆ. ಇವರಿಂದ 17 ಲಕ್ಷ ರೂಪಾಯಿ ಮೌಲ್ಯದ 176 ಗ್ರಾಂ ಹೈಡ್ರೋ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಎನ್‌ಡಿಪಿಎಸ್ ಕಾಯ್ದೆಯಡಿ ನರಸಿಂಹರಾಜ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಹಿರಿಯ ನಾಗರಿಕರಿಗೆ ಸನ್ಮಾನ



ಮೈಸೂರಿನ ಜಯಲಕ್ಷ್ಮೀಪುರಂನ ಶ್ರೀ ಸರಸ್ವತಿ ಸಮುದಾಯ ಭವನದಲ್ಲಿ ಶುಕ್ರವಾರ ಹಿರಿಯ ನಾಗರಿಕರ ಮಂಡಳಿ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಹಿರಿಯ ನಾಗರಿಕರನ್ನು ಸನ್ಮಾನಿಸಿ, ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

## ಡ್ರಗ್ಸ್ ಮುಕ್ತ ಕರ್ನಾಟಕ ಸಂದೇಶ




ಮೈಸೂರಿನ ಮಾನಸ ಗಂಗೋತ್ರಿಗೆ ಆಗಮಿಸಿದ ಪರಿವರ್ತನಾ ಟ್ರಸ್ಟ್ ಬೆಂಗಳೂರು ಅವರ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನದ ಸಾಮಾಜಿಕ ಸಂದೇಶ ವಾಹನವನ್ನು ದಲಿತ ವಿದ್ಯಾರ್ಥಿ ಒಕ್ಕೂಟದ ವಿದ್ಯಾರ್ಥಿ ಮುಖಂಡ ಕೃಷ್ಣಮೂರ್ತಿ ಗಣಿಗನೂರ್ ಸ್ವಾಗತಿಸಿದರು. ನಮ್ಮ ಸಮಾಜವನ್ನು ಡ್ರಗ್ಸ್ ಮುಕ್ತವನ್ನಾಗಿ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪಣ ತೊಡುವಂತೆ ಮನವಿ ಮಾಡಿದರು. ಈ ವೇಳೆ ಉಪನ್ಯಾಸಕ ಹೆಚ್.ಪಿ.ಮಂಜು, ಸಂಶೋಧಕರ ಸಂಘದ ಮಾಜಿ ಅಧ್ಯಕ್ಷ ಶಿವಶಂಕರ್, ಸಂಶೋಧಕರಾದ ಮರಳ್ಳಿ ಪಿ.ಮಹೇಶ್, ನಾಗೇಂದ್ರ ಜೆ.ಅರೇಪುರ, ಚೇತನ್ ಚಕ್ರವರ್ತಿ, ಮಲ್ಲೇಶ್, ಜೀವನ್, ಮಣಿಕಂಠ, ಗೌತಮ್ ಗುಂಡ್ಲುಪೇಟೆ ಸೇರಿದಂತೆ ಮೈಸೂರು ವಿವಿ ವಿದ್ಯಾರ್ಥಿಗಳು ಹಾಜರಿದ್ದರು.

## ಗ್ರಾಮಸ್ಥರ ಸಂಭ್ರಮದ ನಡುವೆ ಶಾಸಕ ಜಿ.ಟಿ.ದೇವೇಗೌಡರಿಂದ

# ದೊಡ್ಡಕಾನ್ಯ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

▸ ಗ್ರಾಮದಲ್ಲಿ ಒಗ್ಗಟ್ಟಿದ್ದರೆ ಅಭಿವೃದ್ಧಿ ಸಾಧ್ಯ ▸ ಭೂಮಿ ಮಾರಿ, ಸಾಲ ಮಾಡಿ ಮದುವೆ ಮಾಡದೇ ಸರಳ ವಿವಾಹ ಮಾಡಿ



ಗ್ರಾಮಸ್ಥರ ಕೋರಿಕೆಯಂತೆ ಶಾಸಕ ಜಿ.ಟಿ.ದೇವೇಗೌಡರು ಎತ್ತಿನಗಾಡಿಯಲ್ಲಿ ಮೆರವಣಿಗೆ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ಬಂದರು.

ಮೈಸೂರು, ಡಿ.12(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೊಡ್ಡಕಾನ್ಯ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಶುಕ್ರವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಜನರ ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರಿನ ಘಟಕಗಳು ಅತ್ಯವಶ್ಯಕವಾಗಿವೆ. ಈ ನಿಟ್ಟಿನಲ್ಲಿ ಗ್ರಾಮಸ್ಥರ ಮನವಿ ಮೇರೆಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಲಾಗಿದ್ದು, ಘಟಕದ ಸದುಪಯೋಗ ಪಡೆದುಕೊಳ್ಳುವುದರ ಜೊತೆಗೆ ಗ್ರಾಮಸ್ಥರೆಲ್ಲರೂ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಆಶಿಸಿದರು.




ದೊಡ್ಡಕಾನ್ಯ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಶುಕ್ರವಾರ ಉದ್ಘಾಟಿಸಿದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ ಕಾರ್ಯಕ್ರಮದಿಂದಾಗಿ ದೊಡ್ಡಕಾನ್ಯ ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆ ಮಾಡಿದೆ. ಇದೇ ರೀತಿಯ ಸಂಭ್ರಮ, ಒಗ್ಗಟ್ಟು ಗ್ರಾಮದಲ್ಲಿ ಸದಾ ಇರಬೇಕು. ಮಹಾತ್ಮ ಗಾಂಧೀಜಿಯವರು ಕಂಡ ಕನಸಿನಂತೆ ಹಳ್ಳಿಗಳು ಸುಸ್ಥಿರವಾಗಿ ಅಭಿವೃದ್ಧಿ ಹೊಂದಬೇಕು. ಈ ನಿಟ್ಟಿನಲ್ಲಿ 13 ಕೋಟಿ ರೂ. ವೆಚ್ಚದಲ್ಲಿ ಜೆ.ಪಿ.ನಗರದಿಂದ ದೊಡ್ಡಕಾನ್ಯ ಗ್ರಾಮಕ್ಕೆ ಸೇರುವ ಮಾರ್ಗದ ರಸ್ತೆ ಅಭಿವೃದ್ಧಿ ಮಾಡಲಾಗಿದೆ. 60 ಲಕ್ಷ ರೂ. ವೆಚ್ಚದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ, 10 ಲಕ್ಷ ರೂ. ವೆಚ್ಚದಲ್ಲಿ ಬಸವ ಭವನ ನಿರ್ಮಿಸಿ, ಗ್ರಾಮದ ಎಲ್ಲಾ ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಅಭಿವೃದ್ಧಿ ಮಾಡಲಾಗಿದೆ. ಮುಂದೆಯೂ ಗ್ರಾಮದ ಅಭಿವೃದ್ಧಿಗಾಗಿ ಕೆಲಸ ಮಾಡಲಿದ್ದೇನೆ ಎಂದು ಭರವಸೆ ನೀಡಿದರು.

**ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ:** ಗ್ರಾಮಗಳ ಅಭಿವೃದ್ಧಿ ಜೊತೆಗೆ ಗ್ರಾಮೀಣ ಪ್ರದೇಶದ ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆದು ಅಧಿಕಾರಿಗಳಾಗಬೇಕು. ನಮಗೆ ತಿಳಿದಿರುವ ಸಾಧಕರೆಲ್ಲರೂ ಸರ್ಕಾರಿ ಶಾಲೆಯಿಂದ ಬಂದವರೆ. ಆದ್ದರಿಂದ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುವ ಬದಲು ಸರ್ಕಾರಿ ಶಾಲೆಗಳಿಗೆ ಸೇರಿಸಿ. ಸುಸಂಸ್ಕೃತ ಶಿಕ್ಷಣ ಕೊಡಿಸಿ, ಉತ್ತಮ ಪ್ರಜೆಗಳನ್ನಾಗಿ ಮಾಡಬೇಕಿದೆ. ಹಾಗೆಯೇ ಮಹಿಳೆಯರು ಉದ್ಯಮಿಗಳಾಗಿ ಹೊರಹೊಮ್ಮಬೇಕು ಎಂದು ತಿಳಿಸಿದರು.

> **ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ನನಗೆ ಮುಖ್ಯವೇ ಹೊರತು ಬೇರೇನೂ ಅಲ್ಲ. ಕ್ಷೇತ್ರದ ಜನರು ತೋರುವ ಪ್ರೀತಿ, ಅಭಿಮಾನ ನನ್ನ ಶಕ್ತಿಯನ್ನು ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ಪ್ರತಿ ಮನೆಗೂ ಕುಡಿಯುವ ನೀರನ್ನು ಒದಗಿಸಲಾಗುವುದು.**
> – **ಜಿ.ಟಿ.ದೇವೇಗೌಡ**, *ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ*

ನಾಲ್ಕು ಗೋಡೆಗಳ ಮಧ್ಯೆ ಹೆಣ್ಣು ಇರಬೇಕು ಎನ್ನುವ ಕಾಲ ಹೋಗಿದೆ. ಮಹಿಳೆಯರಿಗೂ ಎಲ್ಲಾ ಕ್ಷೇತ್ರದಲ್ಲಿಯೂ ಸಮಾನ ಹಕ್ಕು ನೀಡಬೇಕು ಎಂಬುದು ಸಾಬೀತಾಗಿದೆ. ಹಾಗಾಗಿ ಆಸ್ತಿ ಮಾರಿ ಮಗ ಅಥವಾ ಮಗಳ ಮದುವೆ ಮಾಡಿ, ಆಸ್ತಿ ಕಳೆದುಕೊಳ್ಳುವ ಬದಲು ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿ. ನಾನು ಕೂಡ ನನ್ನ ಮಗ ಮತ್ತು ಮಗಳ ಮದುವೆಯನ್ನು ತಿರುಪತಿಯಲ್ಲಿ ಸರಳವಾಗಿ ಮಾಡಿದೆ, ಹಾಗೆಯೇ ಸರಳವಾಗಿ ಮದುವೆ ಮಾಡಿ. ಇರುವ ಆಸ್ತಿಯನ್ನು ಮಕ್ಕಳಿಗೆ ಬರೆದರೆ ಅವರು ಕೂಡ ನೆಮ್ಮದಿಯಾಗಿ ಜೀವನ ನಡೆಸುತ್ತಾರೆ. ಎಲ್ಲರೂ ಆರೋಗ್ಯವಾಗಿದ್ದರೆ ಕುಟುಂಬ, ಎಲ್ಲಾ ಕುಟುಂಬಗಳು ಆರೋಗ್ಯವಾಗಿದ್ದರೆ ಗ್ರಾಮ. ಎಲ್ಲಾ ಗ್ರಾಮಗಳು ಆರೋಗ್ಯವಾಗಿದ್ದರೆ ಸಮಾಜವೂ ಆರೋಗ್ಯವಾಗಿರುತ್ತದೆ ಎಂದು ತಿಳಿ ಹೇಳಿದರು.

**ಭವ್ಯ ಸ್ವಾಗತ:** ದೊಡ್ಡಕಾನ್ಯ ಗ್ರಾಮಕ್ಕೆ ಶಾಸಕ ಜಿ.ಟಿ.ದೇವೇಗೌಡ ಅವರು ಆಗಮಿಸುತ್ತಿದ್ದಂತೆ ಗ್ರಾಮಸ್ಥರಿಂದ ಭವ್ಯ ಸ್ವಾಗತ ನೀಡಲಾಯಿತು. ಬಳಿಕ ಹಳ್ಳಿ ಸೊಗಡಿನೊಂದಿಗೆ ಸಿಂಗಾರಗೊಂಡಿದ್ದ ಎತ್ತಿನಗಾಡಿ ಹತ್ತಿದ ಜಿ.ಟಿ.ದೇವೇಗೌಡರು, ಸ್ವತಃ ಕಾರ್ಯಕ್ರಮದ ವೇದಿಕೆ ಸ್ಥಳದವರೆಗೆ ಎತ್ತಿನಗಾಡಿ ಓಡಿಸಿ, ನೋಡುಗರನ್ನು ನಿಬ್ಬೆರಗಾಗಿಸಿದರು.

ಟಿವಿಎಸ್ ಕಂಪನಿಯ ಶಶಿಕಾಂತ್, ದೊಡ್ಡಕಾನ್ಯ ಗ್ರಾಮದ ಮುಖಂಡ ಕೃಷ್ಣ, ಪಿಡಿಓ ಶಿವಕುಮಾರ್, ಗ್ರಾಪಂ ಅಧ್ಯಕ್ಷರಾದ ಶಿವರುದ್ರಮ್ಮ, ಉಪಾಧ್ಯಕ್ಷ ಅಬ್ದುಲ್ ರೆಹಮಾನ್, ಗ್ರಾಮಸ್ಥರಾದ ಉಮಾಪತಿ, ಡೈರಿ ಮಹದೇವಪ್ಪ, ಮಹದೇವಯ್ಯ, ಶಿವನಂಜು, ರಾಮಯ್ಯ, ಉಮೇಶ್, ಶಿವಯ್ಯ, ವಿಜಯಮ್ಮ, ಮಹೇಶ್, ನಂಜಪ್ಪ, ಬಸವರಾಜು, ಅಚಲ, ವಿಜಯಮಣ್ಣಿ, ನಂಜುಂಡಸ್ವಾಮಿ, ಪಾಪಣ್ಣ, ಶ್ರೀಕಂಠಚಾರ್, ಮಹದೇವಶೆಟ್ಟಿ, ಗೀತಾ, ಪೃಥ್ವಿ, ವಿಜಯಕುಮಾರ್ ಮತ್ತಿತರರಿದ್ದರು.

## ಕೆ.ಯಶಿಕಾಗೆ 'ಮೈಸೂರು ರತ್ನ'



ಮೈಸೂರು, ಡಿ.12(ಎಂಕೆ)– ಮೈಸೂರಿನ ಚೆಲುವಾಂಬ ಅಗ್ರಹಾರದ ಚಿಲ್ಡ್ರನ್ಸ್ ಅಂಡ್ ಕಲ್ಚರಲ್ ಅಕಾಡೆಮಿ ಮತ್ತು ಅರೋರ ಎಜುಕೇಷನಲ್ ಟ್ರಸ್ಟ್ ವಾರ್ಷಿಕೋತ್ಸವದ ಅಂಗವಾಗಿ ನೀಡುವ 'ಮೈಸೂರು ರತ್ನ' ಪ್ರಶಸ್ತಿಗೆ ಸಿದ್ಧಾರ್ಥನಗರದ ಜೆಎಸ್‌ಎಸ್‌ಎಸ್ ಗೀತಾ ಭಾರತಿ ಶಾಲೆಯ 3ನೇ ತರಗತಿ ವಿದ್ಯಾರ್ಥಿನಿ ಹಾಗೂ ಕೆ.ಆರ್.ರೂಪ ಮತ್ತು ಡಿ.ಕಿಶೋರ್ ದಂಪತಿ ಪುತ್ರಿ ಕೆ.ಯಶಿಕಾ ಭಾಜನರಾಗಿದ್ದಾರೆ. ಡಿ.12 ರಂದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ನಂಜೇಗೌಡನದೊಡ್ಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದು ಟ್ರಸ್ಟ್ ಅಧ್ಯಕ್ಷೆ ಯಶೋಧ ನಾರಾಯಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೇಕೆದಾಟು ಅಣೆಕಟ್ಟೆ ತ್ವರಿತ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಉನ್ನತ ಮಟ್ಟದ ಸಮಿತಿ ರಚನೆ

ಬೆಂಗಳೂರು, ಡಿ.12(ಕೆಎಂಶಿ)– ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಸಮೀಪ ನಿರ್ಮಾಣಗೊಳ್ಳಲಿರುವ ಜಲಾಶಯ ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿ, ಆದೇಶಿಸಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತದ ನಿರ್ದೇಶಕರ ಅಧ್ಯಕ್ಷತೆಯಲ್ಲಿ 31 ಸದಸ್ಯರ ತಂಡ ರಚನೆಗೊಂಡಿದೆ.

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡಿನ ತಕರಾರು ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದ ಬೆನ್ನಲ್ಲೇ ಕರ್ನಾಟಕ ಸರ್ಕಾರ ಈ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಮುಗಿಸಲು ಮುಂದಾಗಿದೆ.



ಯೋಜನೆಗೆ ಸಂಬಂಧಪಟ್ಟಂತಹ ಎಲ್ಲಾ ತಾಂತ್ರಿಕ ದಾಖಲೆಗಳನ್ನು ಈ ಸಮಿತಿ ಸುಪರ್ದಿಗೆ ನೀಡುವಂತೆ ಮತ್ತು ಇದರ ಮೇಲ್ವಿಚಾರಣೆಯನ್ನು ಪೂರ್ಣಗೊಳಿಸುವಂತೆ ಆದೇಶಿಸಿದೆ.

ನಿರ್ದೇಶಕರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿರುವ ಸಮಿತಿಯಲ್ಲಿ ಉಪಮುಖ್ಯ ಇಂಜಿನಿಯರ್ ಒಬ್ಬರು, ಮೂವರು ತಾಂತ್ರಿಕ ಸಹಾಯಕರು, 6 ಸಹಾಯಕ ಇಂಜಿನಿಯರ್, ತಲಾ ಒಬ್ಬರು ಸಹಾಯಕ ಆಡಳಿತಾಧಿಕಾರಿ, ಲೆಕ್ಕಾಧೀಕ್ಷಕರು, ಅಧೀಕ್ಷಕರು, ಪ್ರಥಮ ದರ್ಜೆ ಲೆಕ್ಕಸಹಾಯಕರು, ದ್ವಿತೀಯ ದರ್ಜೆ ಲೆಕ್ಕಸಹಾಯಕರು, ಶೀಘ್ರ ಲಿಪಿಗಾರರು, ಕಾವಲುಗಾರ ಹಾಗೂ ಒಬ್ಬ ಚಾಲಕ ಇರುತ್ತಾರೆ.

ಅಲ್ಲದೆ, ಕಚೇರಿ ಕೆಲಸಕ್ಕಾಗಿ 12 ಮಂದಿಯನ್ನು ನಿಯೋಜಿಸಿ ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇನ್ನು ಮುಂದೆ ಎಲ್ಲಾ ಪತ್ರ ವ್ಯವಹಾರಗಳು ಇನ್ನಿತರ ದಾಖಲೆಗಳನ್ನು ನಿರ್ದೇಶಕರೇ ಮಾಡಬೇಕು ಮತ್ತು ಅವರ ಸುಪರ್ದಿಗೆ ನೀರಾವರಿ ಇಲಾಖೆ ಪೂರ್ಣ ಕಡತಗಳನ್ನು ನೀಡುವಂತೆ ಸೂಚಿಸಿದೆ. ಇದಕ್ಕೆ ತಗಲುವ ಪೂರ್ಣ ವೆಚ್ಚಗಳನ್ನು ಕಾವೇರಿ ನೀರಾವರಿ ನಿಗಮ ನೀಡಬೇಕು ಎಂದು ತಿಳಿಸಲಾಗಿದೆ.

## ಜೆಎಸ್‌ಎಸ್ ದಂತ ಆಸ್ಪತ್ರೆಯಿಂದ ವಿಶೇಷಚೇತನ ಮಕ್ಕಳಿಗೆ ಆರೋಗ್ಯ ತಪಾಸಣೆ

ಮೈಸೂರು, ಡಿ.12–ಮೈಸೂರು ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ಡಿಸೆಂಬರ್ 7ರಂದು ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ಸ್‌ರವರ ಇನ್ಸ್‌ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ವಿಶೇಷಚೇತನ ಮಕ್ಕಳಿಗೆ ಮತ್ತು ಪೋಷಕರಿಗೆ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿತ್ತು.

ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ. ಬಿ.ನಂದಲಾಲ್, ಅನುಭವಿ ದಂತ ತಜ್ಞರ ಹೊಂದಿರುವ ಜೆಎಸ್‌ಎಸ್ ದಂತ ಆಸ್ಪತ್ರೆ ಕಳೆದ 35 ವರ್ಷಗಳಿಂದ ಅತ್ಯುತ್ತಮವಾದ ಸೇವೆ ನೀಡುತ್ತಿದೆ. ಮಕ್ಕಳು ಬಾಯಿಯ ಆರೋಗ್ಯವನ್ನು ಕಾಪಾಡಿಕೊಳ್ಳಲು 'ಗೋಲ್ಡನ್ ರೂಲ್ಸ್' ಪಾಲಿಸಬೇಕು. ವಯಸ್ಸಿಗೆ ತಕ್ಕ ಟೂತ್‌ಬ್ರಶ್ ಮತ್ತು ಫ್ಲೋರೈಡ್ ಹೊಂದಿರುವ ಟೂತ್‌ಪೇಸ್ಟ್ ಬಳಸಬೇಕು. ದಿನಕ್ಕೆ ಎರಡು ಬಾರಿ ಕನಿಷ್ಠ ಎರಡು ನಿಮಿಷಗಳ ಕಾಲ ಬ್ರಷ್ ಮಾಡಬೇಕು. ಉಪಾಹಾರದೊಂದಿಗೆ ಸಿಹಿ ಪದಾರ್ಥಗಳನ್ನು ಸೇವಿಸಬಾರದು. ಊಟದ ವೇಳೆಗೆ ಮಾತ್ರವೇ ಸಿಹಿ ತಿನ್ನುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಹಲ್ಲು ಕೊಳೆತದ ಅಪಾಯವನ್ನು ಕಡಿಮೆ ಮಾಡಬಹುದು. ಮಕ್ಕಳಲ್ಲಿ ಉಂಟಾಗುವ ದಂತ ಸಮಸ್ಯೆಗಳಿಗೆ ಕೂಡಲೇ ದಂತ ಚಿಕಿತ್ಸಕರನ್ನು ಭೇಟಿ ಮಾಡಿ ಚಿಕಿತ್ಸೆ ಕೊಡಿಸುವುದರಿಂದ ಹೆಚ್ಚಿನ ಅಪಾಯವನ್ನು ತಡೆಗಟ್ಟಬಹುದು ಎಂದು ಹೇಳಿದರು.

ಪುತ್ತೂರು ದೈಪಿಲ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಆರ್.ಗೌಡ ಅವರು ಐನ್‌ಸ್ಟೀನ್ ಮತ್ತು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವಗಳನ್ನು ಉದಾ ಹರಿಸುತ್ತಾ ಮಕ್ಕಳ ಸಕಾರಾತ್ಮಕ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಹೆಚ್ಚಿನದಾಗಿರುತ್ತದೆ. ವಿಶೇಷ ಚೇತನ ಮಕ್ಕಳನ್ನು ಅತ್ಯಂತ ಕಾಳಜಿಯಿಂದ ಸಲಹಬೇಕಾಗುತ್ತದೆ ಎಂದರು.

ಇನ್ಸ್‌ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳು ಹಾಗೂ ಖಜಾಂಚಿ ಎ.ದಿನಕರ ಶೆಟ್ಟಿಯವರು ಸಂಸ್ಥೆಯ ಸಾಧನೆಗಳ ಬಗ್ಗೆ ತಿಳಿಸಿ, ಜೆಎಸ್‌ಎಸ್ ಸಂಸ್ಥೆಗಳ ಸೇವೆಯನ್ನು ಶ್ಲಾಘಿಸಿದರು.

ಶಿಬಿರದಲ್ಲಿ ಒಟ್ಟು 100ಕ್ಕೂ ಹೆಚ್ಚು ಮಕ್ಕಳು ಮತ್ತು ಪೋಷಕರಿಗೆ ದಂತ ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಯಿತು. ಜೆಎಸ್‌ಎಸ್ ದಂತ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ. ರಾಘವೇಂದ್ರ ಶಾನಭೋಗ್‌ರವರು ವಿಶೇಷ ಕ್ಲಿನಿಕ್ ಕುರಿತು ಪೋಷಕರಿಗೆ ವಿವರಿಸಿದರು. ವೈದ್ಯರುಗಳಾದ ಡಾ. ಪ್ರಭುಲಿಂಗಸ್ವಾಮಿ, ಡಾ. ಮೌರ್ಯ, ಡಾ. ಬಿದ್ಯಾಲಕ್ಷ್ಮೀ, ಡಾ. ಶಾಲಿನಿ ಪ್ರಕಾಶ್, ಡಾ. ಮಧುಮಿತ, ಡಾ. ಮಾನಿಕ್, ಡಾ. ದೇಬೋಸ್ಮಿತ, ಡಾ. ಅಭಿನಯ, ಡಾ. ಕೊಚುತೆರಸಿ ಹಾಗೂ ಸಿಬ್ಬಂದಿ ವರ್ಗದವರು ತಪಾಸಣಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಪರಿಮಳ ಮೂರ್ತಿಯವರು ಪ್ರಾರ್ಥಿಸಿ, ಸ್ವಾಗತಿಸಿದರು. ಶ್ರೀಮತಿ ಅಶ್ವಿನಿ ವಂದಿಸಿದರು. ಸ್ಪಂದನ ಸಂಸ್ಥೆಯ ಎಂ.ಜಯಶಂಕರ್ ಕಾರ್ಯಕ್ರಮ ನಿರೂಪಿಸಿದರು.

## ನಿಧನ

### ಶ್ರೀಮತಿ ಇಂದಿರಮ್ಮ



ಮೈಸೂರು, ಡಿ.12(ಎಂಕೆ)– ಮೈಸೂರಿನ ವಿದ್ಯಾರಣ್ಯಪುರಂ 2ನೇ ಮುಖ್ಯ ರಸ್ತೆ ನಿವಾಸಿ ವಿಠಲ್ ಅವರ ಪತ್ನಿ ಶ್ರೀಮತಿ ಇಂದಿರಮ್ಮ(75) ಅವರು ತೀವ್ರ ಅನಾರೋಗ್ಯದಿಂದಾಗಿ ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಓರ್ವ ಪುತ್ರಿ, ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಸೇರಿ ಇಬ್ಬರು ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಚಂದ್ರಶೇಖರ್



ಮೈಸೂರು, ಡಿ.12– ಮೈಸೂರಿನ ರಮಾಬಾಯಿನಗರದ ನಿವಾಸಿ ಬಿ.ಚಂದ್ರಶೇಖರ್(62) ಗುರುವಾರ ನಿಧನರಾದರು.

ಮೃತರು ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

### ಟಿ.ಎನ್.ನರಸೇಗೌಡ



ಮೈಸೂರು, ಡಿ.12– ಬೆಂಗಳೂರು ನಿವಾಸಿ, ಮೈಸೂರು ಸಿಎಆರ್ ಮೀಸಲು ಪಡೆಯ ನಿವೃತ್ತ ಉಪನಿರೀಕ್ಷಕ ಟಿ.ಎನ್.ನರಸೇಗೌಡರು(80) ಶುಕ್ರವಾರ ನಿಧನರಾದರು.

ಮೃತರು ಪುತ್ರರಾದ ಲೋಕೇಶ್, ರಮೇಶ್ ಹಾಗೂ ಕುಟುಂಬ ವರ್ಗ, ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬೆಂಗಳೂರಿನ ಯಲಹಂಕದಲ್ಲಿ ಮತ ಪದ್ಧತಿಯಂತೆ ನೆರವೇರಲಿದೆ ಎಂದು ಅವರ ಪುತ್ರ ಲೋಕೇಶ್ ತಿಳಿಸಿದ್ದಾರೆ. ಅವರ ನಿಧನಕ್ಕೆ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಕಾರ್ಯದರ್ಶಿ ಬಸಪ್ಪ ಸಾಲುಂಡಿ ಸಂತಾಪ ಸೂಚಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

13.12.2025 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಶ್ರೇಯಾ ಹಾಗೂ ಎ.ಎನ್. ಶೀಲಾ, ವ್ಯಾಖ್ಯಾನ–ಡಾ. ಜಿ. ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ.ಕೆ. ರಾಮನ್–ಕೊಳಲುವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ಕುವೆಂಪುನಗರದ ಶ್ರೀ ಗುರು ಕಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ನಿರುತ್ತರ ಕುಮಾರ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ:ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಆಲತ್ತೂರು ಗ್ರಾಮದ ಕೃಷಿಕ ದಂಪತಿ ಎಂ. ಶಿವಮೂರ್ತಿ ಹಾಗೂ ಜಿ. ಶೃತಿ, ಪ್ರಸ್ತುತಿ – ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ರಶ್ಮಿ ಚೌದರಿ, ಹಾಡುಗಾರಿಕೆ – ಖಯಾಲ್

■ **ಸದ್ವಿದ್ಯಾ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್ :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಡಾ. ಎನ್. ನಾಗರಾಜ, ಗೌರವ ಅತಿಥಿಗಳು : ಏಕಲವ್ಯ ಪ್ರಶಸ್ತಿ ಪುರಸ್ಕೃತ ಆಕಾಶ್ ಆರಾಧ್ಯ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ಸ್ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 8.30ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ :** ಮೂಳೆ ಸಾಂದ್ರತೆ ಪರೀಕ್ಷೆ, ಉಚಿತ ಆಯುರ್ವೇದ ಮತ್ತು ಯೋಗ ಸಲಹಾ ಶಿಬಿರ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಹುಟ್ಟಿನಿಂದ 16 ವರ್ಷ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಮಕ್ಕಳಿಗೆ ಸ್ವರ್ಣಪ್ರಾಶನ ಕಾರ್ಯಕ್ರಮ. ಕಿಟಿಬ ಕುಷ್ಠ (Psoriasis), ಋತು ಚಕ್ರದ ಸಮಸ್ಯೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್ ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯುಪ್ರೆಷರ್ ಸುಜೋಕ್ ಕಪ್ಪಿಂಗ್ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿ ಮಠ, ವಿ.ವಿ. ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉತ್ಸವ, ಬೆಳಗ್ಗೆ 9.30 ರಿಂದ ಕೃಷ್ಣಮೂರ್ತಿ ಮತ್ತು ಮಧುರಗಾನ ರಮೇಶ್ ಅವರಿಂದ ಭಕ್ತಿಗೀತೆಗಳು, ಸಂಜೆ 5.30 ರಿಂದ ಗಾಯತ್ರಿ ಮಹಿಳಾ ಸಮಾಜದವರಿಂದ ಭಜನೆ, ಸಂಜೆ 7 ರಿಂದ ಸುಮಂತ್ ವಶಿಷ್ಠ ವೃಂದದವರಿಂದ ಭಕ್ತಿಸಂಗೀತ, ಸ್ಥಳ: ಅರಮನೆ ಕೋಟೆ ಉತ್ತರ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ.

■ **ಮಹಾಬೋಧಿ ಶಾಲೆ :** ಚಿಗುರು ಹಬ್ಬ, ಶಾಲಾ ವಾರ್ಷಿಕೋತ್ಸವ, ಸ್ಥಳ: ಕಲಾಮಂದಿರ, ಬೆಳಗ್ಗೆ 8.30ಕ್ಕೆ

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಿಜಿ ಸ್ಟೂಡೆಂಟ್ಸ್ ಫೋರಂ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಅಂಕಣಕಾರ ರಂಗಸ್ವಾಮಿ ಮೂಕನಹಳ್ಳಿ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಜನರಲ್ ಇನ್ಶೂರೆನ್ಸ್ ಎಂಪ್ಲಾಯೀಸ್ ಆಲ್ ಇಂಡಿಯಾ ಅಸೋಸಿಯೇಷನ್, ಮೈಸೂರು ಘಟಕ :** 5ನೇ ಜಿಲ್ಲಾ ಸಮ್ಮೇಳನ, ಅಧ್ಯಕ್ಷತೆ : ಅಧ್ಯಕ್ಷ ಕಾಂ. ಎನ್. ಶ್ರೀಕಾಂತ, ಉಪಸ್ಥಿತರು : ಜಿಲ್ಲಾ ಕಾರ್ಯದರ್ಶಿ ಎನ್. ಸೋಮಣ್ಣ, ಕಾರ್ಯಾಧ್ಯಕ್ಷ ಆರ್. ಶ್ರೀನಿವಾಸಮೂರ್ತಿ, ಪ್ರಧಾನ ಕಾರ್ಯದರ್ಶಿ ಎಸ್. ರಮೇಶ್, ಪ್ರಾದೇಶಿಕ ಕಾರ್ಯದರ್ಶಿ ಆರ್. ಭರತ್, ಸ್ಥಳ: ಹೋಟೆಲ್ ಗುರು ರೆಸಿಡೆನ್ಸಿ, ಬೆಳಗ್ಗೆ 10ಕ್ಕೆ.

■ **ಸಮಾನ ಮನಸ್ಕರ ವೇದಿಕೆ :** ಧರ್ಮಸ್ಥಳ ಪ್ರಕರಣ–ಒಂದು ಸಾಮಾಜಿಕ ಅವಲೋಕನ ಕುರಿತು ವಿಚಾರ ಸಂಕಿರಣ, ಉಪಸ್ಥಿತರು : ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ್ ನಾಯಕ್, ರಂಜನ್‌ರಾವ್, ಸಾಮಾಜಿಕ ಚಿಂತಕ ಡಾ. ಲಕ್ಷ್ಮೀಶ್ ತೋಳ್ಪಾಡಿ, ಎಡಪಂಥೀಯ ಹೋರಾಟಗಾರ ವಿಷ್ಣುಮೂರ್ತಿ, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಡಾ. ಜೆ. ಶಶಿಧರ ಪ್ರಸಾದ್, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಪ್ರಿನ್ಸಿಪಾಲ್ ಟಿ.ಸಿ. ಸುದೀಪ, ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಧರ್ಮದರ್ಶಿ ಜಿ. ರಮೇಶ, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ಹನುಮಂತೋತ್ಸವ ಸಮಿತಿ :** ಮೈಸೂರು ಹನುಮ ಹಬ್ಬ, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಎಂ.ಎ.ಎಸ್.ವಿ.ಎಸ್. ಗುರುಕುಲ ಪದವಿಪೂರ್ವ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮ, ಅಧ್ಯಕ್ಷತೆ : ಮಲ್ಲಾಡಿಹಳ್ಳಿ ಅನಾಥಸೇವಾಶ್ರಮ ವಿಶ್ವಸ್ಥ ಸಮಿತಿ ಅಧ್ಯಕ್ಷ ಡಾ. ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಉದ್ಘಾಟನೆ : ಸಮಿತಿ ಉಪಾಧ್ಯಕ್ಷ ರಾಘವೇಂದ್ರ ಬಿ. ಪಾಟೀಲ, ಮುಖ್ಯ ಅತಿಥಿಗಳು : ಎಸ್.ಕೆ. ಬಸವರಾಜನ್, ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಡಾ. ಎನ್. ಶ್ರೀಕಂಠಮೂರ್ತಿ, ಕಾಲೇಜು ಪ್ರಿನ್ಸಿಪಾಲ್ ಪ್ರೊ. ಪಿ.ಡಿ. ಕನ್ನೀಕರ್, ಉಪಪ್ರಾಂಶುಪಾಲರಾದ ಡಾ. ಬಿ.ಜಿ. ತನುಜಾ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಮಧ್ಯಾಹ್ನ 2.30ಕ್ಕೆ.

■ **ಯಾದವ (ಗೊಲ್ಲರ) ಸಂಘ :** ಗೀತಾ ಜಯಂತಿ ಮಹೋತ್ಸವ, ಸಾಮೂಹಿಕ ಭಗವದ್ಗೀತಾ ಮತ್ತು ವಿಷ್ಣು ಸಹಸ್ರನಾಮ ಪಠಣ ಕಾರ್ಯಕ್ರಮ, ಸ್ಥಳ: ಯಾದವ (ಗೊಲ್ಲರ) ಸಮುದಾಯ ಭವನ, ದಿವಾನ್ಸ್ ರಸ್ತೆ, ಸಂಜೆ 5 ರಿಂದ.

■ **ಶ್ರೀ ಕಾಲಭೈರವ ಬಳಗ ಟ್ರಸ್ಟ್ :** ಶ್ರೀ ಕಾಲಭೈರವ ಜನ್ಮಾಷ್ಟಮಿ ಮತ್ತು ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 4.30 ರಿಂದ ಪ್ರಧಾನ ಉತ್ಸವ (ವರಪೂಜೆ ಮೆರವಣಿಗೆ), ಸಂಜೆ 5.45ಕ್ಕೆ ವೇದ ಬಳಗದಿಂದ ರುದ್ರಪಾರಾಯಣ, ಸಂಜೆ 6.15ಕ್ಕೆ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಸಂಜೆ 6.25ಕ್ಕೆ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ಸಂಜೆ 6.30ಕ್ಕೆ ವಿದ್ವಾನ್ ಹೇಮಚಂದ್ರರಾಜ್ ಅವರಿಂದ ಗಾಯನ, ಸಂಜೆ 7ಕ್ಕೆ ಶಿವಪೂಜೆ (ವರಪೂಜೆ), ರಾತ್ರಿ 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: 1ನೇ ಕ್ರಾಸ್, ಆರ್.ಟಿ.ನಗರ.

■ **ಕನ್ನಡ ಸಂಘ (ಭಾರತೀಯ ಸ್ಟೇಟ್ ಬ್ಯಾಂಕ್):** ಕನ್ನಡ ರಾಜ್ಯೋತ್ಸವ ಹಾಗೂ ಸಂಘದ ವಾರ್ಷಿಕೋತ್ಸವ. ಅಧ್ಯಕ್ಷತೆ:ಎಸ್‌ಬಿಐ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಕೆ.ರಘುಶೆಟ್ಟಿ, **ನಾಟಕ:** 'ದಫೇದಾರ್ ದೇರಣ್ಣ, ಹುಷಾರ್ ಸಿಕ್ಕಿ ಬೀಳ್ತೀರಿ'. ಬಹುಮಾನ ವಿತರಣೆ. ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ. ಸಂಜೆ 5.45ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಾಬಲ್ಸ್ ಆಫ್ ಶ್ರೀರಾಮಕೃಷ್ಣ –11 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಪಿಜಿಎಲ್ ಸಂಸ್ಥಾಪನಾ ವೇದಿಕೆ :** ಸಂಜೆ 6 ರಿಂದ ಸಂಗೀತ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಹಾಗೂ ಕಲಾ ಪೋಷಕರಾದ ಸಿ.ಆರ್. ಹಿಮಾಂಶು ಅವರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ : ಶ್ರೀ ನಾದಬ್ರಹ್ಮ ಸಂಗೀತ ಸಭಾ ಗೌರವ ಕಾರ್ಯದರ್ಶಿ ಕೆ.ಎಸ್.ಎನ್. ಪ್ರಸಾದ್, ಸಂಜೆ 6.30ಕ್ಕೆ ಡಾ. ಸುಕನ್ಯಾ ಪ್ರಭಾಕರ್ ಮತ್ತು ಡಾ. ಸುಮನ ವೇದಾಂತ್ ಅವರಿಂದ ಯುಗಳ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಸಾಧನಾ ಮಂದಿರ, ಮೈಸೂರು :** ಸರಸ್ವತಿ ಪೂಜೆ ಮಾಡುವ ಬಗ್ಗೆ ವಿಶೇಷ ತರಬೇತಿ, ಸ್ವಾಮಿ ಹಂಸಾನಂದ ಅವರಿಂದ. ಸಂಜೆ 6.30 ರಿಂದ ಶ್ರೀರಾಮಪುರ 2ನೇ ಹಂತದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಸಂಜೆ 7 ರಿಂದ ಮೈಸೂರು ಯೋಗಾಲಯ, ವಿವೇಕಾನಂದ ನಗರ ಎಸ್‌ಬಿಎಂ ಲೇಔಟ್.

■ **ಸಮತೆಂತೋ ರಂಗ ತಂಡ :** ಸಮತೆಂತೋ ರಂಗ ಸಂಭ್ರಮ, ಬೆಂಗಳೂರಿನ ಕ್ರಿಯೇಟಿವ್ ಥಿಯೇಟರ್ ಕಲಾವಿದರಿಂದ ಗುಂಡಾಯಣ ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

■ **ಮೈಸೂರು ಇಂಗ್ಲೀಷ್ ಥಿಯೇಟರ್ ಫೆಸ್ಟಿವಲ್ :** ವೀಮೂವ್ ಥಿಯೇಟರ್ ಕಲಾವಿದರಿಂದ ಊ ಕಿಲ್ಡ್ ಅಗಾಥ? ನಾಟಕ ಪ್ರದರ್ಶನ, ಕಥೆ : ರಂಗರಾಜ್ ಭಟ್ಟಾಚಾರ್ಯ–ಪವನ್ ಶರ್ಮ, ನಿರ್ದೇಶನ : ಪವನ್ ಶರ್ಮ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6.30 ರಿಂದ.

■ **ಕಲಾಸುರುಚಿ, ಕುತೂಹಲಿ–ಕನ್ನಡ :** ಸೈನ್ಸ್ ಸಂಜೆ ಕಾರ್ಯಕ್ರಮ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ವಿನಾಯಕ ಪ್ರಸನ್ನ ಎನ್ ಹೆಗಡೆ ಅವರಿಂದ ನ್ಯಾನೋ ಜಗತ್ತು: ಸಣ್ಣ ಕಣಗಳ ಮಹಾ ಸಾಧ್ಯತೆಗಳು ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 6.30ಕ್ಕೆ.

■ **ನಾಟ್ಯಾಲೇಖ ರಂಗಸಮೂಹ :** ಬ್ಲಾಕ್ ಕರ್ಟನ್ ಥಿಯೇಟರ್ ತಂಡದಿಂದ ಜಿಗೊಲೊ ನಾಟಕ ಪ್ರದರ್ಶನ, ನಿರ್ದೇಶನ : ಅನಿಲ್ ಕುಮಾರ್, ಸ್ಥಳ: ಶ್ರೀರಂಗ, ರಂಗಾಯಣದ ಆವರಣ, ಸಂಜೆ 7ಕ್ಕೆ.

# ಆನೆದಂತ ಮಾರಾಟ ಯತ್ನ: ನಾಲ್ವರ ಬಂಧನ



ಮೈಸೂರು, ಡಿ.12– ಬಿಆರ್‌ಟಿ ವ್ಯಾಪ್ತಿಯಲ್ಲಿ ಆನೆ ದಂತಗಳ ಕದ್ದು, ನರಸೀಪುರದಲ್ಲಿ ಮಾರಾಟಕ್ಕೆ ಯತ್ನಿಸಿದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿನ್ಸನ್ (ಮುಳ್ಳೂರು, ಕೊಳ್ಳೇಗಾಲ), ವಸಂತಕುಮಾರ್ (ತಿ.ನರಸೀಪುರ), ಎ.ಚೇತನ್ ಕುಮಾರ್ (ಮಾಂಬಳ್ಳಿ, ಯಳಂದೂರು), ಎ.ನಿತೀನ್ ಕುಮಾರ್ ಅಲಿಯಾಸ್ ಬಾಲಾಜಿ (ಅಶೋಕಪುರಂ, ಮೈಸೂರು) ಬಂಧಿತ ಆರೋಪಿಗಳಾಗಿದ್ದಾರೆ.

ಯಳಂದೂರು ವನ್ಯಜೀವಿ ಉಪ ವಿಭಾಗದ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಕೊಳ್ಳೇಗಾಲ ವನ್ಯಜೀವಿ ವಲಯ ಭಾಗದಲ್ಲಿ ಆನೆ ದಂತ ಸಂಗ್ರಹ ಮಾಡಿ ಮಾರಾಟಕ್ಕಾಗಿ ತಿ.ನರಸೀಪುರ ತಾಲೂಕಿನ ಕಲಿಯೂರು ಗ್ರಾಮದ ನಿವಾಸಿ ವಸಂತ ಕುಮಾರ್ ಅವರ ಮನೆಯಲ್ಲಿ ಒಂದು ಜೊತೆ ಆನೆ ದಂತವನ್ನು ಅಕ್ರಮವಾಗಿ ಇರಿಸಿದ್ದರೆನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಕೊಳ್ಳೇಗಾಲ ವನ್ಯಜೀವಿ ವಲಯದ ಅಧಿಕಾರಿಗಳು ಆನೆ ದಂತ ವಶಪಡಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಚಾಮರಾಜನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಸ್.ಶ್ರೀಪತಿ ಮಾರ್ಗದರ್ಶನದಲ್ಲಿ ಯಳಂದೂರು ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಾಶ್ವರ್ ಅಕ್ಷಯ್ ಅಶೋಕ್ ನಿರ್ದೇಶನದಂತೆ, ಕೊಳ್ಳೇಗಾಲ ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ವಾಸು ಬಿ.ಎನ್., ಬೈಲೂರು ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಪ್ರಮೋದ್ ಎ, ಉಪ ವಲಯ ಅರಣ್ಯಾಧಿಕಾರಿಗಳಾದ ಜಗದೀಶ್ ಶಿರೂರ, ಅಮರನಾಥ್ ಶಿಂಧಿಹಟ್ಟಿ, ಗೋವರ್ಧನ್ ಬಿ.ಹೆಚ್. ಅನಂತರಾಮು ಬಿ.. ಭಾನುಪ್ರಕಾಶ್ ಜಿ.ಎಂ. ರಘುರಾಮ್ ಜೆ.ಎಸ್. ಗಸ್ತು ಅರಣ್ಯ ಪಾಲಕರನ್ನೊಳಗೊಂಡ ತಂಡ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಬಂಧಿಸಿದ್ದಾರೆ.

## ಇಂದು ಎಸ್‌ಬಿಐ ಕನ್ನಡ ಸಂಘದಿಂದ ರಾಜ್ಯೋತ್ಸವ

ಮೈಸೂರು, ಡಿ.12– ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) ಕನ್ನಡ ಸಂಘದ ವತಿಯಿಂದ ನಗರದ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಶನಿವಾರ(ಡಿ.13) ಸಂಜೆ 5.45ಕ್ಕೆ ಕನ್ನಡ ರಾಜ್ಯೋತ್ಸವ ಹಾಗೂ ಸಂಘದ ವಾರ್ಷಿಕೋತ್ಸವ ಆಯೋಜಿಸಲಾಗಿದೆ.

ಎಸ್‌ಬಿಐ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕ ಕೆ.ರಘು ಶೆಟ್ಟಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದು, 'ದಫೇದಾರ್ ದೇರಣ್ಣ' ಹಾಗೂ 'ಹುಷಾರ್ ಸಿಕ್ಕಿ ಬೀಳ್ತೀರಿ' ನಾಟಕ ಪ್ರದರ್ಶನ ಇರಲಿದೆ. ಇದೇ ವೇಳೆ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಸಂಘದ ಪ್ರಕಟಣೆ ತಿಳಿಸಿದೆ.

# ಇಂದು ಥಾಮಸ್ ಕುಕ್‌ನಿಂದ ಗ್ರಾಂಡ್ ಹಾಲಿಡೇ ಕಾರ್ನಿವಲ್

ಮೈಸೂರು,ಡಿ.12(ಪಿಎಂ)– ಭಾರತದ ಪ್ರಮುಖ ಟ್ರಾವೆಲ್ ಸರ್ವೀಸ್ ಸಂಸ್ಥೆ 'ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್' ವತಿಯಿಂದ ಡಿ.13ರಂದು ಮೈಸೂರಿನ ವಿವಿ ಮೊಹಲ್ಲಾದ ರೂಪ ಎಲೈಟ್ ಹೋಟೆಲ್‌ನಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಗ್ರಾಂಡ್ ಹಾಲಿಡೇ ಕಾರ್ನಿವಲ್ ಆಯೋಜಿಸಲಾಗಿದೆ.

ಈ ಹಾಲಿಡೇ ಕಾರ್ನಿವಲ್‌ನಲ್ಲಿ ವಿಶೇಷ ಸೌಲಭ್ಯಗಳು ದೊರಕಲಿವೆ. ಯೂರೋಪ್ ಪ್ರವಾಸ ಕೈಗೊಳ್ಳುವವರು ಮುಂಗಡವಾಗಿ ಬುಕಿಂಗ್ ಮಾಡಿದರೆ ಕ್ರೂಸ್ ಹಾಲಿಡೇಸ್ ಉಚಿತವಾಗಿ ದೊರೆಯಲಿದೆ. ಸ್ಪಾಟ್ ಬುಕಿಂಗ್‌ನಲ್ಲಿ ಹೆಚ್ಚುವರಿ ರಿಯಾಯಿತಿ ಪಡೆಯುವ ಅವಕಾಶವಿದೆ. ಯೂರೋಪ್ ಸಮ್ಮರ್ ಹಾಲಿಡೇ 2026 ಪ್ರವಾಸ ಕೈಗೊಳ್ಳುವವರಿಗೆ 1,70,000 ರೂ.ನಿಂದ ಪ್ಯಾಕೇಜ್‌ಗಳು ಪ್ರಾರಂಭವಾಗುತ್ತವೆ.

ತೀರ್ಥಯಾತ್ರೆ ವಿಶೇಷ ಪ್ರವಾಸಗಳಾದ (ಚಾರ್ ದಾಮ್, ಕೈಲಾಸ ಮಾನಸ ಸರೋವರ) ಲಕ್ಷದ್ವೀಪಕ್ಕೆ ವಿಶೇಷ ಕ್ರೂಸ್ ಪ್ರವಾಸ, ಅಯೋಧ್ಯೆಗೆ ವಿಶೇಷ ಗ್ರೂಪ್‌ಟೂರ್ ಇದ್ದು, ಸ್ಪಾಟ್ ಬುಕಿಂಗ್‌ನಲ್ಲಿ ಹೆಚ್ಚುವರಿ ರಿಯಾಯಿತಿ ಪಡೆಯುವ ಅವಕಾಶ ನೀಡಲಾಗಿದೆ. ಥಾಮಸ್ ಕುಕ್ ಕಂಪನಿಯಿಂದ ಕೂಡಲೇ ಪ್ರವಾಸಕ್ಕಾಗಿ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಜಪಾನ್, ಕೊರಿಯಾ, ಸೌತ್ ಅಮೇರಿಕ, ಟರ್ಕಿ, ಈಜಿಪ್ಟ್, ಜೋರ್ಡಾನ್, ಸೌತ್‌ಆಫ್ರಿಕಾ, ಕೀನ್ಯಾ, ಯುಎಸ್‌ಎ, ಕೆನಡಾ, ವಿಯೆಟ್ನಾಂ, ಕಂಬೋಡಿಯಾ, ಸ್ವಿಜರ್ಲ್ಯಾಂಡ್, ಫ್ರಾನ್ಸ್, ಕಸಕಿಸ್ತಾನ್, ಉಜಬೇಕಿಸ್ತಾನ್ ಇವು ಎಲ್ಲಾ ಪ್ರವಾಸಿಗರಿಗೆ ವ್ಯಾಪಕವಾಗಿ ತೆರೆದಿರುವ ತಾಣಗಳಾಗಿವೆ. ಆಗ್ನೇಯ ಏಷ್ಯಾ, ಜಪಾನ್, ಗ್ರೀನ್ ಲ್ಯಾಂಡ್‌ಗೆ ಕ್ರೂಸ್ ಪ್ರವಾಸಗಳನ್ನು ಒಳಗೊಂಡಿರುತ್ತದೆ.

ಭಾರತದಲ್ಲಿ ಮುಖ್ಯವಾಗಿ ಕಾಶ್ಮೀರ, ಲಡಾಕ್, ಹಿಮಾಚಲ ಪ್ರದೇಶ, ಉತ್ತರಖಂಡ್, ಗೋವಾ, ಅಂಡಮಾನ್, ಕೇರಳ, ರಾಜಸ್ಥಾನ್, ಗುಜರಾತ್, ಈಶಾನ್ಯ ಭಾರತಕ್ಕೆ ಹಾಲಿಡೇಸ್ ಕೂಡ ಲಭ್ಯವಿದೆ. ಇವುಗಳಲ್ಲಿ ಬಹುತೇಕ ಕಡೆಗಳಿಗೆ ಕ್ರೂಸ್ ಪ್ರವಾಸಗಳೂ ಲಭ್ಯವಿವೆ. ಭೂತಾನ್ ಚಾರ್ಟರ್ ವಿಶೇಷ ಪ್ರವಾಸ ಏಳು ದಿನಗಳಿಗೆ 99 ಸಾವಿರ ರೂ. ಮತ್ತು ತೆರಿಗೆ ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಈ ಪ್ರವಾಸವು ಏಳು ದಿನಗಳಿಗೆ 1,30,000 ರೂ. ವೆಚ್ಚವಾಗುತ್ತದೆ. ಯೂರೋಪ್ ಗ್ರೂಪ್ ಟೂರ್‌ನಲ್ಲಿ ಪ್ರಾದೇಶಿಕ ಭಾಷೆ (ಕನ್ನಡ) ತಿಳಿದಿರುವ ಟೂರ್ ಮ್ಯಾನೇಜರ್ ಲಭ್ಯರಿದ್ದಾರೆ. ಹಿರಿಯ ನಾಗರಿಕರಿಗೆ ಮಾತ್ರ ವಿಶೇಷ ಪ್ರವಾಸ ಲಭ್ಯವಿದೆ. ಹಾಲಿಡೇ ಪ್ಲಾನ್‌ಗಾಗಿ ಹಾಲಿಡೇ ಕಾರ್ನಿವಲ್ ಅಥವಾ ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್ ಕಚೇರಿ ಸಂಪರ್ಕಿಸಬಹುದು. ಜೊತೆಗೆ ಮೊ. ಸಂ. 98862 81887 (ನಂದಕಿಶೋರ್), 95905 67287 (ಸಚಿನ್) ಸಹ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.














ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ ನಂ.0821-2474476,
ಇ-ಮೇಲ್ : purmymul@gmail.com

**ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)**

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು /ಸೇವೆಯನ್ನು ಪಡೆಯಲು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

| ಕ್ರ ಸಂ | ಟೆಂಡರ್ ಪ್ರಕಟಣೆ | ಸೇವೆಯ ವಿವರ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 1 | KMF/2025-26/IND1844 | ಮೆಗಾ ಡೈರಿ ಆವರಣದಲ್ಲಿ ದಿನಪ್ರತಿ 1200cum ಸಾಮರ್ಥ್ಯದ ಇ.ಟಿ.ಪಿ ಘಟಕದ ವಿನ್ಯಾಸ, ಸಿವಿಲ್ ಕಾಮಗಾರಿ, ಸರಬರಾಜು, ಸ್ಥಾಪನೆ ಹಾಗೂ ಪ್ರಸ್ತುತ ಚಾಲನೆಯಲ್ಲಿರುವ ಇ.ಟಿ.ಪಿ.ಯೊಂದಿಗೆ ಜೋಡಣೆ ಕೆಲಸಗಳನ್ನು ಟರ್ನ್ ಕೀ ಆಧಾರದಲ್ಲಿ ನಿರ್ವಹಿಸುವ ಬಗ್ಗೆ. | 26.12.2025 ಸಂಜೆ 05.00 ಗಂಟೆಯವರೆಗೆ |
| 2 | KMF/2025-26/IND1850 | ಒಕ್ಕೂಟಕ್ಕೆ ಅಗತ್ಯವಿರುವ ಟಿ.ಟಿ.ಓ ಪ್ರಿಂಟರ್‌ಗಳನ್ನು ಖರೀದಿಸಿ ಅಳವಡಿಸಲು ಹಾಗೂ ಎಂ.ಕೆ.ಸ್ಪೆಷಲ್ ಇಂಕ್ ರಿಬ್ಬನ್‌ಗಳನ್ನು ದ್ವೈವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ. | 26.12.2025 ಸಂಜೆ 05.00 ಗಂಟೆಯವರೆಗೆ |
| 3 | KMF/2025-26/IND1852 | ಒಕ್ಕೂಟಕ್ಕೆ ಅಗತ್ಯವಿರುವ ಜಿ.ಡಿ.ಎಲ್ ಹಾಗೂ ಪೆರಾಕ್ಸಿಕೆಮ್ ಅನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ. | 26.12.2025 ಸಂಜೆ 05.00 ಗಂಟೆಯವರೆಗೆ |
| 4 | KMF/2025-26/IND1853 | ಒಕ್ಕೂಟಕ್ಕೆ ಅಗತ್ಯವಿರುವ ವಾಟರ್ ಜೆಟ್ ಮಷಿನ್ ಅನ್ನು ಖರೀದಿಸಿ ಅಳವಡಿಸಲು ಹಾಗೂ ಒಕ್ಕೂಟದ ಮುಖ್ಯ ಪ್ರಯೋಗಾಲಯಕ್ಕೆ 5000CFM ಸಾಮರ್ಥ್ಯದ ಚಿಲ್ಡ್ ವಾಟರ್ ಏರ್ ಹ್ಯಾಂಡ್ಲಿಂಗ್ ಯುನಿಟ್ ಅನ್ನು ಖರೀದಿಸಿ ಅಳವಡಿಸುವ ಬಗ್ಗೆ. | 26.12.2025 ಸಂಜೆ 05.00 ಗಂಟೆಯವರೆಗೆ |

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಾಮುಂಡಿಬೆಟ್ಟ–570010
ಕಾರ್ಯದರ್ಶಿಯವರ ಕಾರ್ಯಾಲಯ ಚಾಮುಂಡಿಬೆಟ್ಟ,
Ph:0821-2590027 Email:eochamunditemple@gmail.com
ಎಸ್.ಸಿ.ಟಿ(1) TENDAR ಸಿಆರ್: 40/2025–26 ದಿ: 09.12.2025

**ಟೆಂಡರ್–ಕಂ–ಹರಾಜು ಪ್ರಕಟಣೆ**

ಮೈಸೂರು, ಚಾಮುಂಡಿಬೆಟ್ಟದ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಶ್ರೀ ಜ್ವಾಲಾಮುಖಿ ಅಮ್ಮನವರ ದೇವಸ್ಥಾನಗಳಲ್ಲಿ ವಿವಿಧ ಗುತ್ತಿಗೆ ಹಕ್ಕನ್ನು 2025–26 ಮತ್ತು 2026–27ನೇ ಸಾಲಿಗೆ (ದಿನಾಂಕ:01.01.2026 ರಿಂದ ದಿ:31.12.2026 ರ ಅವಧಿಗೆ) ಬಹಿರಂಗ ಟೆಂಡರ್–ಕಂ–ಹರಾಜು ನಡೆಸಲಾಗುವುದು, ಆಸಕ್ತರು ದಿನಾಂಕ:18.12.2025 ರಂದು ಮಧ್ಯಾಹ್ನ 12.00 ಗಂಟೆಯೊಳಗಾಗಿ ಟೆಂಡರ್‌ಗಳನ್ನು ಈ ಕಛೇರಿಗೆ ಸಲ್ಲಿಸುವುದು. ಮಧ್ಯಾಹ್ನ 3.00 ಗಂಟೆಗೆ ಪ್ರಾಧಿಕಾರದ ದಾಸೋಹ ಭವನದ ಮೊದಲನೆ ಮಹಡಿಯಲ್ಲಿ ಬಹಿರಂಗ ಹರಾಜು ನಡೆಸಲಾಗುವುದು, ಹರಾಜು ನಂತರ ಸಂಬಂಧಪಟ್ಟ ಟೆಂಡರ್‌ಗಳನ್ನು ತೆರೆಯಲಾಗುವುದು, ಟೆಂಡರ್–ಕಂ–ಹರಾಜು ಎರಡರಲ್ಲಿ ಯಾವುದು ಹೆಚ್ಚು ಮೊತ್ತಕ್ಕೆ ಆಖೈರಾಗುವುದು ಅವರಿಗೆ ಬಿಡ್ಡು ನಿಲ್ಲುವುದು.ರೂ.100–00(ಒಂದು ನೂರು ರೂಪಾಯಿ) ಗಳನ್ನು ಪಾವತಿಸಿ ಟೆಂಡರ್ ನಮೂನೆ ಮತ್ತು ಷರತ್ತುಗಳನ್ನು ಪಡೆಬಹುದು.ಆಸ್ತಕರು ನಿಗದಿತ ಭದ್ರತಾ ಠೇವಣಿಗೆ ಡಿ.ಡಿ ಪಡೆದು ಲಗತ್ತಿಸಿ ಟೆಂಡರ್ ಸಲ್ಲಿಸಬಹುದು. ಟೆಂಡರ್–ಕಂ–ಹರಾಜು ನಿಯಮ ನಿಭಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

| ಕ್ರ.ಸಂ. | ಗುತ್ತಿಗೆ ವಿವರ | ಭದ್ರತಾ ಠೇವಣಿ |
|---|---|---|
| 1. | ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಬಿಡುವ ಪಾದರಕ್ಷೆಗಳನ್ನು ಕಾಯ್ದುಕೊಂಡು ಶುಲ್ಕ ವಸೂಲಿ ಮಾಡುವ ಹಕ್ಕು. | 1,00,000–00 |
| 2. | ಅರಮನೆ ಉತ್ತರಬಾಗಿಲು ಶ್ರೀ ವಿನಾಯಕಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಬಿಡುವ ಪಾದರಕ್ಷೆಗಳನ್ನು ಕಾಯ್ದುಕೊಂಡು ಶುಲ್ಕ ವಸೂಲಿ ಮಾಡುವ ಹಕ್ಕು. | 5,000–00 |
| 3. | ಅರಮನೆ ಉತ್ತರಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಬಿಡುವ ಪಾದರಕ್ಷೆಗಳನ್ನು ಕಾಯ್ದುಕೊಂಡು ಶುಲ್ಕ ವಸೂಲಿ ಮಾಡುವ ಹಕ್ಕು | 5,000–00 |
| 4. | ಉತ್ತನಹಳ್ಳಿ, ಶ್ರೀ ಜ್ವಾಲಾತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಮಳಿಗೆ 1 ಮತ್ತು 2 ಮಾಹೆಯಾನ ಗುತ್ತಿಗೆ ಆಧಾರದಲ್ಲಿ ಬಾಡಿಗೆ ಪಡೆಯುವ ಗುತ್ತಿಗೆ ಹಕ್ಕು. | 20,000–00 |
| 5. | ಉತ್ತನಹಳ್ಳಿ, ದೇವಾಲಯದ ಬಲ ಭಾಗದಲ್ಲಿರುವ3(ಮೂರು)(ಕ.ಸಂ.3,4,5) ಮಳಿಗೆಗಳನ್ನು ಒಂದೊಂದಾಗಿ ಮಾಹೆಯಾನ ಗುತ್ತಿಗೆ ಆಧಾರದಲ್ಲಿ ಬಾಡಿಗೆ ಪಡೆಯುವ ಗುತ್ತಿಗೆ ಹಕ್ಕು. | 10,000–00 |
| 6. | ಉತ್ತನಹಳ್ಳಿ, ದೇವಾಲಯದಲ್ಲಿಭಕ್ತಾದಿಗಳು ಬಿಡುವ ಪಾದರಕ್ಷೆಗಳನ್ನು ಕಾಯ್ದುಕೊಂಡು ಶುಲ್ಕ ವಸೂಲಿ ಮಾಡುವ ಹಕ್ಕು. | 5,000–00 |
| 7. | ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿರು ಬಹುಮಹಡಿ ವಾಹನ ನಿಲ್ದಾಣದ ಕಟ್ಟಡದಲ್ಲಿರುವ ಶೌಚಾಲಯಗಳನ್ನು ಕಾಯ್ದುಕೊಂಡು ಶುಲ್ಕ ವಸೂಲಿ ಮಾಡುವ ಹಕ್ಕು | 15,000–00 |

DIPR/DDMYS/1352/KSMCA/770/2025-26
ಸಹಿ/– ಕಾರ್ಯದರ್ಶಿ

# Sri Chamundeshwari Nagara Sarvodaya Sangha (R)

**R.No.75/85, Dattagalli, Badavane, Mysore.**

## TO WHOM SO EVER IT MAY CONCERN

The Division Bench of the Hon'ble High Court vide its Order dated 13.11.2025, has dismissed the CCC No.655 of 2023, (preferred by the members of the Sangha) c/w W.P.No.29219 of 2023(LA-UDA), (preferred by Mr.Veer Kumar Jain) W.P.No.33513 of 2024 (LA-UDA) (preferred by members of the Sangha), however in the said order the Division Bench has in iv & v paras of the orders, has expressed as below.

iv. "Despite the dismissal of the W.P.No.29219/2023, the MUDA and the State Government may take a decision independent of the Government Order dated 11.07.1997 for allotment of sites to the Members of the Sangha as per the relevant policy in this regard".

v. "We have been informed that in pursuance of the Resolution dated 21.03.2023 of the MUDA, several sale deeds have been registered in favour of some members of the Sangha and few have been left out. Is the State Government is not cancelling the sale deeds already executed in favour of some Members of the Sangha, the other Members of the Sangha are also to be given similar treatment".

The members of the Sangha preferred a Special Leave to Appeal before the Hon'ble Supreme Court which came to be disposed of by reserving liberty to the Petitioners (Members of the Sangha) herein to seek the implementation of the directions made in sub-paragraphs (iv) and (v) of the main paragraph IV Conclusion of the High Court's Order.

The Hon'ble Supreme Court has also observed that if the Petitioners (Members of the Sangha) seek implementation of those paragraphs, the same shall be done as expeditiously as possible as the said Petitioners (Members of the Sangha) have been agitating for their rights for four decades.

Hence, We are glad to inform the Members of the sangha, that our more than four decades of fight for justice before various forums has yield results and our dream of owning a dwelling site, has been successful and the Members of the sangha, who have been given allotment of sites, demand notice and are yet to make the payment and get the Sale Deeds conveyed from the MUDA may contact the Sangha's office, forthwith to discuss the future course of action.

**SRI CHAMUNDESHWARI NAGARA SARVODAYA SANGHA (R)**

Sri C.R. BOJARAJU
Secretary

Sri H.V.VRUSHABENDRAPPA
President

Mysore, Dated 13.12.2025

## ನಕ್ಕರೆ ಅದೇ ಸ್ವರ್ಗ

ತಿಮ್ಮ : ರಾತ್ರಿ ಸೊಳ್ಳೆ ಕಾಟ ತಪ್ಪಿಸೋಕೆ ಏನ್ ಮಾಡಬೇಕೋ ಗುಂಡ?
ಗುಂಡ : ರಾತ್ರಿ ಮಲಗುವ ಮುಂಚೆ ಒಂದು ಸೊಳ್ಳೆ ಸಾಯಿಸಿ ಮಲಗಿ. ಆಗ ಸೊಳ್ಳೆ ಕಾಟ ಇರಲ್ಲ.
ತಿಮ್ಮ : ಅದು ಹೇಗೆ ಸಾಧ್ಯ?
ಗುಂಡ : ಹೇಗೆ ಅಂದ್ರೆ.. ಸೊಳ್ಳೆಗಳೆಲ್ಲ ಸತ್ತ ಸೊಳ್ಳೆಯ ಸಂಸ್ಕಾರ ಮಾಡಲು ಹೋಗುತ್ತವೆ.

ಮೈಸೂರು ಮಿತ್ರ

ಶನಿವಾರ, 13 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ಪೆಟ್ಟು ಕೊಟ್ಟವರಿಗೆ ಮರುಪೆಟ್ಟು ಕೊಡಲು ನಾವು ನೀವ್ಯಾರು? ಪಟ್ಟು ಹಿಡಿಯದೇ ದುಪ್ಪಟ್ಟು ಪೆಟ್ಟು ಕೊಡಲು ಮೇಲೊಬ್ಬ ಇಲ್ಲವೆ?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೈವ ಕಾಡುವುದು ವಿಧಿಗಾಗಿ, ನೀರು ಸಮುದ್ರ ಸೇರುವುದು ನದಿಗಾಗಿ.

## ನಿಮ್ಮ ಪತ್ರಗಳು

### ದ್ವೇಷ ಭಾಷಣ ಮಸೂದೆ: ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ (ತಡೆಗಟ್ಟುವಿಕೆ) ಮಸೂದೆ 2025' ಅನ್ನು ಮಂಡಿಸಿದೆ. ಈ ಮಸೂದೆ ದ್ವೇಷ ಭಾಷಣ ಅಪರಾಧಿಗಳಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ 1 ಲಕ್ಷ ರೂ. ವರೆಗೆ ದಂಡ ವಿಧಿಸಲು ಪ್ರಸ್ತಾಪಿಸಿದೆ. ಅಪರಾಧದ ಗಂಭೀರತೆಗೆ ಅನುಗುಣವಾಗಿ ಸಂತ್ರಸ್ತರಿಗೆ ಪರಿಹಾರ ನೀಡುವ ಅವಕಾಶವೂ ಇದರಲ್ಲಿರುವುದು ಸ್ವಾಗತಾರ್ಹವಾಗಿದೆ.

ದ್ವೇಷ ಭಾಷಣವು ವ್ಯಕ್ತಿ, ವ್ಯಕ್ತಿಗಳ ನಡುವೆ, ಜನಾಂಗ ಹಾಗೂ ಧರ್ಮ ಸಮೂಹಗಳ ಮಧ್ಯೆ ಅಸಾಮರಸ್ಯ, ಹಗೆತನ, ದ್ವೇಷ ಅಥವಾ ಕೆಡುಕಿನ ಭಾವನೆಗಳನ್ನು ಮೂಡಿಸಬಹುದು. ದ್ವೇಷ ಭಾಷಣ ಮಾಡುವ ಅಥವಾ ಪ್ರಕಟಿಸುವ, ಅಂತಹ ದ್ವೇಷ ಭಾಷಣವನ್ನು ಪ್ರಚಾರ ಮಾಡುವ, ವ್ಯಾಪಕಗೊಳಿಸುವ, ಪ್ರಚೋದಿಸುವ ಪ್ರಯತ್ನಿಸುವ ಸಂದರ್ಭಗಳು ಕೂಡ ಸಾರ್ವಜನಿಕರ ನೆಮ್ಮದಿಯನ್ನು ಕಸಿಯುವ ಅಪಾಯವನ್ನು ತಂದೊಡ್ಡುತ್ತವೆ.

ಆಕ್ರಮಣಕಾರಿ ದ್ವೇಷ ಭಾಷಣವು ಕೇಳುಗರಿಗೆ ನೋವುಂಟು ಮಾಡುತ್ತದೆ. ಸಮಾಜದಲ್ಲಿ ಅಶಾಂತಿ ಮತ್ತು ದ್ವೇಷಕ್ಕೆ ಕಾರಣವಾಗುವ ದ್ವೇಷ ಭಾಷಣ ಹಾಗೂ ಸಂಬಂಧಿತ ಅಪರಾಧಗಳ ಪ್ರಸಾರ, ಪ್ರಕಟಣೆ ಅಥವಾ ಪ್ರಚಾರವನ್ನು ತಡೆಯುವುದು ಅವಶ್ಯಕವಾಗಿದೆ. ಅಲ್ಲದೇ ರಾಜ್ಯದಲ್ಲಿ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ದ್ವೇಷ ಭಾಷಣ ಮಸೂದೆಯನ್ನು ಜಾರಿಗೆ ತರಲು ಮುಂದಾಗಿರುವುದು ಪ್ರಶಂಸನೀಯ. ಈ ಬಗ್ಗೆ ಸಾರ್ವಜನಿಕವಾಗಿ ಚರ್ಚೆಗಳು ನಡೆದು ತದನಂತರ ಕಟ್ಟುನಿಟ್ಟಿನ ಕಾಯಿದೆ ಜಾರಿಗೆ ತರುವುದು ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ಫುಟ್‌ಪಾತ್ ಈಗ ಫಾಸ್ಟ್ ಫುಡ್‌ಪಾತ್‌ಗಳಾಗುತ್ತಿವೆ



ಮಾನ್ಯರೆ,

ಫಾಸ್ಟ್‌ಫುಡ್ ಹೋಗಿ ಟೆಂಟ್ ಹೋಟೆಲ್‌ಗಳಾಗಿ ಬದಲಾಗುತ್ತಿವೆ. ಮೈಸೂರು ನಗರದಾದ್ಯಂತ ಫುಟ್‌ಪಾತ್ ಹೋಟೆಲ್‌ಗಳ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ದಿನಕ್ಕೆ ಕನಿಷ್ಠ ಹತ್ತು ಗಾಡಿಗಳಾದರೂ ಸುತ್ತಮುತ್ತ ತಲೆ ಎತ್ತುತ್ತಿವೆ. ಅದು ಟೆಂಟ್ ಫುಟ್‌ಪಾತ್ ಹೋಟೆಲ್‌ಗಳಾಗಿ ಬದಲಾಗುತ್ತಿದೆ. ಇಷ್ಟಾದರೂ ಸಾಲದೆಂಬಂತೆ ಗಾಡಿಗಳ ಜೊತೆಗೆ ಆಯಾ ಸ್ಥಳದಲ್ಲಿ ಟೆಂಟ್ ರೀತಿಯ ಡೇರೆಗಳೊಂದಿಗೆ ಖುರ್ಚಿ, ಟೇಬಲ್, ಅಡುಗೆ ಪರಿಕರಗಳು, ಸೌದೆ ಒಲೆಯಲ್ಲಿ ರುಮಾಲ್ ರೋಟಿ, ಕುಲ್ಚಾವನ್ನು ಸ್ಥಳದಲ್ಲೇ ತಯಾರಿಸಿ ಕೊಡುತ್ತಾರೆ. ನಗರದ ನ್ಯಾಯಾಲಯದ ಬಳಿಯ ಹೋಟೆಲ್ ಒಂದು ಉದಾಹರಣೆ ಅಷ್ಟೇ. ಇಂತಹ ಅದೆಷ್ಟೋ ಹೋಟೆಲ್‌ಗಳು ನಗರದ ಸುತ್ತ ಹರಡಿಕೊಂಡಿದೆಯೋ ಗೊತ್ತಿಲ್ಲ. ದೊಡ್ಡ ದೊಡ್ಡ ಬಾಣಲಿಯಲ್ಲಿ ಲೀಟರ್‌ಗಟ್ಟಲೇ ಎಣ್ಣೆ ಸುರಿದು ತಿಂಡಿ ಕರಿಯುತ್ತಾರೆ. ಅಪ್ಪಿ ತಪ್ಪಿ ಕಾದ ಎಣ್ಣೆ ಗ್ರಾಹಕರ ಮೈ ಮೇಲೆ ಬಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ಇದಕ್ಕೆ ಹೊಣೆ ಯಾರು? ಇಂತಹ ಘಟನೆ ಈಗಾಗಲೇ ಘಟಿಸಿದೆ. ಗ್ಯಾಸ್ ಸ್ಟೌವ್‌ಗಳನ್ನು ಸಹ ಯಾವ ಮುನ್ನೆಚ್ಚರಿಕೆಯನ್ನು ಪಾಲಿಸದೇ ಬಳಸುತ್ತಾರೆ. ಸಾರ್ವಜನಿಕ ಸ್ಥಳವನ್ನು ಯಾವುದೇ ಅಂಜಿಕೆ ಇಲ್ಲದೆ ಸ್ವಂತದಂತೆ ಬಳಸುತ್ತಾರೆ. ವ್ಯಾಪಾರ ಮುಗಿದ ನಂತರ ಹಸಿ ಕಸ, ಒಣ ಕಸ ಎಲ್ಲವನ್ನು ಎಲ್ಲೆಂದರಲ್ಲಿ ಬೀಸಾಡಿ ಶುಚಿತ್ವವನ್ನು ಕಾಪಾಡದೆ ಮನೆಗೆ ತೆರಳುತ್ತಾರೆ. ಮಾರನೇ ದಿನ ಮತ್ತದೇ ದಿನಚರಿ. ಇಲ್ಲಿನ ತಿಂಡಿ ತಿನಿಸು ತಿನ್ನಲು ಅದಕ್ಕಾಗಿ ಜನ ಮುಗಿ ಬೀಳುವುದು, ಅವರ ವಾಹನಗಳನ್ನು ಎಲ್ಲೆಂದರಲ್ಲಿ ಪಾರ್ಕ್ ಮಾಡುವುದು. ಇದರಿಂದ ಇವರ ವ್ಯಾಪಾರ ಮತ್ತಷ್ಟು ರೋಡಿಗೆ ಬಂದು ವಾಹನಗಳು ರಸ್ತೆಯನ್ನು ಆಕ್ರಮಿಸಿಕೊಂಡು ವ್ಯಾಪಾರದ ಖುಷಿಯಲ್ಲಿ ನಗೆ ಬೀರುತ್ತಾ ನನಗೇಕೆ ಬಾಡಿಗೆ, ಅಡ್ವಾನ್ಸ್, ಸರ್ಕಾರಿ ತೆರಿಗೆ, ಲೈಸನ್ಸ್ ಎನ್ನುತ್ತಾ ಬಿಗುತ್ತಾರೆ. ನೀರು, ವಿದ್ಯುತ್ ಬಿಲ್ ಎಲ್ಲಾ ಮುಕ್ತ ಮುಕ್ತ. ಆದರೆ ಊಟ, ತಿಂಡಿಯ ದರ ಮಾತ್ರ ಯಾವ ದೊಡ್ಡ ಹೋಟೆಲ್‌ಗೂ ಕಡಿಮೆ ಇಲ್ಲದೆ ದರ ನಿಗದಿ ಮಾಡಿರುತ್ತಾರೆ. ಹೋಟೆಲ್ ಸಂಬಂಧಪಟ್ಟ ಎಲ್ಲಾ ಆಧುನಿಕ ಪರಿಕರಗಳನ್ನೂ ಬಳಸುತ್ತಾರೆ. ವ್ಯಾಪಾರ ಹೆಚ್ಚಾಗಿ ಕೆಲವರು ಕಂಪ್ಯೂಟರ್ ಬಿಲ್ ನೀಡುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತಾರೆ. ಆದರೆ ಲಕ್ಷಾಂತರ ರೂ. ಅಡ್ವಾನ್ಸ್ ನೀಡಿ ಉದ್ಯಮದ ಲೈಸನ್ಸ್ ಪಡೆದು ಅಂಗಡಿಗೆ ಸಾವಿರಾರು ರೂ ಬಾಡಿಗೆ ನೀಡಿ, ನೀರು ತೆರಿಗೆ, ಕಮರ್ಷಿಯಲ್ ವಿದ್ಯುತ್ ದರ ಜೊತೆಗೆ ಹೋಟೆಲ್ ಪರಿಶೀಲನೆಗೆ ಬಂದವರನ್ನೆಲ್ಲ ಸಂತೃಪ್ತಿ ಪಡಿಸಬೇಕು. ಇಲ್ಲಾಂದ್ರೆ ಯಾವುದಾದರು ಕಾರಣ ನೀಡಿ ದಂಡ ಕಟ್ಟಲು ನೋಟಿಸ್ ನೀಡುತ್ತಾರೆ. ಇದು ನಮ್ಮ ನಡುವಿನ ಸದ್ಯದ ವಾಸ್ತವಿಕ ವ್ಯವಸ್ಥೆಯ ಪರಿಸ್ಥಿತಿ.ಫುಟ್‌ಪಾತ್‌ಗಳು ಈಗ ಫಾಸ್ಟ್ ಫುಡ್‌ಪಾತ್‌ಗಳಾಗಿ ಬದಲಾಗಿದೆ. ಹೋಟೆಲ್ ಉದ್ಯಮ ಉಳಿಸಿ, ಬೆಳೆಸಬೇಕು. ಜೊತೆಗೆ ಫುಟ್‌ಪಾತ್ ಆಕ್ರಮಣದಿಂದ ಅಶುಚಿತ್ವದಿಂದ ಆಗುತ್ತಿರುವ ಪರಿಸರ ಮಾಲಿನ್ಯ, ಸಾರ್ವಜನಿಕರಿಗೆ ಮುಕ್ತವಾಗಿ ಸಂಚರಿಸಲು ಆಗುತ್ತಿರುವ ಅಡಚಣೆ ಇಂತಹ ಹತ್ತು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿರುವ ಫುಟ್‌ಪಾತ್ ವ್ಯಾಪಾರಿಗಳಿಗೆ ಯಾವುದಾದರೂ ನಗರದ ಹೊರವಲಯದಲ್ಲಿ ಫುಡ್‌ಪಾರ್ಕ್ ರೀತಿ ಮಾಡಿ ತೆರಿಗೆ ವಸೂಲಿಯೊಂದಿಗೆ ವ್ಯಾಪಾರಕ್ಕೆ ಅನುವು ಮಾಡಿಕೊಡಲಿ. ಈ ಸಮಸ್ಯೆಗೊಂದು ಶಾಶ್ವತ ಪರಿಹಾರವನ್ನು ಸರ್ಕಾರ ಕಂಡುಕೊಂಡು ಇವರನ್ನು ತೆರವುಗೊಳಿಸಿ ಫುಟ್‌ಪಾತ್ ಮುಕ್ತ ವಲಯವಾಗಿ ನಗರವನ್ನಾಗಿ ಘೋಷಿಸಿ, ಸಾಂಸ್ಕೃತಿಕ, ಅರಮನೆಗಳ ನಗರ, ಪ್ರವಾಸೋದ್ಯಮ ನಗರವಾಗೇ ಮೈಸೂರನ್ನು ಉಳಿಸಿಕೊಳ್ಳಬೇಕಿದೆ.

–ಎನ್ ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

### ಮೈಸೂರು ವಿವಿ ವಿದ್ಯಾರ್ಥಿನಿಲಯದಲ್ಲಿ ನೀರಿನ ಸಮಸ್ಯೆ ಪರಿಹರಿಸಿ

ಮಾನ್ಯರೆ,

ಮೈಸೂರಿನ ವಿಶ್ವವಿದ್ಯಾಲಯದ ಬಾಲಕರ ವಿದ್ಯಾರ್ಥಿನಿಲಯ 3ನೇ ಬ್ಲಾಕ್‌ನಲ್ಲಿ ಕುಡಿಯುವ ನೀರಿನ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳು ಇಲ್ಲಿ ವಸತಿ ಪಡೆದು ಓದು ಮುಂದುವರಿಸುವುದುಂಟು. ಆದರೆ ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗದ ಕಾರಣ ಅವರ ದೈನಂದಿನ ಚಟುವಟಿಕೆಗಳನ್ನೇ ವ್ಯತ್ಯಯಗೊಳಿಸಿದೆ. ವಿದ್ಯಾರ್ಥಿಗಳು ನಮ್ಮ ದೇಶದ ಭವಿಷ್ಯ. ಅವರಿಗೆ ಮೂಲಭೂತ ಸೌಲಭ್ಯಗಳು ಲಭ್ಯವಾಗುವುದು ಅತ್ಯಂತ ಅಗತ್ಯ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ವಿದ್ಯಾರ್ಥಿನಿಲಯದಲ್ಲಿ ನೀರಿನ ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ಎನ್.ದರ್ಶನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

# ಮಹಾರಾಜರು ಕೊಟ್ಟ ಮಾಣಿಕ್ಯ ಮೈಸೂರು; ಹಾಳು ಮಾಡದಿರಿ ಮಹಾರಾಯರಾ...



ರಾಜ–ಮಹಾರಾಜರು ಆಳಿದ ಮೈಸೂರು ಸಂಸ್ಥಾನ ಹಾಗೂ ಅರಮನೆ ನಗರಿ ಮೈಸೂರಿಗೆ ತನ್ನದೇ ಆದ ಹಿರಿಮೆ–ಗರಿಮೆಗಳಿವೆ. ನಮ್ಮ ಮೈಸೂರಿನ ಹಿರಿಮೆಯನ್ನು ಉಳಿಸಿ, ಬೆಳೆಸುವುದು ಎಲ್ಲರ ಹೊಣೆಗಾರಿಕೆ ಆಗಿರುತ್ತದೆ. 1950ರಲ್ಲಿ ಮೈಸೂರಿನ ಜನಸಂಖ್ಯೆ 2.37 ಲಕ್ಷ, 2000ರಲ್ಲಿ 7.87ಲಕ್ಷ, 2011ರ ಜನಗಣತಿ ಪ್ರಕಾರ 9.95 ಲಕ್ಷ. ಮತ್ತೆ ಈಗ ಅಂದಾಜಿಸಿರುವಂತೆ 2025ರಲ್ಲಿ 16.00 ಲಕ್ಷವನ್ನು ಮೀರಿ ಜನಸಂಖ್ಯೆ ಏರುತಲಿದೆ. ಗ್ರೇಟರ್ ಬೆಂಗಳೂರಿನ ಜನಸಂಖ್ಯೆ 144.00 ಲಕ್ಷಕ್ಕೂ ಹೆಚ್ಚು ಇದೆ. ಹೋಲಿಕೆ ಮಾಡುವುದಾದರೆ ಬೆಂಗಳೂರಿನ ಜನಸಂಖ್ಯೆಯಲ್ಲಿ ಕೇವಲ ಶೇ.11ರಷ್ಟು ಜನಸಂಖ್ಯೆ ಮಾತ್ರ ಮೈಸೂರಿನಲ್ಲಿದೆ. ಹಾಗೆಯೇ ಬಂದುಹೋಗುವ ಜನಸಂಖ್ಯೆಯು ಬೆಂಗಳೂರಿನಂತಿರದೆ ತೀರಾ ಕಡಿಮೆ ಇದೆ. ಸಂಚಾರ ವ್ಯವಸ್ಥೆ ಅನುಕೂಲ ಚೆನ್ನಾಗುತ್ತಿದ್ದಂತೆ ಬೆಂಗಳೂರಿಗರ ದೃಷ್ಟಿ ಮೈಸೂರಿನ ಕಡೆಗೆ ಹರಿಯುತ್ತಿದೆ. ಇದು ಅವರಿಗೆ ಒಳ್ಳೆಯದಿರಬಹುದು ಮೂಲ ನಿವಾಸಿಗಳಾದ ನಮಗೆ..?.

1950ರಲ್ಲಿ ಮೈಸೂರಿನಲ್ಲಿ ಜನಜೀವನ ಶಾಂತವಾಗಿತ್ತು, ಪರಿಸರ ಪ್ರಶಾಂತವಾಗಿತ್ತು. ಅರಸೊತ್ತಿಗೆ ಆಡಳಿತದ ಹವಾ ಪ್ರಜಾಪ್ರಭುತ್ವ ಪ್ರಾರಂಭವಾಗಿದ್ದರೂ ಇನ್ನೂ ಜನರ ಮನಸ್ಸಲ್ಲಿ ಬೇರೂರಿದೆ. ನೀಡಿದ ಒಳ್ಳೆಯ ಆಡಳಿತದಿಂದಾಗಿ ಮಹಾರಾಜರ ಮೇಲಿನ ಪ್ರೀತಿ ಮತ್ತು ಗೌರವ ಇಂದಿಗೂ ಕಡಿಮೆ ಆಗಿಲ್ಲ. ಇಡೀ ನಗರವು ವಿಸ್ತಾರದಲ್ಲಿ ಅರಮನೆಯನ್ನು ಕೇಂದ್ರಬಿಂದುವಾಗಿ ಇಟ್ಟು ವೃತ್ತವನ್ನು ಎಳೆದರೆ ಮೂರು ಕಿಮೀ ರೆಡಿಯಸ್(ತ್ರಿಜ್ಯ)ನ್ನು ದಾಟುತ್ತಿರಲಿಲ್ಲ. ಕಾಲ ಉರುಳಿದಂತೆ ಅಂಕೆಗೆ ಸಿಗದೆ ಮೈಸೂರು ಬೆಳೆಯುತ್ತಿದೆ, ಶ್ರೀರಂಗಪಟ್ಟಣ–ಬನ್ನೂರು–ತಿ.ನರಸೀಪುರ–ನಂಜನಗೂಡು–ಜಯಪುರ–ಬಿಳಿಕೆರೆ ಊರುಗಳ ದಾಟಿ ಬೆಳೆಯುತ್ತಿದೆ. ಸುತ್ತಲ ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಶಿಸ್ತುಬದ್ಧವಾಗಿ ಹಾಗೂ ದೂರದೃಷ್ಟಿಯೊಂದಿಗೆ ಅಭಿವೃದ್ಧಿಗೊಂಡ ಮೈಸೂರು ಈಗ ನಮ್ಮ ದುರಾಸೆಯ ಫಲದಿಂದ ಅಸ್ತವ್ಯಸ್ತವಾಗಿ ಬೆಳೆಯುತ್ತಿರುವುದು ಸಪ್ತ ಅರಮನೆಗಳ ನಗರ, ಸಾಂಸ್ಕೃತಿಕ ನಗರ ಎಂಬ ಹೆಗ್ಗಳಿಕೆಗೆ ಚ್ಯುತಿ ಬರುತ್ತಿದೆ ಎಂದು ನನ್ನಂತೆಯೇ ಬಹಳಷ್ಟು ನಾಗರಿಕರಿಗೆ ಅನಿಸದೆ ಇರದು. ಅಬ್ರಾಹಂ ಲಿಂಕನ್‌ರವರ ಮಾತೊಂದಿದೆ;

Give me six hours to chop down a tree and I will spend the first four hours sharpening the axe. (ಮರ ಕಡಿಯಲು ಉಪಯೋಗಿಸುವ ಕೊಡಲಿ ಮೊಂಡಾಗಿದ್ದರೆ ಮರ ಕಡಿಯುವುಕ್ಕೆ ಶ್ರಮದ ಜೊತೆಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ)

ಈ ನಿಟ್ಟಿನಲ್ಲಿ ನಮ್ಮಲ್ಲಿ ಒಂದು ಪರಿಪಾಠವಿದೆ; ಕೈಗೊಳ್ಳುವ ಯಾವುದೇ ಯೋಜನೆ ಇರಲಿ ಅದರ ರೂಪುರೇಷೆಗಳನ್ನು ಸಿದ್ದಪಡಿಸುವಾಗ ಸಾಕಷ್ಟು ಸಮಯ ತೆಗೆದುಕೊಳ್ಳುವುದಿಲ್ಲ. ಜನಾಭಿಪ್ರಾಯ ಸಂಗ್ರಹಿಸುವುದಿಲ್ಲ. ತಜ್ಞರ ಸಲಹೆಗಳನ್ನು ಪರಿಗಣಿಸುವುದಿಲ್ಲ. ಇಲ್ಲಿ ರಾಜಕೀಯ ಇಚ್ಛಾಶಕ್ತಿಯ ಪ್ರಭಾವ ಮಾತ್ರವೇ ಬಲಿಷ್ಠವಾಗಿರುತ್ತದೆ. ಅಲ್ಲಿಯೂ ಒಂದು ಸಮಸ್ಯೆ ಇದೆ ಆಡಳಿತದಲ್ಲಿದ್ದವರು ಮಾಡಿದ್ದನ್ನು ವಿರೋಧ ಪಕ್ಷದಲ್ಲಿ ಇರುವವರು ಯೋಜನೆ ಸರಿ ಇರಲಿ ಅಥವಾ ತಪ್ಪಿರಲಿ ವಿರೋಧಿಸುವುದು ಅವರ ಸಿದ್ಧಾಂತ, ಯೋಜನೆಗಳು ಪ್ರಗತಿಯಲ್ಲಿರುವಾಗ ಆಡಳಿತ ಬದಲಾದರೆ ಯೋಜನೆಗಳು ಮುಂದುವರಿಯದೆ ನಿಂತೇ ಬಿಡುತ್ತವೆ.

ಇಂಥ ಸಮಸ್ಯೆಗಳು ಪ್ರಭುತ್ವ ಆಡಳಿತದಲ್ಲಿ ಇರಲಿಲ್ಲವಾದ್ದರಿಂದ ಕೈಗೊಳ್ಳುವ ಎಲ್ಲಾ ಯೋಜನೆಗಳು ತ್ವರಿತವಾಗಿ, ಯಶಸ್ವಿಯಾಗಿ ಅನುಷ್ಠಾನವಾಗಿರುತ್ತಿದ್ದವು ಹಾಗೂ ಜನ ಮೆಚ್ಚುವಂತಿರುತ್ತಿದ್ದವು. ಮಿಗಿಲಾಗಿ ಕಮಿಷನ್ ಯುಗವಾಗಿರಲಿಲ್ಲ, ಭ್ರಷ್ಟರಹಿತವಾದ ಯುಗವಾಗಿತ್ತು.

ಈಗ ಮೈಸೂರು ನಗರವನ್ನು ಗ್ರೇಡ್ ಒನ್ ಸಿಟಿಯಾಗಿ ಉನ್ನತೀಕರಿಸಲಾಗುತ್ತಿದೆ (ಗ್ರೇಟರ್ ಮೈಸೂರು ಅಂತಲೂ ಹೇಳುತ್ತಿದ್ದಾರೆ). ಕೆಲವರಿಗೆ ವಿಶೇಷವಾಗಿ ಉದ್ಯಮಿಗಳಿಗೆ, ರಿಯಲ್ ಎಸ್ಟೇಟ್ ಕ್ಷೇತ್ರದವರಿಗೆ ಖುಷಿಯ ವಿಚಾರವಾಗಿದೆ. ಮೈಸೂರು ಅಭಿವೃದ್ಧಿಗೊಂಡರೆ ನಮಗೆಲ್ಲಾ ಸಂತೋಷದ ವಿಷಯವೇ ಆಗಿದೆ. ಮೊದಲೇ ಹೇಳಿದಂತೆ ಮರ ಕಡಿಯುವ ಮೊದಲು ಕೊಡಲಿಯನ್ನು ಹರಿತ ಮಾಡಿಕೊಳ್ಳುವುದು ಒಳಿತು, ಇದರಿಂದ ಯೋಜನೆಗಳು ನೂರು ಕಾಲ ಉಪಯೋಗಕ್ಕೆ ಬರುತ್ತವೆ.

ಯೋಜನೆಗಳು ಫಲಪ್ರದವಾಗಿದ್ದರೂ ಯೋಜನೆಯ ಪ್ರಾರಂಭದಲ್ಲಿ ಮಾಡುವ ಸಣ್ಣ ತಪ್ಪಿನಿಂದ ಹಳ್ಳ ಹಿಡಿಯುತ್ತಿರುವ ಒಂದೆರಡು ಯೋಜನೆಗಳ ಬಗ್ಗೆ ನನಗಿರುವ ಇಂಜಿನಿಯರಿಂಗ್ ಜ್ಞಾನದಲ್ಲಿ ತಿಳಿಸಲು ಬಯಸುವೆ. ಇಲ್ಲಿ ಯಾರನ್ನೂ ಬೊಟ್ಟು ಮಾಡಿ ತೋರಿಸುವಂತಹದ್ದಲ್ಲ, ಪ್ರಾರಂಭದಲ್ಲಿ ಎರಡೂ ಉತ್ತಮ ಯೋಜನೆಗಳೇ ಆಗಿದ್ದವು.

1979ರಲ್ಲಿ ಪ್ರಾರಂಭವಾದ ವರುಣ ನಾಲೆ ಅಥವಾ ಡಿ.ದೇವರಾಜ ಅರಸು ನಾಲೆಯು 126 ಕಿಮೀ ಉದ್ದವಿದೆ. ಇದು ಶ್ರೀರಂಗಪಟ್ಟಣ, ಮೈಸೂರು, ತಿ.ನರಸೀಪುರ, ನಂಜನಗೂಡು ಮತ್ತು ಹೆಚ್.ಡಿ.ಕೋಟೆ ತಾಲೂಕುಗಳ ಒಟ್ಟು 32,375 ಹೆಕ್ಟೇರ್ಸ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಮಹತ್ತರವಾದ ಯೋಜನೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸು ಅವರ ಕನಸಿನ ಯೋಜನೆಯಾಗಿತ್ತು. ಈ ನಾಲೆಯಲ್ಲಿ ಬೆಳಗೊಳ ಸಮೀಪ, ಮೈಸೂರು–ಬೆಂಗಳೂರು ರಸ್ತೆ ಮತ್ತು ಮೈಸೂರು–ನಂಜನಗೂಡು ರಸ್ತೆಗಳಲ್ಲಿ ಒಟ್ಟು ಮೂರು ಮೇಲ್ಗಾಲುವೆಗಳು ಇವೆ. ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಾಲೆಯು ಮೈಸೂರಿನ ಹೊರವಲಯದಲ್ಲಿ ಹಾದು ಹೋಗುತ್ತಿತ್ತು, ನಾಲೆಯ ಅಲೈನ್‌ಮೆಂಟ್‌ನಲ್ಲಿ ಲೋಪವೇನು ಇರಲಿಲ್ಲ, ಆ ಕಾಲಕ್ಕೆ!.

> ಬಹಳ ಕಾಲದ ಹಿಂದೆ ಯಾರೋ ಪುಣ್ಯಾತ್ಮ ಮರ ನೆಟ್ಟಿದ್ದಕ್ಕೆ ಅಲ್ಲವೇ ನಾವೆಲ್ಲಾ ಇಂದು ಆ ಮರದ ನೆರಳಲ್ಲಿ ನಿಂತು ವಿಶ್ರಾಂತಿ ಪಡೆಯುತ್ತಿರುವುದು. ನಮ್ಮ ಯೋಜನೆಗಳು ಸಹ ಹಾಗೆ ಇರಬೇಕು. ನಾವು ಇಂದು ಕೈಗೊಂಡ ಯೋಜನೆಗಳು ಯಾವುದೇ ಇರಲಿ, ನೂರು ವರ್ಷ ಕಳೆದರೂ ಬಳಕೆಗೆ ಯೋಗ್ಯವಾಗಿರುವಂತೆ ಕಾರ್ಯಗತ ಆಗಬೇಕು.

ಯೋಜನೆ ಪ್ರಾರಂಭವಾಗಿ 45 ವರ್ಷಗಳು ಕಳೆದಿರುವ ಇಂದು ಕೆಆರ್‌ಎಸ್ ಅಣೆಕಟ್ಟೆಯಿಂದ ಪ್ರಾರಂಭಿಸಿ ವರುಣ ನಾಲೆಯ ಉದ್ದಕ್ಕೂ ಪರಿವೀಕ್ಷಣೆ ಮಾಡಿದರೆ ಈ ನಾಲೆ ಬೇಕಿತ್ತಾ? ಅನಿಸುವುದುಂಟು. ಅಂದು ಹೊರವಲಯದಲ್ಲಿದ್ದ ನಾಲೆಯು ಈಗ ಮೈಸೂರು ನಗರವನ್ನು ಭೇದಿಸಿ ಹರಿಯುತ್ತಿದೆ. ನಾಲೆಯ ಇಕ್ಕೆಲಗಳಲ್ಲಿ ತ್ಯಾಜ್ಯವನ್ನು ಸುರಿಯುತ್ತಿರುವುದಲ್ಲದೆ, ಹರಿಯುವ ನೀರಿಗೂ ಗಲೀಜು ಬಿಡುತ್ತಿರುವುದರಿಂದ ನೀರು ಮಾಲೀನ್ಯಗೊಳ್ಳುತ್ತಿದೆ ಹಾಗೂ ಆಗಾಗ್ಗೆ ಆಕಸ್ಮಿಕವಾಗಿ ಜನಜಾನುವಾರುಗಳ ಸಾವುಗಳು ಆಗುತ್ತಿರುತ್ತವೆ. ಕಾರಣಾಂತರಗಳಿಂದ ಅಣೆಕಟ್ಟೆಯ ನೀರು ಕೊನೆಯ ಭಾಗಕ್ಕೆ ತಲುಪುವುದಿಲ್ಲವಾದ್ದರಿಂದ ಕಬಿನಿ ನದಿಯಿಂದ ಲಿಫ್ಟ್ ಮಾಡಿ ದೂರ ಗ್ರಾಮದ ಬಳಿ ನಾಲೆಯ 80ನೇ ಕಿಮೀಗೆ ಹರಿಸಿ ಕೊನೆಯವರೆಗೆ ಕೆರೆ ತುಂಬಿಸುವ ಯೋಜನೆಯಡಿ ನೀರು ಕೊಡಲಾಗುತ್ತಿದೆ. ಮುಖ್ಯನಾಲೆಯ ಸುಮಾರು 90ನೇ ಕಿಮೀವರೆಗೆ ಇಕ್ಕೆಲಗಳಲ್ಲಿ ಹಲವು ಬಡಾವಣೆಗಳು ಅಭಿವೃದ್ಧಿಗೊಂಡಿವೆ. ಕೆಲವು ಕಡೆಗಳಲ್ಲಿ ಭವ್ಯ ಬಂಗಲೆಗಳನ್ನು ಕಟ್ಟಿಕೊಂಡು ಜನರು ವಾಸ ಇದ್ದಾರೆ. ನೀರಾವರಿ ಜಮೀನುಗಳು ಬಡಾವಣೆಗಳಾಗುತ್ತಿರುವ ಕಾರಣ ಮೂಲ ಅಚ್ಚುಕಟ್ಟು ದಿನ ಕಳೆದಂತೆ ಕಡಿಮೆಯಾಗುತ್ತಾ ಬರುತ್ತಿದೆ. ಮೂಲ ಉದ್ದೇಶವು ನೆಲ ಕಚ್ಚುವುದಾದರೆ ಅನ್ನಿಸದೇ ಇರದು ನಾಲೆ ಬೇಕಿತ್ತಾ?, ನಿಸ್ಸಂಶಯವಾಗಿ ಅಂದಿಗೆ ಇದೊಂದು ಉತ್ತಮವಾದ ಯೋಜನೆಯಾಗಿತ್ತು.



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ಅದೇ ರೀತಿ ಅರಮನೆಯ ಸುತ್ತ ಸೌಂದರ್ಯವನ್ನು ಇಮ್ಮಡಿಗೊಳಿಸುವ ಸದುದ್ದೇಶದಿಂದ ಬಹಳಷ್ಟು ಸಮಯ ತೆಗೆದುಕೊಂಡು ಕಲ್ಲುಕಂಬಗಳ ಕೈಪಿಡಿಯನ್ನು(Hand Rails) ನಿರ್ಮಿಸಲಾಗಿತ್ತು. ಈಗ ಅದರ ಪರಿಸ್ಥಿತಿ ಏನಾಗಿದೆ?. ಅರಮನೆಯ ಸೌಂದರ್ಯವನ್ನು ಇಮ್ಮಡಿಗೊಳಿಸುವ ಬದಲು ವಿಕಾರಗೊಳಿಸಿದೆ. ಹೀಗೆ ಸಾಕಷ್ಟಿವೆ, ಉದಾಹರಣೆಯಾಗಿ ಎರಡು ಯೋಜನೆಗಳನ್ನು ಮಾತ್ರವೇ ಉಲ್ಲೇಖಿಸಿದ್ದೇನೆ. ದುರಂತವೆಂದರೆ ಈ ಲೇಖನವನ್ನು ಬರೆಯುತ್ತಿರುವಾಗಲೇ (11–12–2025) ಮೈಸೂರು ಅರಮನೆಯ ವರಹಾ ದ್ವಾರದ ಚಾವಣಿಯ ಗಾರೆ ಕುಸಿಯಿತು ಎಂಬ ವಿಚಾರ ಕಿವಿಗೆ ಬಿತ್ತು. ಇನ್ನು ಬಲರಾಮ ದ್ವಾರದ ಕಡೆಯ ಸಾಹಿತ್ಯ ಪರಿಷತ್ತು ಕಟ್ಟಡ ಇಂದೋ, ನಾಳೆಯೋ ಕುಸಿಯುವ ಸ್ಥಿತಿಯಲ್ಲಿದೆ. ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ಕೆಲಸವು ಮರೀಚಿಕೆ ಎನ್ನುವುದು ತಿಳಿದಿರುವಂತಹದ್ದೆ.

ವಾರೆನ್ ಬಫೆಟ್ ಎಂಬ ಅಮೆರಿಕಾದ ಹೂಡಿಕೆದಾರ, ಸಮಾಜಮುಖಿ ಮತ್ತು ಸಂಸ್ಥೆಯೊಂದರ ಅಧ್ಯಕ್ಷ ಹೇಳಿರುವ ಒಂದು ಪ್ರೇರಣಾ ನುಡಿ; Someones sitting in the shade today because someone planted a tree a long time ago (ಬಹಳ ಕಾಲದ ಹಿಂದೆ ಯಾರೋ ಪುಣ್ಯಾತ್ಮ ಮರ ನೆಟ್ಟಿದ್ದಕ್ಕೆ ಅಲ್ಲವೇ ಇಂದು ಮರದ ನೆರಳಿನಲ್ಲಿ ನಿಂತು ವಿಶ್ರಾಂತಿ ಪಡೆಯುತ್ತಿರುವುದು). ನಮ್ಮ ಯೋಜನೆಗಳು ಸಹ ಹಾಗೆ ಇರಬೇಕು. ನಾವು ಇಂದು ಕೈಗೊಂಡ ಯೋಜನೆಗಳು ಯಾವುದೇ ಇರಲಿ, ನೂರು ವರ್ಷ ಕಳೆದರೂ ಬಳಕೆಗೆ ಯೋಗ್ಯವಾಗಿರುವಂತೆ ಕಾರ್ಯಗತ ಆಗಬೇಕು. ನಮ್ಮ ಮೈಸೂರಿನಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1902–1940ರ ಅವಧಿಯಲ್ಲಿ ಅನುಷ್ಠಾನಗೊಳಿಸಿದ ಎಲ್ಲಾ ಯೋಜನೆಗಳು ಇಂದಿಗೂ ಬಳಕೆಗೆ ಯೋಗ್ಯ ಎನಿಸಿವೆ. ಹಾಗಾಗಿಯೇ ಅವರು ನಮಗೆ ಆದರ್ಶರಾಗಿದ್ದಾರೆ.

ಗ್ರೇಡ್ ಒನ್ ಮೈಸೂರೋ ಅಥವಾ ಗ್ರೇಟರ್ ಮೈಸೂರೋ ಒಟ್ಟಿನಲ್ಲಿ ಘೋಷಿಸುವ ಮೊದಲು ಸಮಗ್ರವಾದ ಚಿಂತನ–ಮಂಥನವಾಗಲಿ, ಜನಾಭಿಪ್ರಾಯಗಳನ್ನು ಕ್ರೂಢೀಕರಿಸಲಿ, ಮುಂದಿನ ನೂರು ವರ್ಷಕ್ಕೂ ಇದರಿಂದ ಜನರಿಗೆ ಉಪಯೋಗ ಆಗುವಂತೆ ವಿಸ್ತೃತ ವರದಿಯನ್ನು ಸಿದ್ಧಪಡಿಸಿಕೊಳ್ಳಲಿ. ಅದರಂತೆ ಸಾಂಸ್ಕೃತಿಕ ನಗರವು ಬೆಳೆದು ವಿಶ್ವದಲ್ಲಿ ಗುರುತಿಸಿಕೊಂಡಿರುವ ಹೆಸರು ಶಾಶ್ವತವಾಗಿ ಉಳಿಯಲಿ. ನಾನಿಲ್ಲಿ ಚಾಮುಂಡಿಬೆಟ್ಟದ ಮೇಲಿನ ಅಭಿವೃದ್ಧಿ ಕೆಲಸಗಳನ್ನು ಪ್ರಸ್ತಾಪಿಸಿಲ್ಲ. ಆರು ವರ್ಷಗಳ ಹಿಂದೆ ಕುಸಿದಿರುವ ನಂದಿ ಕಡೆಯ ರಸ್ತೆಯನ್ನು ಇಲ್ಲಿವರೆಗೂ ಪುನರ್ ನಿರ್ಮಿಸಲಾಗಿಲ್ಲ. ಏಕೆ ನಮ್ಮಲ್ಲಿ ಅಂತಹ ಸಮರ್ಥ ಅಧಿಕಾರಿ ವರ್ಗ, ತಜ್ಞರಿಲ್ಲವೇ! ಮೈಸೂರು ಸಂಸ್ಥಾನದ ಪ್ರಬುದ್ಧ ನಾಗರಿಕರು ಚಿಂತಿಸಬೇಕಾಗಿದೆ.

ನಿವೃತ್ತರ ಸ್ವರ್ಗ ಮೈಸೂರು ಅನಾವಶ್ಯಕ ಯೋಜನೆಗಳಿಂದ ನರಕವಾಗುವುದು ಬೇಡ, ಯೋಜನೆಗಳನ್ನು ರೂಪಿಸುವುದಾದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತೆ ದಿಟ್ಟ ನಿರ್ಧಾರದ ಗಟ್ಟಿ ಕೆಲಸಗಳು ಆಗಲಿ, ಹೌದಲ್ಲವಾ?

# ಬಿಜೆಪಿಯಲ್ಲಿ ವೀರಶೈವ ಲಿಂಗಾಯತರ ಕಡೆಗಣನೆ ಆರೋಪ; ತಟಸ್ಥರಾಗುಳಿಯುವ ನಿರ್ಧಾರ

ಮೈಸೂರು,ಡಿ.12(ಎಸ್‌ಪಿಎನ್)– ಭಾರತೀಯ ಜನತಾ ಪಾರ್ಟಿ ಮೈಸೂರು ನಗರ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಮುಖಂಡರನ್ನು ಕಡೆಗಣಿಸಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದೇ ತಟಸ್ಥರಾಗಿರಲು ಶುಕ್ರವಾರ ನಡೆದ ಸಭೆಯಲ್ಲಿ ಸಮುದಾಯ ಒಮ್ಮತದ ತೀರ್ಮಾನ ಕೈಗೊಂಡಿದೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೂರಾರು ವೀರಶೈವ ಲಿಂಗಾಯತ ಮುಖಂಡರು ಪಾಲ್ಗೊಂಡು 11 ನಿರ್ಣಯಗಳನ್ನು ಕೈಗೊಂಡಿದ್ದಾರೆ. ಮೈಸೂರು ನಗರ ಮತ್ತು ಜಿಲ್ಲಾ ಘಟಕದಲ್ಲಿ ಪಕ್ಷದ ಪ್ರಮುಖ ಸ್ಥಾನಗಳ ನೇಮಕಾತಿ ಹಾಗೂ ಇತರೆ ವಿಷಯಗಳಲ್ಲೂ ವೀರಶೈವ ಲಿಂಗಾಯತ ಜಿಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ.

**ಎಲ್ಲಾ ವಿಷಯದಲ್ಲೂ ತಾರತಮ್ಯ:** ಪ್ರಸ್ತುತ ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಹತ್ತಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದಿರುವ ಮುಖಂಡರಿಗೆ ಪ್ರಮುಖ ಜವಾಬ್ದಾರಿ ನೀಡುವ ವಿಚಾರದಲ್ಲಿ ತಾರತಮ್ಯ ತೋರಲಾಗುತ್ತಿದೆ. ಸ್ಥಳೀಯ (ತಾಪಂ, ಜಿಪಂ ಹಾಗೂ ಇತರೆ ಕ್ಷೇತ್ರಗಳಲ್ಲಿ) ಸಂಸ್ಥೆಗಳ ಚುನಾವಣೆಯಲ್ಲಿ ಸಮಾಜದ ಜನಸಂಖ್ಯೆ ಅನುಗುಣವಾಗಿ ಟಿಕೆಟ್ ನೀಡಬೇಕು.



ಮೈಸೂರಿನಲ್ಲಿ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲೆಯ ನೂರಾರು ವೀರಶೈವ ಲಿಂಗಾಯತ ಮುಖಂಡರು ಸಭೆ ನಡೆಸಿದರು.

**ಹಿರಿಯರ ಕಡೆಗಣನೆ:** ಸಮುದಾಯದ ಹಿರಿಯ ಮುಖಂಡರನ್ನು ಪಕ್ಷದ ವಿವಿಧ ಹಂತದ ನೇಮಕಾತಿ ವೇಳೆ ಪರಿಗಣಿಸಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿಗಮ ಮಂಡಳಿಗಳಲ್ಲಿ ನಮ್ಮ ಸಮುದಾಯದ ಮುಖಂಡರನ್ನು ಪರಿಗಣಿಸದೇ 'ಮಲತಾಯಿ ಧೋರಣೆ' ಅನುಸರಿಸಲಾಗುತ್ತಿದೆ ಎಂದು ದೂರಿದ್ದಾರೆ.

ಬಿಜೆಪಿ ಮೈಸೂರು ನಗರ ಮತ್ತು ಜಿಲ್ಲಾ ಘಟಕದ ಕೋರ್ ಕಮಿಟಿಯಲ್ಲಿ ವೀರಶೈವ ಲಿಂಗಾಯತ ಸಮಾಜದ ನಾಯಕರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿಲ್ಲ. ಹತ್ತಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದವರಿಗೆ ಪ್ರಮುಖ ಹುದ್ದೆಗಳನ್ನು ನೀಡದೇ ಹೊಸಬರಿಗೆ ನೀಡುತ್ತಿರುವುದಕ್ಕೆ ಸಭೆಯಲ್ಲಿ ತೀವ್ರ ಬೇಸರ ವ್ಯಕ್ತವಾಗಿದೆ.

**ಬಾವುಟ ಹಿಡಿಯದವರ ಮಾತಿಗೆ ಮನ್ನಣೆ ಏಕೆ?:** ಮುಂದಿನ ದಿನಗಳಲ್ಲಿ ಮೈಸೂರು ನಗರಪಾಲಿಕೆ ಚುನಾವಣೆ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆ ಚುನಾವಣೆ ಬರುತ್ತಿದ್ದು, ವೀರಶೈವ ಲಿಂಗಾಯತ ಸಮುದಾಯದವರಿಗೆ ಹೆಚ್ಚಿನ ಟಿಕೆಟ್ ನೀಡಬೇಕು. ಜನಸಂಖ್ಯೆ ಹೆಚ್ಚಿರುವ ಕಡೆ ಮೀಸಲಾತಿ ಬದಲಾಯಿಸಲು ಕ್ರಮ ಕೈಗೊಳ್ಳಬೇಕು. ಪಕ್ಷದ ಬಾವುಟ ಹಿಡಿಯದವರು ಸಮಾಜದ ಕೆಲವು ಮುಖಂಡರ ಬಗ್ಗೆ ರಾಜ್ಯಾಧ್ಯಕ್ಷರಿಗೆ ತಪ್ಪು ಮಾಹಿತಿ ರವಾನಿಸಿದ್ದಾರೆ. ಅಧ್ಯಕ್ಷರಿಗೆ ತಪ್ಪು ಮಾಹಿತಿ ನೀಡಿರುವ ಮುಖಂಡರನ್ನು ಪ್ರಮುಖ ನಿರ್ಧಾರಗಳಿಂದ ದೂರವಿಟ್ಟು, ಪಕ್ಷ ನಿಷ್ಠರಿಗೆ ಪ್ರಮುಖ ಸ್ಥಾನ ನೀಡಬೇಕು.

**ಇಬ್ಬರು ಅಧ್ಯಕ್ಷರು ಸಂಘಟನೆ ಮಾಡುತ್ತಿಲ್ಲ:** ಈಗಿನ ನಗರ ಮತ್ತು ಗ್ರಾಮಾಂತರ ಘಟಕದ ಅಧ್ಯಕ್ಷರು, ವೀರಶೈವ ಲಿಂಗಾಯತ ಸಮಾಜವನ್ನು ಇತರೆ ಸಮುದಾಯದೊಂದಿಗೆ ಒಗ್ಗೂಡಿಸಿ ಪಕ್ಷ ಕಟ್ಟುವಲ್ಲಿ ವಿಫಲರಾಗಿದ್ದಾರೆ. ಅಂತೆಯೇ ವಿಭಾಗೀಯ, ಸಹ ಪ್ರಭಾರಿಗಳ ನೇಮಕದಲ್ಲೂ ಸಮಾಜಕ್ಕೆ ಅವಕಾಶ ನೀಡಿಲ್ಲ.

> **ಇದು ಪಕ್ಷ ವಿರೋಧಿ ಸಭೆಯಲ್ಲ:** ಇಂದು ನಡೆದ ಸಭೆ ಪಕ್ಷ ವಿರೋಧಿಯಲ್ಲ. ಬಿಜೆಪಿ ಪಕ್ಷ ಮತ್ತು ರಾಜ್ಯಾಧ್ಯಕ್ಷರ ಕೈ ಬಲಪಡಿಸಲು ಎಲ್ಲಾ ಮುಖಂಡರು ಉತ್ಸುಕರಾಗಿದ್ದಾರೆ. ಆದರೆ, ಪದಾಧಿಕಾರಿಗಳು ಇತರೆ ಹುದ್ದೆಗಳ ನೇಮಕಾತಿ ವಿಚಾರದಲ್ಲಿ ಸಮುದಾಯಕ್ಕಾಗಿರುವ ಅನ್ಯಾಯ ಸರಿಪಡಿಸುವವರೆಗೆ, ವೀರಶೈವ ಲಿಂಗಾಯತ ಸಮಾಜದ ಜಿಲ್ಲಾ ಮುಖಂಡರು ಪಕ್ಷದ ಸಕ್ರಿಯ ಚಟುವಟಿಕೆಗಳಿಂದ ದೂರ ಉಳಿದು, ತಟಸ್ಥರಾಗಿರುವ ನಿರ್ಣಯ ಕುರಿತು ರಾಜ್ಯಾಧ್ಯಕ್ಷರ ಗಮನಕ್ಕೆ ತರುತ್ತೇವೆ.
>
> - ಕೆ.ವಸಂತಕುಮಾರ್, ಬಿಜೆಪಿ ಮುಖಂಡ

**ಪ್ರೀತಂಗೌಡ ವಿರುದ್ಧ ಆಕ್ರೋಶ:** ಪಕ್ಷದ ರಾಜ್ಯದ ಪ್ರಧಾನ ಕಾರ್ಯದರ್ಶಿ, ಮೈಸೂರು ಜಿಲ್ಲಾ ಉಸ್ತುವಾರಿ, ಮಾಜಿ ಶಾಸಕ ಪ್ರೀತಂಗೌಡ ಅವರು ಮೈಸೂರಿನ ವೀರಶೈವ ಲಿಂಗಾಯತ ಮುಖಂಡರ ವಿರೋಧಿ ನಿಲುವು ಹೊಂದಿದ್ದಾರೆ ಎಂದು ಕೆಲ ಮುಖಂಡರು ಸಭೆಯಲ್ಲಿ ಬೇಸರ ಹೊರಹಾಕಿದ್ದಾರೆ. ಅಲ್ಲದೆ, ಪ್ರೀತಂಗೌಡರು ಕಾಂಗ್ರೆಸ್ ಪರ ಕೆಲಸ ಮಾಡುತ್ತಿದ್ದು, ಅವರನ್ನು ಕೂಡಲೇ ಪಕ್ಷದಿಂದ ಉಚ್ಚಾಟಿಸಿ, ಬೇರೆಯವರನ್ನು ಉಸ್ತುವಾರಿಯಾಗಿ ನೇಮಿಸಬೇಕು.

ಬಿಜೆಪಿಯಲ್ಲಿ ವೀರಶೈವ ಲಿಂಗಾಯತ ಮುಖಂಡರಿಗೆ ಆಗಿರುವ ಅನ್ಯಾಯದ ಬಗ್ಗೆ ಈ ಹಿಂದೆಯೇ ಸ್ಥಳೀಯ ಮುಖಂಡರಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗಾಗಿ ಈ ಸಮಸ್ಯೆ ಬಗೆಹರಿಸಲು ಖುದ್ದು ರಾಜ್ಯಾಧ್ಯಕ್ಷರೇ ಮಧ್ಯಪ್ರವೇಶಿಸಬೇಕು ಎಂಬುದು ಸೇರಿದಂತೆ ಒಟ್ಟು 11 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ಸಭೆಯಲ್ಲಿ ಬಿಜೆಪಿ ಮುಖಂಡರಾದ ಕೆ.ವಸಂತ ಕುಮಾರ್, ಬಿ.ಎಸ್ ಸದಾನಂದ, ಗುರುಸ್ವಾಮಿ, ಬಿ.ವಿ. ಮಂಜುನಾಥ್, ಖಂಡೇಶ್, ಶರತ್ ಪುಟ್ಟಬುದ್ಧಿ, ಗೆಜ್ಜಗಳ್ಳಿ ಮಹೇಶ್, ಕೇಬಲ್ ಮಹೇಶ್, ಹೆಳವರಹುಂಡಿ ಸಿದ್ದಪ್ಪ, ಅಲನಹಳ್ಳಿ ಮಹದೇವಸ್ವಾಮಿ, ಉಮೇಶ್, ಕೀಳನಪುರ ಮಾದಪ್ಪ, ರಾಜಣ್ಣ, ಚಿಕ್ಕಹಳ್ಳಿ ಕುಮಾರ್, ಎನ್.ವಿ. ವಿನಯ್ ಕುಮಾರ್, ನಂದಿನಿ, ರೇಣುಕ ರಾಜು, ಪುಷ್ಪ, ದಾಕ್ಷಾಯಿಣಿ, ಸ್ವಪ್ನ ನಾಗೇಶ್, ಚಿಕ್ಕಾನ್ಯ ಶಿವಕುಮಾರ್, ದಯಾನಂದ ಪಟೇಲ್, ದಾರಿಪುರ ಚಂದ್ರಶೇಖರ್, ಗೆಜ್ಜಗಳ್ಳಿ ಮಹೇಶ್, ಸಂತೋಷ್, ಸಚಿನ್, ಷಡಕ್ಷರಿ, ದೂರ ವೃಷಬೇಂದ್ರಪ್ಪ ಹಾಗೂ ಸಮಾಜದ ಪ್ರಮುಖರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ






# ಬೆಳಗಾವಿ ವಿಧಾನಮಂಡಲ ಅಧಿವೇಶನ



## ಬಗರ್ ಹುಕುಂ ಭೂಮಿ ಕಬಳಿಕೆದಾರರು; ಇವರಿಗೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕೇಸ್

### ಕಂದಾಯ ಸಚಿವ ಕೃಷ್ಣಬೈರೇಗೌಡ ಕಠಿಣ ನಿರ್ಧಾರ



ಬೆಳಗಾವಿ, ಸುವರ್ಣವಿಧಾನಸೌಧ, ಡಿ.12(ಕೆಎಂಶಿ)– ಕಾನೂನು ಉಲ್ಲಂಘಿಸಿ ಬಗರ್‌ಹುಕುಂ ಭೂಮಿಯನ್ನು ಭೂಕಬಳಿಕೆದಾರರು ಹಾಗೂ ಅಕ್ರಮಗಾರರಿಗೆ ಮಂಜೂರು ಮಾಡಿದ ಅಧಿಕಾರಿಗಳ ವಿರುದ್ಧ ಇಲಾಖೆ ಶಿಸ್ತುಕ್ರಮದ ಜೊತೆಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಶೂನ್ಯವೇಳೆಯಲ್ಲಿ ರಮೇಶ್ ಬಾಬು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಭೂಕಬಳಿಕೆದಾರರಿಗೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ನೀಡುವ ಪ್ರವೃತ್ತಿ ಸಹಿಸಲು ಸಾಧ್ಯವಿಲ್ಲ. ಅಕ್ರಮದಲ್ಲಿ ಕೆಲವು ಅಧಿಕಾರಿಗಳು ಭಾಗಿಯಾಗಿರುವುದು ವಿಷಾದನೀಯ ಎಂದರು.

ನಕಲಿ ಸಾಗುವಳಿ ಚೀಟಿ ಆಧಾರದ ಮೇಲೆ ಖಾತೆಗೆ ಅರ್ಜಿ ಸಲ್ಲಿಸಿದ ಭೂಕಬಳಿಕೆದಾರರ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲು ಮಾಡಲಾಗಿದೆ.

ರೈತರ ಹೆಸರಲ್ಲಿ ನಕಲಿ ಭೂಸಾಗುವಳಿ ಚೀಟಿ ನೀಡುತ್ತಿರುವ ವಿಷಯ ನವೆಂಬರ್ 13 ರಂದು ನಮ್ಮ ಗಮನಕ್ಕೆ ಬರುತ್ತಿದ್ದಂತೆ ತನಿಖಾ ತಂಡ ರಚಿಸಿ ಚಿಕ್ಕನಾಯಕನಹಳ್ಳಿಗೆ ಕಳುಹಿಸಲಾಗಿದೆ.

ತನಿಖೆ ಪ್ರಗತಿಯಲ್ಲಿದ್ದು, ಅಭಿಲೇಖಾಲಯದ ಅಧಿಕಾರಿಗಳ ಸಹಾಯವಿಲ್ಲದೆ ಕಡತಗಳನ್ನು ತಿದ್ದಲು ಸಾಧ್ಯವಿಲ್ಲ. 2018 ರಿಂದ ಈವರೆಗೆ ಅಭಿಲೇಖಾಲಯದ ಎಲ್ಲಾ ಉಸ್ತುವಾರಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ನಕಲಿ ಸಾಗುವಳಿ ಚೀಟಿಯಲ್ಲಿನ ಅಧಿಕಾರಿಗಳ ಸಹಿ ಯಾವುದು ಅಸಲಿ, ಯಾವುದು ನಕಲಿ ಎಂಬ ಪತ್ತೆ ಕಾರ್ಯದಲ್ಲಿ ತನಿಖಾ ತಂಡ ನಿರತವಾಗಿದೆ. ಸಹಿ ತಾಳೆ ವರದಿ ನೀಡಲು ಅಧಿಕಾರಿಗಳು ಇನ್ನೂ ಒಂದು ವಾರ ಸಮಯ ಕೇಳಿದ್ದಾರೆ.

ವರದಿ ಕೈ ಸೇರುತ್ತಿದ್ದಂತೆ ಅಕ್ರಮದಲ್ಲಿ ಶಾಮೀಲಾಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಜೊತೆಗೆ ಇಲಾಖೆ ಶಿಸ್ತು ಕ್ರಮವನ್ನೂ ಜರುಗಿಸಲಾಗುವುದು ಎಂದರು.

## ಮತ್ತೆ ಉ.ಕರ್ನಾಟಕ ಪ್ರತ್ಯೇಕ ರಾಜ್ಯ ಬೇಡಿಕೆ ಇಟ್ಟ ಶಾಸಕ ರಾಜು ಕಾಗೆ



ಬೆಳಗಾವಿ, ಡಿ.12– ಇತ್ತೀಚೆಗೆ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡುವಂತೆ ಒತ್ತಾಯಿಸಿ ಚರ್ಚೆಗೆ ಗ್ರಾಸವಾಗಿದ್ದ ಕಾಗವಾಡ ಶಾಸಕ ರಾಜು ಕಾಗೆ ಚಳಿಗಾಲದ ಅಧಿವೇಶನದಲ್ಲಿ ಮತ್ತೊಮ್ಮೆ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ನಡೆದ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಶಾಸಕ ರಾಜು ಕಾಗೆ, ಸರ್ಕಾರಗಳಿಂದ ದೀರ್ಘಕಾಲದ ನಿರ್ಲಕ್ಷ್ಯ ಮತ್ತು ತಾರತಮ್ಯವನ್ನು ಆರೋಪಿಸಿ ಪ್ರತ್ಯೇಕ ರಾಜ್ಯ ಸ್ಥಾನಮಾನಕ್ಕಾಗಿ ಒತ್ತಾಯಿಸುವುದನ್ನು ಮುಂದುವರಿಸುವುದಾಗಿ ಹೇಳಿದರು.

ಈ ಪ್ರದೇಶಕ್ಕೆ ಪ್ರತ್ಯೇಕ ರಾಜ್ಯ ಸ್ಥಾನಮಾನವನ್ನು ಪರಿಗಣಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರಿಗೂ ಈಗಾಗಲೇ ಪತ್ರ ಬರೆದಿದ್ದೇನೆ. ಕೆಲವು ಮಾಧ್ಯಮ ಸಂಸ್ಥೆಗಳು ಮತ್ತು ಕನ್ನಡಪರ ಸಂಘಟನೆಗಳು ನನ್ನನ್ನು ಟೀಕಿಸಿವೆ. ಆದರೆ ಇನ್ನು ಕೆಲವರು ನನ್ನ ನಿಲುವನ್ನು ಬೆಂಬಲಿಸಿದ್ದಾರೆ. ಅವರು ಟೀಕಿಸಲಿ; ನಾನು ದೃಢವಾಗಿಯೇ ಇರುತ್ತೇನೆ. ನಾನು ಈ ಬೇಡಿಕೆಯನ್ನು ಮುಂದುವರಿಸುತ್ತೇನೆ ಎಂದು ಅವರು ಪ್ರತಿಪಾದಿಸಿದರು.

ತಮ್ಮ ಬೇಡಿಕೆಗೆ ಕಾರಣಗಳನ್ನು ನೀಡಿದ ಶಾಸಕರು, ಸರ್ಕಾರವು ಕಾಗವಾಡ ಸೇರಿದಂತೆ ಐದು ಹೊಸ ತಾಲೂಕುಗಳನ್ನು ಘೋಷಿಸಿದ್ದರೂ, ಆಡಳಿತ ಕಚೇರಿಗಳು ಬಾಡಿಗೆ ಕಟ್ಟಡಗಳಿಂದ ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ವರ್ಷಗಳ ಹಿಂದೆಯೇ ಹೊಸ ತಾಲೂಕು ಕಚೇರಿ ಕಟ್ಟಡಗಳಿಗೆ 8 ಕೋಟಿ ರೂಪಾಯಿ ಮಂಜೂರು ಮಾಡಿತ್ತು ಆದರೆ ಯಾವುದೇ ಪ್ರಗತಿ ಕಂಡುಬಂದಿಲ್ಲ ಎಂದರು.

ಕಡೂರು ತಾಲೂಕಿಗೆ 16 ಕೋಟಿ ರೂಪಾಯಿ ನೀಡಲಾಗಿದೆ. ನಿರ್ಮಾಣಕ್ಕಾಗಿ 8 ಕೋಟಿ ರೂ.ಗಳ ಹಂಚಿಕೆಯನ್ನು 20% ರಷ್ಟು ಪರಿಷ್ಕರಿಸಬೇಕೆಂಬ ನಮ್ಮ ವಿನಂತಿಯನ್ನು ನಿರ್ಲಕ್ಷಿಸಲಾಗಿದೆ. ಪ್ರಮುಖ ಮೂಲಸೌಕರ್ಯ ಯೋಜನೆಗಳು ಸ್ಥಗಿತಗೊಂಡಿವೆ ಎಂದು ಶಾಸಕರು ಹೇಳಿದರು.

## ಪರಿಶಿಷ್ಟರಿಗೆ 3,200 ನ್ಯಾಯಬೆಲೆ ಅಂಗಡಿ



ಬೆಳಗಾವಿ (ಸುವರ್ಣಸೌಧ): ಹೊಸ ಮೀಸಲಾತಿ ಅನುಸಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರಿಗಾಗಿ 3,200 ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ರಾಜ್ಯದ ಗ್ರಾಮೀಣ ಭಾಗದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಆರಂಭಿಸುವ ಕುರಿತಂತೆ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸರ್ಕಾರದ ಗಮನ ಸೆಳೆದರು. ಅದಕ್ಕೆ ಉತ್ತರಿಸಿದ ಮುನಿಯಪ್ಪ, ನಿಯಮದಂತೆ 3 ಕಿಮೀಗೊಂದು ನ್ಯಾಯಬೆಲೆ ಅಂಗಡಿ ತೆರೆಯಲಾಗುವುದು. ಒಂದು ವೇಳೆ ನ್ಯಾಯಬೆಲೆ ಅಂಗಡಿಗಳಿಲ್ಲದ ಕಡೆಗಳಲ್ಲಿ ಸಂಚಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸಲಾಗುವುದು ಎಂದರು.

ಗುಡ್ಡಗಾಡು ಪ್ರದೇಶದಲ್ಲಿ ಕಡಿಮೆ ಪಡಿತರ ಚೀಟಿದಾರರಿದ್ದರೂ ಸಂಚಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸುತ್ತೇವೆ. ಗ್ರಾಮಾಂತರ ಭಾಗದಲ್ಲಿ 500 ಮತ್ತು ನಗರ ಪ್ರದೇಶದಲ್ಲಿ 800 ಪಡಿತರ ಚೀಟಿಗೊಂದು ನ್ಯಾಯಬೆಲೆ ಅಂಗಡಿ ತೆರೆಯಲಾಗಿದೆ. ಇದೀಗ ಎಸ್‌ಸಿ, ಎಸ್‌ಟಿ ಸಮುದಾಯದವರಿಗಾಗಿ ಹೊಸದಾಗಿ 3,200 ನ್ಯಾಯಬೆಲೆ ಅಂಗಡಿ ತೆರೆಯಲು ಅನುಮತಿ ನೀಡಲಾಗಿದೆ ಎಂದು ವಿವರಿಸಿದರು.

## ಗೃಹಲಕ್ಷ್ಮಿ ಹಣದ ಬಗ್ಗೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸದನಕ್ಕೆ ತಪ್ಪು ಮಾಹಿತಿ; 'ಡಿನ್ನರ್ ಪಾಲಿಟಿಕ್ಸ್' ಬಗ್ಗೆ ಬಿಜೆಪಿ ಕಿಡಿ



ಬೆಳಗಾವಿ, ಡಿ.12– ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ರಾಜ್ಯ ವಿಧಾನಸಭೆಗೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಪ್ರತಿಪಕ್ಷ ಬಿಜೆಪಿ ಶುಕ್ರವಾರ ಆರೋಪಿಸಿದೆ. ಅಲ್ಲದೇ ವಿಧಾನಮಂಡಲದ ಅಧಿವೇಶನ ಮುಗಿಯುವವರೆಗೂ ಆಡಳಿತಾರೂಢ ಕಾಂಗ್ರೆಸ್‌ನ ಡಿನ್ನರ್ ರಾಜಕಾರಣಕ್ಕೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಇಂತಹ ಡಿನ್ನರ್ ರಾಜಕೀಯ ಸಚಿವರ ಕಾರ್ಯವೈಖರಿ ಮೇಲೆ ಪರಿಣಾಮ ಬೀರುತ್ತದೆ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ಸಿಎಂ ಕುರ್ಚಿ ಗುದ್ದಾಟದ ನಡುವೆ ಡಿನ್ನರ್‌ನಲ್ಲಿ ಭಾಗವಹಿಸುವ ಮಂತ್ರಿಗಳ ಹೆಸರನ್ನು ಉಲ್ಲೇಖಿಸಿದ್ದಾರೆ. ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕಾಂಗ್ರೆಸ್‌ನ ಡಿನ್ನರ್ ರಾಜಕಾರಣದಿಂದ ಸಚಿವರು ಸದನಕ್ಕೆ ಬರುವ ಮೊದಲು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು, ಉದ್ಭವಿಸಿದ ಸಮಸ್ಯೆಗಳಿಗೆ ಅಥವಾ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಸಮಯವನ್ನು ನೀಡುತ್ತಿಲ್ಲ ಎಂದು ಕಿಡಿಕಾರಿದರು.

ವಿಧಾನಸಭೆ ಅಧಿವೇಶನ ನಡೆಯುತ್ತಿದ್ದು, ಸದನದಲ್ಲಿ ಕೇಳಿಬರುವ ಸಮಸ್ಯೆಗಳು ಅಥವಾ ಪ್ರಶ್ನೆಗಳಿಗೆ ಉತ್ತರಿಸಲು ಸಚಿವರು ಸಮರ್ಥರಿದ್ದು, ಸಜ್ಜಾಗಿ ಬರುತ್ತಾರೆ ಎಂದು ನಂಬಿದ್ದೇವೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗದಿರುವ ಬಗ್ಗೆ ಮಹೇಶ್ ಟೆಂಗಿನಕಾಯಿ (ಬಿಜೆಪಿ ಶಾಸಕ) ಕೇಳಿದಾಗ, ಆಗಸ್ಟ್‌ವರೆಗೆ ಹಣ ಮಂಜೂರಾಗಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಎರಡು ತಿಂಗಳಿಂದ ಇನ್ನೂ ಹಣ ಜಮಾ ಆಗಿಲ್ಲ ಎಂದು ಶಾಸಕರು ಗಮನಕ್ಕೆ ತರಲು ಮುಂದಾದಾಗ, ನಾನು ಎಲ್ಲವನ್ನು ಹೇಳಿದ್ದೇನೆ ಎಂದು ಉತ್ತರಿಸಿದರು. ಇದಕ್ಕೆ ಪ್ರತಿಪಕ್ಷದ ಮುಖಂಡ ಆರ್.ಅಶೋಕ್ ಮತ್ತು ಬಿಜೆಪಿ ಶಾಸಕ ಸುನೀಲ್ ಕುಮಾರ್, ಯಾವ ತಿಂಗಳವರೆಗೆ ಹಣ ಬಿಡುಗಡೆಯಾಗಿದೆ ಎಂಬುದನ್ನು ಸಚಿವರು ಸ್ಪಷ್ಟವಾಗಿ ಉತ್ತರಿಸಿಲ್ಲ, ಸದನಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

**ದಡ್ಡರಿಗೆ ಹೇಳಿದ ಹಾಗೆ ಹೇಳಿದ್ದಾರೆ:** ಆಗಸ್ಟ್‌ವರೆಗೂ ಗೃಹಲಕ್ಷ್ಮಿ ಹಣ ಕ್ಲಿಯರ್ ಆಗಿದೆ ಎಂದು ಸಚಿವರು ಹೇಳಿದ್ದಾರೆ. ಆದರೆ, ಅವರು ಅರ್ಥ ಮಾಡ್ಕೊಳ್ಳಿ ಅಂತ ದಡ್ಡರಿಗೆ ಹೇಳಿದ ಹಾಗೆ ಹೇಳಿದ್ದಾರೆ, ನೀವೆಲ್ಲ ದಡ್ಡರು, ಕಡಿಮೆ ಜ್ಞಾನ ಇದೆ ಅನ್ನೋ ಥರ ಸಚಿವೆ ಲಕ್ಷ್ಮಿ ಉತ್ತರ ಕೊಟ್ಟಿದ್ದಾರೆ ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು, ಈ ಹಂತದಲ್ಲಿ ಮಧ್ಯ ಪ್ರವೇಶಿಸಿದ ಸಿಎಂ ಸಿದ್ದರಾಮಯ್ಯ, ಅರ್ಥಮಾಡ್ಕೊಳ್ಳಿ ಅಂತಾ ಸಚಿವರು ಹೇಳಿದ್ದಾರೆ. ದಡ್ಡರಿಗೆ ಹೇಳಿದ ಹಾಗೆ ಹೇಳಿಲ್ಲ ಎಂದರು.

ಅಗಸ್ಟ್‌ವರೆಗೆ ಹಣ ಬಿಡುಗಡೆ ಮಾಡಿದ್ದೇವೆ ಎಂದು ಸಚಿವರು ಹೇಳಿದ್ದಾರೆ, ಒಂದು ವೇಳೆ ಮಾರ್ಚ್ ತಿಂಗಳ ಹಣ ಬಂದಿಲ್ಲ ಅಂದರೆ ಅದನ್ನು ಬಿಡುಗಡೆ ಮಾಡಿಸೋಣ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಫಲಾನುಭವಿಗಳಿಗೆ ಹಣ ನೀಡುವಾಗ ಎರಡು ತಿಂಗಳು ವಿಳಂಬವಾಗಿರುತ್ತದೆ, ಅದು ಬಂದಿಲ್ಲ ಅಂದ್ರೆ ಕೂಡಲೇ ಕೊಡಿಸುವ ಕೆಲಸ ಮಾಡಲಾಗುವುದು ಎಂದು ಮುಖ್ಯಮಂತ್ರಿ ಅವರು ಸದನಕ್ಕೆ ಸ್ಪಷ್ಟನೆ ನೀಡಿದ್ದಾರೆ.

ಡಿ.9ರಂದು ಸದನದಲ್ಲಿ ಟೆಂಗಿನಕಾಯಿ ಹೆಬ್ಬಾಳ್ಕರ್‌ಗೆ ಪ್ರಶ್ನೆ ಕೇಳಿದ್ದರು. ಮರುದಿನವೇ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಫಲಾನುಭವಿಗಳಿಗೆ ಜಮಾ ಆಗಿರುವ ಹಣದ ಕುರಿತು ಧಾರವಾಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಿಂದ ಮಾಹಿತಿ ಕೇಳಿದ್ದರು. ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಹಣ ಬಿಡುಗಡೆಯಾಗಿಲ್ಲ ಎಂದು ಲೆಟರ್‌ಹೆಡ್‌ನಲ್ಲಿರುವ ಅಧಿಕಾರಿ ಪತ್ರವನ್ನು ಓದಿದ ಅಶೋಕ್, ಗದಗ ಮತ್ತು ಹಾವೇರಿ ಜಿಲ್ಲೆಯ ಅಧಿಕಾರಿಗಳಿಂದ ಇದೇ ರೀತಿಯ ಪ್ರತಿಕ್ರಿಯೆಗಳು ಬಂದಿವೆ ಹೆಬ್ಬಾಳ್ಕರ್ ಅವರು ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿದರು.

## ಡಿ.ಕೆ. ಶಿವಕುಮಾರ್‌ರನ್ನು ಬಿಜೆಪಿಗೆ ಕರೆತರುವ ಪ್ರಯತ್ನವಾಗಿ ನನ್ನ ಉಚ್ಚಾಟನೆ

### ಯತ್ನಾಳ್ ಆರೋಪ



**ಬೆಳಗಾವಿ:** ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಬಿಜೆಪಿಗೆ ಸೆಳೆಯುವ ಪ್ರಯತ್ನ ನಡೆದಿತ್ತು. ಆದರೆ ನಾನು ಪಕ್ಷದಲ್ಲಿದ್ದರೆ ಅದು ಸಾಧ್ಯವಿಲ್ಲ ಎಂದು ನನ್ನನ್ನು ಉಚ್ಚಾಟಿಸಲಾಯಿತು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಡಿಸಿಎಂ ಆಗಲೆಂದು ದೆಹಲಿಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ಸಹ ನಡೆಸಿದ್ದರು. ಆದರೆ ಈ ಪ್ರಯತ್ನವನ್ನು ಹೈಕಮಾಂಡ್ ತಿರಸ್ಕರಿಸಿತು ಎಂದು ಯತ್ನಾಳ್ ಹೇಳಿದ್ದಾರೆ. ಇಂದು ಸುವರ್ಣಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, ಡಿಸಿಎಂ ಆಗುವ ಕನಸು ಕಂಡಿದ್ದ ವಿಜಯೇಂದ್ರ, ಡಿಕೆ ಶಿವಕುಮಾರ್ ಅವರನ್ನು ಕೇಂದ್ರ ಸಚಿವ ಅಮಿತ್ ಶಾ ಬಳಿ ಕರೆದುಕೊಂಡು ಹೋಗಿದ್ದರು. ಆದರೆ ಅದನ್ನು ಹೈಕಮಾಂಡ್ ತಿರಸ್ಕರಿಸಿತ್ತು. ಈ ಮಾತನ್ನು ಬಿಜೆಪಿಯವರೇ ನನಗೆ ಹೇಳಿದ್ದರು. ಆ ನಂತರ ಅಮಿತ್ ಶಾರ ಸೂಚನೆ ಮೇರೆಗೆ ಜೋಶಿಯವರು ನಾವು ಯಾರನ್ನೂ ಸೇರಿಸಿಕೊಳ್ಳುತ್ತಿಲ್ಲ ಅಂತ ಹೇಳಿಕೆ ಕೊಟ್ಟರು ಎಂದು ಯತ್ನಾಳ್ ಹೇಳಿದರು.

## ತಾಂತ್ರಿಕ ಸಮಸ್ಯೆಯಿಂದಾಗಿ 44,000ಕ್ಕೂ ಹೆಚ್ಚು ರೈತರಿಗೆ ಪ್ರವಾಹ ಪರಿಹಾರ ಸಿಕ್ಕಿಲ್ಲ

### ಕೃಷಿ ಸಚಿವ ಕೃಷ್ಣ ಬೈರೇಗೌಡ ಮಾಹಿತಿ

ಬೆಳಗಾವಿ, ಡಿ.12– 44,208 ರೈತರು ಮಳೆ ಮತ್ತು ಪ್ರವಾಹ ಸಂಬಂಧಿತ ಬೆಳೆ ನಷ್ಟಕ್ಕೆ ಇನ್ನೂ ಪರಿಹಾರ ಪಡೆದಿಲ್ಲ. ಅಧಿಕೃತ ದಾಖಲೆಗಳಲ್ಲಿನ ತಾಂತ್ರಿಕ ಹೊಂದಾಣಿಕೆಯ ಕೊರತೆಯೇ ಈ ವಿಳಂಬಕ್ಕೆ ಕಾರಣ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶುಕ್ರವಾರ ಹೇಳಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಅನೇಕ ಜನರಿಗೆ ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ವಿಧಾನ ಪರಿಷತ್ತಿನಲ್ಲಿ ಶಾಸಕ ತಿಪ್ಪಣ್ಣ ಕಾಮಕನೂರ್ ಅವರು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಹಲವಾರು ರೈತರು ನೆರವು ಪಡೆದಿಲ್ಲ ಎಂಬ ಕಾಮಕನೂರ್ ಅವರ ಮಾತನ್ನು ಒಪ್ಪಿಕೊಂಡ ಸಚಿವರು, ಸುಮಾರು ಶೇಕಡಾ ಮೂರರಷ್ಟು ರೈತರು ಯಾವುದೇ ಪರಿಹಾರವನ್ನು ಪಡೆದಿಲ್ಲ. ಹೆಸರುಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು ಇದಕ್ಕೆ ಕಾರಣ. ಆಧಾರ್‌ನಲ್ಲಿ ಅವರ ಹೆಸರು ಕೃಷಿ ಇಲಾಖೆಯಲ್ಲಿರುವ ಹೆಸರಿನೊಂದಿಗೆ ಹೊಂದಾಣಿಕೆಯಾಗುತ್ತಿಲ್ಲ ಎಂದರು.

ಒಟ್ಟು 44,208 ರೈತರು ಪರಿಹಾರ ಪಡೆದಿಲ್ಲ. ತಾಂತ್ರಿಕ ಸಮಸ್ಯೆ ಸರಿಪಡಿಸಿದ ನಂತರ, ಅವರ ಬ್ಯಾಂಕ್ ಖಾತೆಗಳಿಗೆ ಹಣವನ್ನು ಜಮಾ ಮಾಡಲಾಗುತ್ತದೆ. ರೈತರು ತಮ್ಮ ಹೆಸರುಗಳನ್ನು ತಿದ್ದುಪಡಿ ಮಾಡಬೇಕು ಮತ್ತು ಬ್ಯಾಂಕ್ ಖಾತೆಗಳೊಂದಿಗೆ ಆಧಾರ್ ಅನ್ನು ಲಿಂಕ್ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಕಲಬುರಗಿ ಜಿಲ್ಲೆಯಲ್ಲಿ 3.23 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಇದಕ್ಕಾಗಿ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ(SDRF) ಮಾನದಂಡಗಳ ಪ್ರಕಾರ 250.97 ಕೋಟಿ ರೂ. ಪರಿಹಾರ ನೀಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ರಾಜ್ಯ ಸರ್ಕಾರವು 247.75 ಕೋಟಿ ರೂ.ಗಳ ಹೆಚ್ಚುವರಿ ಪರಿಹಾರವನ್ನು ಸಹ ನೀಡಿದೆ ಎಂದು ಅವರು ಹೇಳಿದರು.

ರಾಜ್ಯಾದ್ಯಂತ ಒಟ್ಟು 14.21 ಲಕ್ಷ ರೈತರಿಗೆ ಪರಿಹಾರ ನೀಡಲಾಗುತ್ತಿದೆ. SDRF ಮಾನದಂಡಗಳ ಅಡಿಯಲ್ಲಿ 1,216 ಕೋಟಿ ರೂ.ಗಳನ್ನು ನೀಡಲಾಗಿದೆ. ಇದಕ್ಕೆ ಪೂರಕವಾಗಿ ಸರ್ಕಾರವು 1,033 ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ನೀಡಿದೆ. ಎರಡೂ ಸೇರಿ, ರೈತರಿಗೆ 2,249 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದರು.

## ಸಿಎಂ–ಡಿಸಿಎಂ ಶನಿವಾರ ದೆಹಲಿ ಪ್ರಯಾಣ: ಡಿಕೆ ಆಪ್ತರೂ ಕೂಡ ದಿಲ್ಲಿಗೆ ತೆರಳಲು ಸಿದ್ಧತೆ

### ಬಲಪ್ರದರ್ಶನ ಬೇಕಿಲ್ಲ; ಆಪ್ತರಿಗೆ ಸೂಚನೆ



ಡಿಕೆಶಿ

**ಬೆಂಗಳೂರು:** ಕಾಂಗ್ರೆಸ್‌ನಲ್ಲಿ ಡಿನ್ನರ್ ಪಾಲಿಟಿಕ್ಸ್ ಮಧ್ಯೆ ಶನಿವಾರ (ಡಿ.13) ದೆಹಲಿಗೆ ಸಿಎಂ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ತೆರಳುತ್ತಿದ್ದಾರೆ. ವೋಟ್ ಚೋರಿ ಕಾರ್ಯಕ್ರಮದಲ್ಲಿ ಇಬ್ಬರೂ ಭಾಗಿಯಾಗುತ್ತಿದ್ದಾರೆ. ಇದರ ಮಧ್ಯೆಯೇ, ಸುಮಾರು 25ಕ್ಕೂ ಹೆಚ್ಚು ಶಾಸಕರು ದೆಹಲಿಗೆ ತೆರಳುತ್ತಿದ್ದು, ಎಐಸಿಸಿ ನಾಯಕರ ಭೇಟಿಗೂ ಆಲೋಚಿಸಿದ್ದಾರೆ.

ಆದರೆ, ನನ್ನ ಹಿಂದೆ ಯಾರೂ ಬರೋದು ಬೇಡ. ಯಾವ ಪ್ರದರ್ಶನವೂ ಬೇಡ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಆಪ್ತರಿಗೆ ಹೇಳಿದ್ದಾರೆ.

ಯತೀಂದ್ರ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿರುವ, ಮಾಗಡಿ ಶಾಸಕ ಬಾಲಕೃಷ್ಣ ಬಹಿರಂಗ ಹೇಳಿಕೆಗೆ ಯಾಕೆ ನೋಟಿಸ್ ಕೊಟ್ಟಿಲ್ಲ ಅಂತ ಪ್ರಶ್ನೆ ಮಾಡಿದ್ದಾರೆ. ಈ ಮಧ್ಯೆ, ಡಿಕೆಶಿ ಬಣ ಸಂಕ್ರಾಂತಿವರೆಗೆ ಡೆಡ್‌ಲೈನ್ ಹಾಕಿಕೊಂಡಿದ್ದು, ಬಹಿರಂಗ ಹೇಳಿಕೆ ನೀಡದಿರಲು ನಿರ್ಧರಿಸಿದೆ.

ಇನ್ನೂ ಬೆಳಗಾವಿ ಅಧಿವೇಶನದ ನಂತರ ಕಾಂಗ್ರೆಸ್ ಹೈಕಮಾಂಡ್ ಸಿಎಂ ಹಾಗೂ ಡಿಸಿಎಂಗೆ ಬುಲಾವ್ ನೀಡುತ್ತಾ ಅನ್ನೋ ಚರ್ಚೆಗಳು ಆಗಲಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕಮಾಂಡ್ ಯಾವುದೇ ಸಂದೇಶ ನೀಡಿಲ್ಲ ಅಂತ ಸ್ಪಷ್ಟಪಡಿಸಿದ್ದಾರೆ.

ಮತ್ತೊಂದೆಡೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ಡಿಕೆಶಿ ಸಿಎಂ ಆಗಲಿ. ಯಾರು ಬೇಡ ಅಂದಿದ್ದು ಅಂತ ಜಮೀರ್ ಅಹ್ಮದ್ ಹೇಳಿದ್ದಾರೆ. ಸಿದ್ದರಾಮಯ್ಯರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವಾಗ ಹೈಕಮಾಂಡ್ ಯಾವುದೇ ಗಡುವು ನೀಡಿಲ್ಲ ಅಂತ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

## ಆಂಧ್ರಪ್ರದೇಶ: ಕಂದಕಕ್ಕೆ ಬಸ್ ಉರುಳಿ ಬಿದ್ದು 9 ಯಾತ್ರಿಕರು ಸಾವು

ವಿಶಾಖಪಟ್ಟಣಂ, ಡಿ.12– ಚಿಂತೂರು–ಮರೇಡುಮಿಲ್ಲಿ ಘಾಟ್ ರಸ್ತೆಯಲ್ಲಿ ಶುಕ್ರವಾರ ನಸುಕಿನ ಜಾವ ಖಾಸಗಿ ಟ್ರಾವೆಲ್ ಬಸ್ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಕನಿಷ್ಠ 9 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ.

ಭದ್ರಾಚಲಂ ದೇವಸ್ಥಾನದ ದರ್ಶನ ಪಡೆದು ಅನ್ನಾವರಂ ಕಡೆಗೆ 35 ಮಂದಿ ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಬಸ್ ಇದಾಗಿತ್ತು. ಆರಂಭಿಕ ಮಾಹಿತಿಯ ಪ್ರಕಾರ, ಕನಿಷ್ಠ ಒಂಭತ್ತು ಜನರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇಪ್ಪತ್ತೆರಡು ಜನರು ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಹತ್ತಿರದ ವೈದ್ಯಕೀಯ ಸೌಲಭ್ಯಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಎಲ್ಲರೂ ಚಿತ್ತೂರು ಜಿಲ್ಲೆಯ ನಿವಾಸಿಗಳಾಗಿದ್ದು, ಅಪಘಾತದ ಸಮಯದಲ್ಲಿ ಅವರನ್ನು ತೀರ್ಥಯಾತ್ರೆಗೆ ಕರೆದೊಯ್ಯಲಾಗಿತ್ತು.

ರಾಜುಗರಿಮೆಟ್ಟ ತಿರುವಿನಲ್ಲಿ ಈ ಘಟನೆ ಸಂಭವಿಸಿದ್ದು, ಚಾಲಕ ವಾಹನದ ನಿಯಂತ್ರಣ ಕಳೆದುಕೊಂಡು ಕಂದಕ್ಕೆ ಬಸ್ ಉರುಳಿ ಬಿದ್ದಿತು ಎಂದು ಹೇಳಲಾಗುತ್ತಿದೆ. ಮಾಹಿತಿ ಪಡೆದ ನಂತರ ಪೊಲೀಸ್ ಸಿಬ್ಬಂದಿ ಮತ್ತು ಸ್ಥಳೀಯ ನಿವಾಸಿಗಳು ಸ್ಥಳಕ್ಕೆ ಧಾವಿಸಿ ಕತ್ತಲೆ ಮತ್ತು ಕಠಿಣ ಭೂಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗಿದೆ.

## ಸಮತೆಂತೋ ರಂಗ ಸಂಭ್ರಮ

### ಕುಂಟಿಲ, ದುಡ್ಡಿನ ದೇವರು ಕೃತಿ ಬಿಡುಗಡೆ



'ಕುಂಟಿಲ ಮತ್ತು ದುಡ್ಡಿನ ದೇವರು' ಕೃತಿ ಬಿಡುಗಡೆಗೊಳಿಸಿದ ಹಿರಿಯ ರಂಗಕರ್ಮಿ ಪ್ರಸನ್ನ ಹೆಗ್ಗೋಡು.

> ಸಮತೆಂತೋ ತಾಯಿ ತಂಡವಾಗಿದೆ. ಇದು ನನ್ನ ರಂಗಪಯಣದಲ್ಲಿ ತವರು ಮನೆ. ತವರು ಮನೆಯಲ್ಲಿ ಸಿಗುವ ಎಲ್ಲಾ ಸುಖ, ಶಾಂತಿ ಕೊಟ್ಟಿರುವ ಸಮತೆಂತೋಗೆ ಸದಾ ಋಣಿಯಾಗಿದ್ದೇನೆ. ಎಲ್ಲರನ್ನು ಒಳಗೊಳ್ಳುವ ಮನಸ್ಥಿತಿ ಇರುವ ನಮ್ಮ ತಂಡಕ್ಕೆ ಯುವ ಸಮೂಹ ಹೆಚ್ಚಾಗಿ ಸೇರ್ಪಡೆಯಾಗಬೇಕು.
>
> -ರಾಮೇಶ್ವರಿ ವರ್ಮ,
> ಅಧ್ಯಕ್ಷರು, ಸಮತೆಂತೋ

ಮೈಸೂರು, ಡಿ.12(ವಿವಿಹೆಚ್)– ಇತ್ತೀಚೆಗಿನ 'ಪೋಸ್ಟ್ ಟ್ರೂಥ್' ದಿನಗಳಲ್ಲಿ ರಂಗಭೂಮಿಗಳ ಮೇಲೆ ಅಗಾಧ ಪರಿಣಾಮ ಬೀರುತ್ತಿದೆ. ಪೋಸ್ಟ್ ಟ್ರೂಥ್ ಯುಗಕೊಂದ ಹಲವು ಸುಂದರ ಸಂಗತಿಗಳಲ್ಲಿ ಹವ್ಯಾಸಿ ರಂಗಭೂಮಿ ಬಹಳ ಪ್ರಮುಖವಾದದು ಎಂದು ರಂಗಕರ್ಮಿ ಪ್ರಸನ್ನ ಹೆಗ್ಗೋಡು ಬೇಸರಿಸಿದರು.

ಮೈಸೂರಿನ ರಂಗಾಯಣ ಆವರಣದ ಕಿರುರಂಗಮಂದಿರದಲ್ಲಿ ಸಮತೆಂತೋ ವತಿಯಿಂದ ಆಯೋಜಿಸಲಾಗಿರುವ 'ಸಮತೆಂತೋ ರಂಗಸಂಭ್ರಮ' ಕಾರ್ಯಕ್ರಮದಲ್ಲಿ 'ಕುಂಟಿಲ ಮತ್ತು ದುಡ್ಡಿನ ದೇವರು' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಹವ್ಯಾಸಿ ರಂಗಭೂಮಿ ಒಂದು ಸೀಮಿತ ಸಮುದಾಯಕ್ಕೆ ಸಲ್ಲುವ ರಂಗಭೂಮಿ. ಅದರಲ್ಲಿ ಎಲ್ಲಾ ರಂಗದವರು ಪರಸ್ಪರ ಭೇಟಿಯಾಗುತ್ತಾ ಪ್ರಸಕ್ತ ವಿಷಯಗಳ ಕುರಿತ ಚರ್ಚೆ, ವಿಮರ್ಶೆ ಜೊತೆಗೆ ಮಹಾನ್ ನಾಟಕಗಳು, ಕಲಾಕೃತಿಗಳಿಂದ ರೂಪಿಸಿದ ತಂಡ ಇದಾಗಿದೆ. ಆದರೆ ಪೋಸ್ಟರ್ ಯುಗದಲ್ಲಿ ಹವ್ಯಾಸಿ ನಾಟಕಗಳ ಪ್ರಭಾವ ಕುಂಠಿತಗೊಂಡಿದ್ದು, ಮತ್ತೆ ಮುನ್ನೆಲೆಗೆ ತರುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಸಮಾಜಮುಖಿ ಕೆಲಸಗಳೊಂದಿಗೆ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಾ ಸಮತೆಂತೋ ಇವತ್ತಿಗೂ ಚಟುವಟಿಕೆಯಿಂದ ಇರುವ ರಾಜ್ಯದ ಹವ್ಯಾಸಿ ರಂಗ ತಂಡಗಳಲ್ಲಿ ಪ್ರಮುಖ ತಂಡವಾಗಿದೆ. ಇದು ನಿರಂತರವಾಗಿ ತನ್ನ ಕೆಲಸವನ್ನು ನಡೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಮಾತನಾಡಿ, ಕುವೆಂಪು, ಕಾರಂತರು ಕನ್ನಡಕ್ಕೆ ಉತ್ತಮ ನಾಟಕಗಳನ್ನು ನೀಡಿದರು. ಆದರೆ ಅವೆಲ್ಲವೂ ಅವರ ಕಾಲಾನಂತರ ಉತ್ತಮ ಪ್ರದರ್ಶನ ಕಂಡಿತು. ಇವುಗಳ ಯಶಸ್ಸಿನ ಭಾಗವಾಗಿ ಮೈಸೂರಿನ ಸಮತೆಂತೋ ಪ್ರಮುಖ ಪಾತ್ರ ನಿರ್ವಹಿಸಿರುವುದು ಶ್ಲಾಘನೀಯವಾಗಿದೆ ಎಂದರು.

ಸಮತೆಂತೋ ತಂಡದಲ್ಲಿ ಅಧ್ಯಾಪಕರು, ರಂಗಕರ್ಮಿಗಳು, ವಿದ್ವಾಂಸರನ್ನು ಒಳಗೊಂಡ ತಂಡ ಇದಾಗಿದ್ದು, ಉತ್ತಮ ನಾಟಕಗಳನ್ನು ಪ್ರಸ್ತುತಪಡಿಸಲು ಸಾಧ್ಯವಾಗಿದೆ. ಇದಕ್ಕೆ ಸಾಕ್ಷಿಯೆಂಬಂತೆ 60ನೇ ಪ್ರಕಾಶನವನ್ನು ಇಂದು ಬಿಡುಗಡೆಗೊಳಿಸಿದೆ ಎಂದರು.

ಇದೇ ವೇಳೆ ಟಿ.ಪಿ.ಕೈಲಾಸಂ ಅವರ ಇಂಗ್ಲಿಷ್ ಕೃತಿಯನ್ನು ನ.ರತ್ನ ಅವರು ಅನುವಾದ ಮಾಡಿರುವ ಗುರಿ ಮುಟ್ಟು ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು. ಜೊತೆಗೆ ರಂಗಗೀತೆಗಳ ಗಾಯನ ಸಭಿಕರನ್ನು ಮೋಡಿ ಮಾಡಿತು.

ಸಮತೆಂತೋ ಸಂಸ್ಥಾಪಕರಾದ ರಾಮೇಶ್ವರಿ ವರ್ಮ, ಪ್ರೊ.ಹೆಚ್.ಎಸ್. ಉಮೇಶ್, ಕಾರ್ಯದರ್ಶಿ ಇಂದಿರಾ ನಾಯರ್, ರತ್ನ ವಿಶ್ವನಾಥ್ ಮಿರ್ಲೆ, ಬಸವರಾಜು, ಬಿ.ಆರ್.ರವೀಶ್, ಶ್ರೀನಿವಾಸ್ ನಿರಂತರ, ರೇಖಾ ಶ್ರೀನಿವಾಸ್ ಉಪಸ್ಥಿತರಿದ್ದರು.

## ಮೈಸೂರಲ್ಲಿ ಯೂನಿಟಿ ಮಾಲ್ ನಿರ್ಮಿಸುವುದಕ್ಕೆ ನಮ್ಮ ವಿರೋಧವೇನಿಲ್ಲ

### ಆದರೆ ಅದಕ್ಕೆ ನಮ್ಮ ಆಸ್ತಿ ಆಯ್ದುಕೊಂಡಿರುವುದು ಸರಿಯಲ್ಲ: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟನೆ



ಪ್ರಮೋದಾದೇವಿ ಒಡೆಯರ್

ಮೈಸೂರು, ಡಿ.12(ಬಿಎಲ್‌ಯು)– ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಯೂನಿಟಿ ಮಾಲ್‌ಗೆ ನನ್ನ ವಿರೋಧವಿಲ್ಲ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಾಧ್ಯಮಗಳಲ್ಲಿ ನನ್ನ ಅಭಿಪ್ರಾಯವನ್ನು ತಪ್ಪಾಗಿ ಅರ್ಥೈಸಲಾಗಿದೆ. ಯೂನಿಟಿ ಮಾಲ್‌ನಲ್ಲಿ ರಾಜ್ಯದ ಕರಕುಶಲ ವಸ್ತುಗಳು, ಜಿಐ ಟ್ಯಾಗ್ ಪದಾರ್ಥಗಳು ಸೇರಿದಂತೆ ಇತರೆ ಉತ್ಪನ್ನಗಳನ್ನು ಪ್ರದರ್ಶಿಸಲು ನನ್ನ ವಿರೋಧವಿಲ್ಲ. ಎಂದು ಮರು ಸ್ಪಷ್ಟನೆ ನೀಡಿದ್ದಾರೆ.

ಮೈಸೂರು ಕಸಬಾ ಹೋಬಳಿಯ ಸರ್ವೇ ನಂಬರ್ 1 ರಲ್ಲಿರುವ ದೊಡ್ಡಕೆರೆ ಟ್ಯಾಂಕ್ ಬಂಡ್ ಭೂಮಿಯಲ್ಲಿ ಯೂನಿಟಿ ಮಾಲ್ ನಿರ್ಮಾಣ ಮಾಡುವ ವಿಚಾರದಲ್ಲಿ ಹೈಕೋರ್ಟ್ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿದೆ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಈ ವಿಚಾರವಾಗಿ ಊಹಾಪೋಹಗಳು ಹೆಚ್ಚಾಗುತ್ತಿದೆ. ಅಲ್ಲದೆ ಅನಾವಶ್ಯಕವಾಗಿ ಚರ್ಚೆ ನಡೆಯುತ್ತಿದೆ. ಒಬ್ಬರ ಮಾಲೀಕತ್ವದ ಹಕ್ಕುಗಳನ್ನು ಚಲಾಯಿಸಲು ಸಂವೇದನಾಶೀಲಗೊಳಿಸುವ ಪ್ರಯತ್ನವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಖಾಸಗಿ ಆಸ್ತಿ ಬಿಟ್ಟು, ತನ್ನ ಆಸ್ತಿಯಲ್ಲಿ ಯೂನಿಟಿ ಮಾಲ್ ನಿರ್ಮಾಣ ಮಾಡಲು ಸರ್ಕಾರ ಸ್ವತಂತ್ರವಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ನನ್ನ ಪೂರ್ವಜರ ಪರಂಪರೆಯನ್ನು ಭವಿಷ್ಯದ ಪೀಳಿಗೆಗೆ ಉಳಿಸಿಕೊಳ್ಳುವ ಹಾಗೂ ರಕ್ಷಿಸುವ ಜವಾಬ್ದಾರಿಯನ್ನು ನಾನು ನಿರ್ವಹಿಸಿದ್ದೇನೆ.

ನಾನು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ನನ್ನ ನಿಲುವನ್ನು ದೃಢೀಕರಿಸುವ ದಾಖಲಾತಿಗಳನ್ನು ಸಲ್ಲಿಸಿದ್ದೇನೆ. ಯೂನಿಟಿ ಮಾಲ್ ನಿರ್ಮಾಣ ಸ್ಥಳದ ಮಾಲೀಕತ್ವ ಕುರಿತಂತೆ ಸರ್ಕಾರ ಹೈಕೋರ್ಟ್‌ನಲ್ಲಿ ಯಾವ ರೀತಿಯ ನಿರ್ಧಾರ ಹೊರಬರಲಿದೆ ಎಂಬುದನ್ನು ನೋಡಬೇಕಿದೆ ಎಂದು ಪ್ರಮೋದಾದೇವಿ ಒಡೆಯರ್ ಹೇಳಿದ್ದಾರೆ.

### ರಾಜ್ಯ ಸರ್ಕಾರ, ರಾಜಮನೆತನದ ನಡುವೆ ಮತ್ತೊಂದು ಸಂಘರ್ಷ

ಬಳ್ಳಾರಿ ರಸ್ತೆ ಅಗಲೀಕರಣ ಮಾಡುವ ಸಲುವಾಗಿ ಬೆಂಗಳೂರು ಅರಮನೆಯ ಜಾಗ ಸ್ವಾಧೀನ ಸಂಬಂಧ ರಾಜ್ಯ ಸರ್ಕಾರ ಹಾಗೂ ಮೈಸೂರು ರಾಜ ಮನೆತನದ ನಡುವೆ ಕಾನೂನು ಜಟಾಪಟಿ ನಡೆಯುತ್ತಲೇ ಇದೆ. ಇದರ ಜೊತೆಗೆ ಈಗ ಯೂನಿಟಿ ಮಾಲ್ ವಿವಾದ ಕೂಡ ಸೇರಿಕೊಂಡಿದೆ.

ಬೆಂಗಳೂರು ಅರಮನೆಗೆ ಹೊಂದಿಕೊಂಡಿರುವ ಏರ್‌ಪೋರ್ಟ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ದಿನನಿತ್ಯದ ಗೋಳಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಅರಮನೆಯ 15.36 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರಸ್ತೆ ಅಗಲೀಕರಣ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು.

ಆದರೆ ಇದನ್ನು ಪ್ರಶ್ನಿಸಿ ಮೈಸೂರು ರಾಜಮನೆತನದವರು ಸುಪ್ರೀಂ ಕೋರ್ಟ್ ಮೊರೆ ಹೋದಾಗ 3 ಸಾವಿರ ಕೋಟಿ ರೂಪಾಯಿಗಳ ಟಿಡಿಆರ್ ಪ್ರಮಾಣಪತ್ರ ನೀಡುವಂತೆ ಸೂಚಿಸಿತ್ತು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿದೆ. ಈ ವಿಚಾರವಾಗಿ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ.

ಈ ವಿಚಾರವೇ ಇನ್ನು ಇತ್ಯರ್ಥವಾಗಿಲ್ಲ. ಇದರ ಮಧ್ಯೆ ಈಗ ಮೈಸೂರಿನ ಯೂನಿಟಿ ಮಾಲ್ ನಿರ್ಮಿಸಲು ರಾಜ್ಯ ಸರ್ಕಾರ ಮತ್ತು ರಾಜಮನೆತನದ ನಡುವೆ ಮತ್ತೊಂದು ವಿವಾದ ಸೃಷ್ಟಿಯಾಗಿದೆ.

## ಅಪ್ರಾಪ್ತ ಬಾಲಕಿಯಿಂದ ಕಿವಿ ಓಲೆ ಕಿತ್ತುಕೊಂಡಿದ್ದ

# ಆರೋಪಿಗೆ 7 ವರ್ಷ ಕಠಿಣ ಶಿಕ್ಷೆ

ಮಂಡ್ಯ, ಡಿ.12– ಅಪ್ರಾಪ್ತ ಬಾಲಕಿ ಹೆದರಿಸಿ ಕರೆದೊಯ್ದು, ಕಿವಿಯೋಲೆ ಕಿತ್ತುಕೊಂಡಿದ್ದ ಆರೋಪಿಗೆ ಏಳು ವರ್ಷ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಸಂಪತ್‌ಕುಮಾರ್ ಶಿಕ್ಷೆಗೊಳಗಾದ ಆಪಾದಿತನಾಗಿದ್ದಾನೆ. 2016ರಲ್ಲಿ ನಗರದ ಸರ್‌ಎಂವಿ ಕ್ರೀಡಾಂಗಣದ ಹಿಂಭಾಗದ ರಸ್ತೆಯಲ್ಲಿ ಅಪ್ರಾಪ್ತ ಬಾಲಕಿ ಮನೆಗೆ ನಡೆದು ಹೋಗುತ್ತಿದ್ದಾಗ ಆರೋಪಿ ತನ್ನ ಬೈಕ್‌ನಲ್ಲಿ ಹಿಂದಿನಿಂದ ಹೋಗಿ ನನ್ನ ತಂಗಿಗೆ ಆಕ್ಸಿಡೆಂಟ್ ಆಗಿದ್ದು, ಅವಳ ಗೇರ್ ಸೈಕಲ್ ಅಲ್ಲಿಯೇ ಬಿದ್ದಿದೆ. ಅದನ್ನು ನಿನಗೆ ಕೊಡುತ್ತೇನೆ ಎಂದು ಆಸೆ ತೋರಿಸಿದ ನೆನ್ನಲಾಗಿದೆ. ಅದಕ್ಕೊಪ್ಪದ ಬಾಲಕಿ ನಾನು ಬರುವುದಿಲ್ಲ ಎಂದಾಗ ಆರೋಪಿ ಚಾಕು ತೋರಿಸಿ ಆಕೆಯನ್ನು ಬೆದರಿಸಿ ತನ್ನ ಬೈಕ್‌ಗೆ ಹತ್ತಿಸಿಕೊಂಡು ತಾಲೂಕಿನ ಗೋಪಾಲಪುರ ಹೆಚ್.ಕೋಡಿಹಳ್ಳಿ ಗ್ರಾಮಗಳ ಮಧ್ಯೆ ಇರುವ ಗಾಡಿ ಜಾಡು ರಸ್ತೆಯಲ್ಲಿ ನಿಲ್ಲಿಸಿ ಕಿವಿಯಲ್ಲಿದ್ದ 2 ಗ್ರಾಂ ತೂಕದ ಓಲೆಗಳನ್ನು ಕಿತ್ತುಕೊಂಡು ಆಕೆಯನ್ನು ಅಲ್ಲಿಯೇ ಬಿಟ್ಟು ಹೋಗಿದ್ದನು.

ಈ ಬಗ್ಗೆ ಸಂಪತ್ ಕುಮಾರ್ ವಿರುದ್ಧ ನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಅದರಂತೆ ಆರೋಪಿಯು ಕಿತ್ತುಕೊಂಡ ಓಲೆಗಳನ್ನು ಮಾರಾಟ ಮಾಡಲು 2016ರ ಮಾ.17ರ ರಾತ್ರಿ 9 ಗಂಟೆ ಸಮಯದಲ್ಲಿ ಪೇಟೆ ಬೀದಿಯ ಕಾಮನ ಸರ್ಕಲ್ ಬಳಿ ಬರುತ್ತಿದ್ದಾಗ ಪೊಲೀಸರು ಆತನನ್ನು ಬಂಧಿಸಿದ್ದರು. ತನಿಖೆಯಲ್ಲಿ ಆರೋಪಿ ಮೇಲಿನ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ನ್ಯಾಯಾಲಯದಲ್ಲಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ಎನ್. ಸುಬ್ರಹ್ಮಣ್ಯ ಅವರು ಆರೋಪಿಗೆ 7 ವರ್ಷ ಕಠಿಣ ಶಿಕ್ಷೆ, 15 ಸಾವಿರ ದಂಡ ವಿಧಿಸಿದ್ದಾರೆ. ದಂಡದ ಮೊತ್ತದಲ್ಲಿ 10 ಸಾವಿರ ರೂ. ಹಾಗೂ ಕಾನೂನು ಸೇವಾ ಪ್ರಾಧಿಕಾರದಿಂದ 10 ಸಾವಿರ ರೂ.ಗಳನ್ನು ಬಾಲಕಿಗೆ ಪರಿಹಾರ ರೂಪದಲ್ಲಿ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವೆಂಕಟ ಲಕ್ಷ್ಮಮ್ಮ ವಾದ ಮಂಡಿಸಿದ್ದರು.

# ಪತ್ನಿಯ ಶಿರಚ್ಛೇದ; ಪತಿಗೆ ಜೀವಾವಧಿ ಶಿಕ್ಷೆ

ಮಂಡ್ಯ, ಡಿ.12– ಪತ್ನಿ ಶಿರಚ್ಛೇದ ಮಾಡಿ ಅಮಾನುಷವಾಗಿ ಕೊಲೆ ಮಾಡಿದ್ದ ಆರೋಪಿ ಪತಿಗೆ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ.

ರಾಗಿಮುದ್ದನಹಳ್ಳಿ ಗ್ರಾಮದ ಸುರೇಶ್(37) ಶಿಕ್ಷೆಗೊಳಗಾದ ಆರೋಪಿ. ಈತ 18 ವರ್ಷಗಳ ಹಿಂದೆ ಶಾಲಿನಿ ಎಂಬುವರನ್ನು ಮದುವೆಯಾಗಿದ್ದು, ಇಬ್ಬರು ಹೆಣ್ಣು ಮಕ್ಕಳಿದ್ದರೆನ್ನಲಾಗಿದೆ.

ಪತಿ ದುರ್ವರ್ತನೆಯಿಂದ ಬೇಸತ್ತು ಗಂಡನಿಂದ ದೂರವಾದ ಶಾಲಿನಿ ತವರು ಮನೆಯಲ್ಲಿ ವಾಸವಿದ್ದಳು. ಈ ನಡುವೆ ಆರೋಪಿ ಸುರೇಶನ ವಿರುದ್ಧ ಅಪ್ರಾಪ್ತೆ ಮೇಲೆ ಅತ್ಯಾಚಾರ ನಡೆಸಿದ ಹಿನ್ನೆಲೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿತ್ತು.

ಸುರೇಶ್ ಇಬ್ಬರೂ ಒಂದಾಗಿ ಬಾಳುವ ಬಗ್ಗೆ ಪತ್ನಿ ಶಾಲಿನಿಯನ್ನು ಕೇಳಿಕೊಂಡಿದ್ದನೆನ್ನಲಾಗಿದ್ದು, ಇದನ್ನು ಶಾಲಿನಿ ನಿರಾಕರಿಸಿದ್ದಳು. ಅಲ್ಲದೆ, ತನ್ನ ಇಬ್ಬರು ಮಕ್ಕಳ ಜೊತೆಯೂ ಮಾತನಾಡಲು ಆಕೆ ಬಿಟ್ಟಿರಲಿಲ್ಲ. ಇದರಿಂದ ಕೋಪಗೊಂಡಿದ್ದ ಸುರೇಶ್ 2022ರ ಜ.28ರ ಸಂಜೆ 6.45ರಲ್ಲಿ ರಾಗಿಮುದ್ದನಹಳ್ಳಿ ಗ್ರಾಮದ ಫ್ಯಾಕ್ಟರಿಯಲ್ಲಿ ಕೆಲಸ ಮುಗಿಸಿಕೊಂಡು ಶಾಲಿನಿ ಕಾಲುದಾರಿಯಲ್ಲಿ ಗ್ರಾಮಕ್ಕೆ ಮರಳುತ್ತಿದ್ದಾಗ ಹೊಂಚು ಹಾಕಿ ಪತ್ನಿಯೊಂದಿಗೆ ತಗಾದೆ ತೆಗೆದು ಮಾತಿನ ಚಕಮಕಿ ವಿಕೋಪಕ್ಕೆ ಹೋದಾಗ ಸುರೇಶ್ ಕೊಡಲಿಯಿಂದ ಶಾಲಿನಿ ತಲೆಗೆ ಹೊಡೆದು ಆಕೆ ಕೆಳಗೆ ಬಿದ್ದಾಗಲೂ ತಲೆಯನ್ನು ಕೊಡಲಿಯಿಂದ ಕತ್ತರಿಸಿ ಅಮಾನುಷವಾಗಿ ಕೊಲೆ ಮಾಡಿದ್ದನು.

ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆರೋಪಿ ಮೇಲಿನ ಆರೋಪ ಸಾಬೀತಾಗಿದ್ದರಿಂದ ನ್ಯಾಯಾಧೀಶರಾದ ಸೈಯದ್ ಉನ್ನೀಸಾ ಅವರು ಕಲಂ 302ರಡಿ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ 50 ಸಾವಿರ ರೂ. ದಂಡ, ಕಲಂ 201ರಡಿ ಅಪರಾಧಕ್ಕೆ 5 ವರ್ಷಗಳ ಸೆರೆಮನೆ ವಾಸ ಮತ್ತು ತಲಾ 25 ಸಾವಿರ ರೂ. ದಂಡ, 341ರಡಿ ಅಪರಾಧಕ್ಕೆ 1 ತಿಂಗಳ ಸೆರೆಮನೆ ವಾಸ ಮತ್ತು ತಲಾ 500 ರೂ. ದಂಡ ವಿಧಿಸಿದ್ದಾರೆ. ಮೃತಳ ಇಬ್ಬರು ಮಕ್ಕಳಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರ ನೀಡುವಂತೆ ಪ್ರಾಧಿಕಾರಕ್ಕೆ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಎನ್.ಟಿ. ವಿಜಯಲಕ್ಷ್ಮಿ ಹಾಗೂ ಕೆ.ನಾಗರಾಜ ವಾದ ಮಂಡಿಸಿದ್ದರು.

# ಕುಡಿಯಲು ಹಣ ನೀಡದ ಸ್ನೇಹಿತನನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ

ಮಂಡ್ಯ, ಡಿ.12– ಕುಡಿಯಲು ಹಣ ಕೇಳಿದ್ದಲ್ಲದೆ ತನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದನೆಂಬ ಕಾರಣಕ್ಕಾಗಿ ಸ್ನೇಹಿತನ ತಲೆಗೆ ಇಟ್ಟಿಗೆಯಿಂದ ಹೊಡೆದು ಕೊಲೆ ಮಾಡಿದ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ನಗರದ 4ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ನಾಗಮಂಗಲ ತಾಲೂಕಿನ ಮುತ್ಸಂದ್ರ ಗ್ರಾಮದ ನಿವಾಸಿ ಬೀರೇಶ(54) ಶಿಕ್ಷೆಗೊಳಗಾದ ಆರೋಪಿ. ಅದೇ ಗ್ರಾಮದ ನಿವಾಸಿ ಪ್ರಕಾಶ್ ಕೊಲೆಯಾದವರು. 2021ರ ಜು.28ರಂದು ರಾತ್ರಿ 8.30ರಲ್ಲಿ ಪ್ರಕಾಶ್ ಗ್ರಾಮದ ಕಡೆ ನಡೆದುಕೊಂಡು ಬರುತ್ತಿದ್ದಾಗ ಎದುರಿನಿಂದ ಬರುತ್ತಿದ್ದ ಬೀರೇಶನ ಬಳಿ ಹೋಗಿ ಕುಡಿಯಲು ಹಣ ಕೊಡುವಂತೆ ಪ್ರಕಾಶ್ ಕೇಳಿದಾಗ ಬೀರೇಶ ಕೊಡಲು ನಿರಾಕರಿಸಿದ್ದಾನೆ. ಆಗ ಕೋಪಗೊಂಡ ಪ್ರಕಾಶ್ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಇದರಿಂದ ಕೋಪಗೊಂಡ ಬೀರೇಶ ಪ್ರಕಾಶನನ್ನು ಹಿಡಿದು ಎಳೆದಾಡಿ ಕೆಳಗೆ ಬೀಳಿಸಿ ಇಟ್ಟಿಗೆಯಿಂದ ತಲೆ ಹಿಂಭಾಗಕ್ಕೆ ಹೊಡೆದಿದ್ದಾನೆ.

ಗಲಾಟೆ ಕೇಳಿ ಗ್ರಾಮಸ್ಥರು ಸ್ಥಳಕ್ಕೆ ಬರುತ್ತಿರುವುದನ್ನು ಕಂಡ ಆರೋಪಿ ಬೀರೇಶ ಹೆದರಿ ಓಡಿ ಹೋಗಿದ್ದಾನೆ. ಕೂಡಲೇ ಗಾಯಾಳುವನ್ನು ಬಿ.ಜಿ.ನಗರದ ಎ.ಸಿ.ಗಿರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದನು. ಆರೋಪಿ ಬೀರೇಶನ ವಿರುದ್ಧ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನಗರದ 4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ಆರೋಪಿಗೆ ಜೀವಾವಧಿ ಶಿಕ್ಷೆ, 25 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಮೃತರ ಮಗನಿಗೆ ಪರಿಹಾರ ನೀಡಲು ಪ್ರಾಧಿಕಾರಕ್ಕೆ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕರಾದ ಜಯಶ್ರೀ ಎಸ್. ಶೆಣೈ ಹಾಗೂ ಎ.ಎನ್.ಮಧು ವಾದ ಮಂಡಿಸಿದ್ದರು.

## ಕಾವೇರಿ 3.0 ತಂತ್ರಾಂಶ ರದ್ಧತಿಗೆ ಒತ್ತಾಯಿಸಿ

# ದಸ್ತಾವೇಜು ಪತ್ರ ಬರಹಗಾರರಿಂದ ಮುಷ್ಕರ

ಕೆ.ಆರ್.ಪೇಟೆ, ಡಿ.12– ಕಾವೇರಿ 3.0 ತಂತ್ರಾಂಶ ರದ್ದುಗೊಳಿಸುವಂತೆ ಒತ್ತಾಯಿಸಿ ತಾಲೂಕು ದಸ್ತಾವೇಜು ಪತ್ರ ಬರಹಗಾರರ ಸಂಘದ ಸದಸ್ಯರು ಉಪ ನೋಂದಣಾಧಿಕಾರಿ ಕಚೇರಿ ಎದುರು ಲೇಖನಿ ಸ್ಥಗಿತ ಮುಷ್ಕರ ನಡೆಸಿದರು.

ರಾಜ್ಯ ದಸ್ತಾವೇಜು ಪತ್ರ ಬರಹಗಾರರ ಒಕ್ಕೂಟದ ಕರೆ ಮೇರೆಗೆ ಲೇಖನಿ ಸ್ಥಗಿತ ಮಾಡಿ ಬೆಳಗ್ಗೆಯಿಂದ ಸಂಜೆವರೆಗೂ ಧರಣಿ ನಡೆಸಿದ ಪತ್ರ ಬರಹಗಾರರು ರಾಜ್ಯ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ಪೇಪರ್ ಲೆಸ್ ನೋಂದಣಿ ಮಾಡಿಸುವ ಕಾವೇರಿ 3.0 ತಂತ್ರಾಂಶವನ್ನು ರದ್ದು ಮಾಡಬೇಕು. ಪರವಾನಗಿ ಪಡೆದ ದಸ್ತಾವೇಜು ಬರಹಗಾರರಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ 2.0 ತಂತ್ರಾಂಶದಲ್ಲಿ ಪ್ರತ್ಯೇಕ ಲಾಗಿನ್ ಸೃಜಿಸಿ ಕೊಡಬೇಕು. ಸುಧಾರಣೆ ನೆಪದಲ್ಲಿ ಪತ್ರ ಬರಹಗಾರರ ಅಸ್ತಿತ್ವಕ್ಕೆ ಧಕ್ಕೆ ತರಲು ಹೊರಟಿರುವುದು ಪತ್ರ ಬರಹಗಾರರಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಭಾರೀ ತೊಂದರೆಯಾಗುವ ಸಾಧ್ಯತೆಯೇ ಹೆಚ್ಚಾಗಿದೆ. ಹಾಗಾಗಿ ಕೂಡಲೇ ಸರ್ಕಾರ ತರಲು ಉದ್ದೇಶಿಸಿರುವ ಕಾವೇರಿ 3.0 ತಂತ್ರಾಂಶ ರದ್ದು ಮಾಡಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 16 ಸಾವಿರ ದಸ್ತಾವೇಜು ಪತ್ರ ಬರಹಗಾರರು ಮತ್ತು ಅವರ ಕುಟುಂಬವನ್ನು ರಕ್ಷಣೆ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಕೆ.ಆರ್.ಪೇಟೆಯಲ್ಲಿ ದಸ್ತಾವೇಜು ಪತ್ರ ಬರಹಗಾರರ ಸಂಘದ ಸದಸ್ಯರು ಮುಷ್ಕರ ನಡೆಸಿದರು.

ಪೇಪರ್ ಲೆಸ್ ನೋಂದಣಿಯಿಂದ ಜನಸಾಮಾನ್ಯರಿಗೆ ಹೆಚ್ಚು ಮೋಸವಾಗುವ ಸಾಧ್ಯತೆ ಇರುತ್ತದೆ. ಆಧಾರ್ ಕಾರ್ಡ್ ಮಾನದಂಡ ಇಟ್ಟುಕೊಂಡು ನೋಂದಣಿ ಮಾಡುವ ಪ್ರಕ್ರಿಯೆ ಮೋಸದ ನೋಂದಣಿಗೆ ರಹದಾರಿಯಾಗುತ್ತದೆ. ಇದು ಜನಸಾಮಾನ್ಯರು ಆಸ್ತಿಯನ್ನು ಕಳೆದುಕೊಂಡು ಬೀದಿಗೆ ಬೀಳುವಂತೆ ಮಾಡುತ್ತದೆ. ಯಾರು ಬೇಕಾದರೂ ಆಧಾರ್ ಲಿಂಕ್ ಆಗಿರುವ ಆರ್‌ಟಿಸಿ ಮತ್ತು ಮೊಬೈಲ್ ಓಟಿಪಿ ಮೂಲಕ ನೋಂದಣಿಯನ್ನು ಮಾಡುವ ಉದ್ದೇಶ ಹೊಂದಿದೆ ಎನ್ನಲಾಗುತ್ತಿದೆ. ಪೇಪರ್‌ಲೆಸ್ ನೋಂದಣಿಯಿಂದ ಪತ್ರ ಬರಹಗಾರರಿಗೆ ಕೆಲಸ ಇಲ್ಲದಂತಾಗುತ್ತದೆ ಇವರನ್ನೇ ನಂಬಿರುವ ಕಂಪ್ಯೂಟರ್ ಡಿಟಿಪಿ ಆಪರೇಟರ್, ಜೆರಾಕ್ಸ್ ಮಾಡುವವರು, ಇ–ಸ್ಟ್ಯಾಂಪಿಂಗ್ ಮಾರುವವರಿಗೆ ಕೆಲಸವೇ ಇಲ್ಲದಂತಾಗುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ದಸ್ತಾವೇಜು ಪತ್ರ ಬರಹಗಾರರ ಒಕ್ಕೂಟದ ಅಧ್ಯಕ್ಷ ಪಿ.ಎಸ್.ಶಿವಲಿಂಗೇಗೌಡ, ಕಾರ್ಯದರ್ಶಿ ಕೆಆರ್.ಹರೀಶ್‌ಕುಮಾರ್, ಉಪಾಧ್ಯಕ್ಷ ಕೆ.ಎಸ್. ನಾಗರಾಜು, ಖಜಾಂಚಿ ಮುದುಗೆರೆ ಶಂಕರ್‌ನಾಗ್, ಸಹ ಕಾರ್ಯದರ್ಶಿ ಬಿ.ನರಸಿಂಹಮೂರ್ತಿ, ಸಂಘಟನಾ ಕಾರ್ಯದರ್ಶಿ ಮುರುಗೇಶ್, ಕಾರ್ಯಕಾರಿ ನಿರ್ದೇಶಕರಾದ ಕೆ.ಸಿ. ವೆಂಕಟರಾಮು, ಎಂ.ಎಸ್.ಮಹಾದೇವು, ಕೆಟಿ.ಮಂಜುನಾಥ್, ಎಂ.ಎಸ್.ಮಹಾದೇವಸ್ವಾಮಿ, ಕೆ.ಎಸ್.ಬಸವರಾಜು, ಅಕ್ಕಿಹೆಬ್ಬಾಳು ಎ.ಎನ್.ರಮೇಶ್, ಡಿ.ಜೆ.ರೇವಣ್ಣ, ಸಿ.ಜೆ.ಸಣ್ಣಸ್ವಾಮಿ, ಎಂ.ಎನ್.ಶ್ರೀನಿವಾಸಮೂರ್ತಿ, ಸಾವಿತ್ರಿಹೆಗ್ಗಡೆ, ಎಸ್.ಆರ್.ನಾಗರಾಜು, ಡಿಟಿಪಿ ಆಪರೇಟರ್ಸ್ ಸೌಮ್ಯ, ಮಂಗಳ, ಶೋಭ, ರಜಿನಿ ಮತ್ತಿತರರಿದ್ದರು.

# ರೈತರು ಹೆಚ್ಚಿನ ಬೋನಸ್ ಪಡೆಯಿರಿ: ಶಾಸಕ ದರ್ಶನ್ ಪುಟ್ಟಣ್ಣಯ್ಯ

ಪಾಂಡವಪುರ, ಡಿ.12– ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ರೈತರು ಹೆಚ್ಚಿನ ಬೋನಸ್ ಪಡೆದರೆ ಮಾತ್ರ ಸಂಘದ ಜೊತೆಗೆ ರೈತರು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ತಾಲೂಕಿನ ಹೊಸಸಾಯಪನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಟ್ಟಡ ಉದ್ಘಾಟಿಸಿ, ಡೇರಿಗಳು ರೈತರ ಆರ್ಥಿಕ ಮೂಲವಾಗಿ ಕೆಲಸ ಮಾಡುತ್ತಿವೆ. ಮಕ್ಕಳ ವಿದ್ಯಾಭ್ಯಾಸಕ್ಕೂ ಹೈನುಗಾರಿಕೆ ನೆರವಾಗುತ್ತಿದೆ. ಹೀಗಾಗಿ ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು. ಡೇರಿಗೆ ಹೆಚ್ಚು ಹಾಲು ಪೂರೈಕೆ ಮಾಡಿ ಹೆಚ್ಚು ಬೋನಸ್ ಪಡೆದರೆ ಮಾತ್ರ ರೈತರು ಹಾಗೂ ಆಡಳಿತ ಮಂಡಳಿ ನಡುವೆ ವ್ಯವಹಾರ ಚೆನ್ನಾಗಿ ನಡೆಯುತ್ತಿದೆ ಎಂಬುದು ತಿಳಿಯುತ್ತದೆ ಎಂದರು.



ಡೈರಿ ನೂತನ ಕಟ್ಟಡವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಹಾಲು ಉತ್ಪಾದನೆಯಲ್ಲಿ ದೇಶದಲ್ಲಿಯೇ 2ನೇ ಸ್ಥಾನ ಕರ್ನಾಟಕ ಪಡೆದುಕೊಂಡಿದೆ. ಮನ್‌ಮುಲ್ ಒಕ್ಕೂಟ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದೆ. ನಿತ್ಯ 13 ಲಕ್ಷಕ್ಕೂ ಅಧಿಕ ಹಾಲು ಉತ್ಪಾದನೆ ಮಾಡುತ್ತಿದೆ. ಇದರಲ್ಲಿ ದೆಹಲಿ, ಉತ್ತರ ಪ್ರದೇಶ, ಜಾರ್ಖಂಡ್ ರಾಜ್ಯಗಳಲ್ಲಿ 1.5 ಲಕ್ಷ ಲೀಟರ್ ಹಾಲು ಮಾರಾಟ ಮಾಡುತ್ತಿದೆ. ಬರೀ ಎಮ್ಮೆ ಹಾಲನ್ನು ಕುಡಿಯುವ ಉತ್ತರ ಭಾರತ ರಾಜ್ಯಗಳಲ್ಲಿ ನಮ್ಮ ನಂದಿನಿ ಹಾಲು ಮಾರಾಟವಾಗುತ್ತಿದೆ ಎಂದರೆ ನಮ್ಮ ಹಾಲು ಎಷ್ಟು ಗುಣಮಟ್ಟದಿಂದ ಕೂಡಿದೆ ಎನ್ನುವುದು ತಿಳಿಯುತ್ತದೆ ಅದಕ್ಕೆಲ್ಲಾ ನಮ್ಮ ರೈತರೇ ಕಾರಣ ಎಂದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್. ಪ್ರಸಾದ್, ಡೇರಿ ಅಧ್ಯಕ್ಷೆ ದೀಪ, ಉಪಾಧ್ಯಕ್ಷೆ ಗೌರಮ್ಮ, ನಿರ್ದೇಶಕರಾದ ಪವಿತ್ರ, ಸುಮ, ಶೈಲಜಾ, ಎನ್.ಎಸ್.ರಾಧ, ಸುಜಾತ, ಭವ್ಯ, ಸರಸ್ವತಿ, ರಾಧ, ಕಾರ್ಯದರ್ಶಿ ವಸಂತ, ಸಿಬ್ಬಂದಿಗಳಾದ ಧನಲಕ್ಷ್ಮಿ, ವಿದ್ಯಾಶ್ರೀ, ಶಿವಪ್ಪ, ಧರ್ಮಸ್ಥಳ ಯೋಜನಾಧಿಕಾರಿ ಯಶ್ವಂತ್, ಮಾರ್ಗ ವಿಸ್ತರಣಾಧಿಕಾರಿಗಳಾದ ಉಷಾ, ಪ್ರಜ್ವಲ್, ಗ್ರಾಪಂ ಸದಸ್ಯ ಸಿ.ಚಂದ್ರು, ಮಾಜಿ ಸದಸ್ಯ ಮಹದೇವು, ಅಂಬುಜ, ವೆಂಕಟೇಶ್, ಧರಣಿ, ಸೋಮೇಗೌಡ, ತಿಮ್ಮೇಗೌಡ, ಶಿವೇಗೌಡ, ಮಂಚೇಗೌಡ, ಮಧುಕುಮಾರ್, ಪುಟ್ಟೇಗೌಡ, ಪರಶುರಾಮ್, ಸೋಮೇಗೌಡ, ನಾರಾಯಣ್ ಇದ್ದರು.

## ತಿಪ್ಪೇಗೌಡ ನಿಧನ

ಭಾರತೀನಗರ, ಡಿ.12– ನಿಡಘಟ್ಟ ಗ್ರಾಮದ ನಿವಾಸಿ ತಿಪ್ಪೇಗೌಡ ಉರುಫ್ ಬೊಮ್ಮೇಗೌಡ (80) ಶುಕ್ರವಾರ ಸಂಜೆ ನಿಧನರಾದರು. ಮೃತರು ಪತ್ನಿ ನಾಗಮ್ಮ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಶನಿವಾರ ಬೆಳಗ್ಗೆ 11.30ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.



## ಸತೀಶ್



ಕೆ.ಆರ್.ಪೇಟೆ, ಡಿ.12– ತಾಲೂಕಿನ ಬಂಡಿಹೊಳೆ ಗ್ರಾಮದ ನಿವಾಸಿ ಸತೀಶ್ (45) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಡಿ.13ರಂದು ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

## ಸುವ್ಯವಸ್ಥೆ ಹದಗೆಟ್ಟಿದೆ

ಪ್ರಮುಖ ನಗರವಾದ ಮೈಸೂರಿನಲ್ಲಿ ಬೃಹತ್ ಎಂಡಿಎಂಎ ತಯಾರಿಕಾ ಘಟಕವನ್ನು ನೆರೆ ರಾಜ್ಯದ ಪೊಲೀಸರು ಪತ್ತೆ ಹಚ್ಚಿದರು. ನಮ್ಮ ರಾಜ್ಯದ ಪರಿಸ್ಥಿತಿ ಹದಗೆಟ್ಟಿರುವುದಕ್ಕೆ ಇದು ಜ್ವಲಂತ ಸಾಕ್ಷಿ. ನಿರಂತರವಾಗಿ ನಡೆಯುತ್ತಿರುವ ಇಂತಹ ಘಟನೆಗಳಿಂದ ಸ್ಥಳೀಯ ಆರ್ಥಿಕತೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ದೂರಿದ್ದಾರೆ.

**ಹಂಪಿಯಲ್ಲಿ ವ್ಯಾಪಾರಕ್ಕೆ ಹೊಡೆತ:** ಮುಖ್ಯವಾಗಿ ನಮ್ಮ ಪಾರಂಪರಿಕ ಹಾಗೂ ಐತಿಹಾಸಿಕ ನಗರವಾದ ಹಂಪಿಯಲ್ಲಿ ಕಾನೂನು ಸುವ್ಯವಸ್ಥೆ ತೀರಾ ಹದಗೆಟ್ಟಿರುವುದರಿಂದ ವಿದೇಶಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಇದರಿಂದ ಸ್ಥಳೀಯ ವ್ಯಾಪಾರ ಕ್ಷೇತ್ರಕ್ಕೆ ಭಾರೀ ಹೊಡೆತ ಬಿದ್ದಿದೆ ಎಂದು ಇದೇ ವೇಳೆ ಆತಂಕ ವ್ಯಕ್ತಪಡಿಸಿದ್ದಾರೆ.

ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವಾಲಯವು, ಪ್ರವಾಸೋದ್ಯಮ ಕ್ಷೇತ್ರದ ಸುರಕ್ಷತೆ ಹಾಗೂ ಅಭಿವೃದ್ಧಿ ದೃಷ್ಟಿಯಲ್ಲಿ ಹೆಚ್ಚಿನ ಭದ್ರತೆ ಹಾಗೂ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ನೀತಿ ರೂಪಿಸಬೇಕಾದ ಅಗತ್ಯವಿದೆ. ಪ್ರವಾಸೋದ್ಯಮ ತಾಣಗಳಲ್ಲಿ ಎಲ್ಲ ರೀತಿಯ ಮೂಲ ಸೌಕರ್ಯ ಒದಗಿಸಬೇಕು. ಸ್ಥಳೀಯ ಸಮುದಾಯದ ಸಹಕಾರದೊಂದಿಗೆ ಸಮಗ್ರ ಹಾಗೂ ಎಲ್ಲರನ್ನೊಳಗೊಂಡ ಸೌಲಭ್ಯ ಕಲ್ಪಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂಬ ಭರವಸೆ ಹೊಂದಿರುವುದಾಗಿ ಯದುವೀರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಸಂಕ್ರಾಂತಿವರೆಗೆ ಸುಮ್ಮನಿರಿ...!

ನನ್ನ ಮೇಲಿದೆ. ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನನ್ನ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಅಷ್ಟೇ ಅಲ್ಲದೆ, ಬೇರೆ ಮುಖಂಡರೂ ನನ್ನ ಬೆನ್ನಿಗಿದ್ದಾರೆ.

ನೀವು ಆತಂಕಪಡುವ ಅಗತ್ಯವಿಲ್ಲ. ದುಡುಕುವುದೂ ಬೇಡ, ತಾಳ್ಮೆಯಿಂದಿರಿ. ಎಲ್ಲವೂ ಯಾವ ಸಮಯಕ್ಕೆ ಆಗಬೇಕೋ, ಆ ಸಮಯಕ್ಕೆ ಆಗುತ್ತೆ. ನನ್ನನ್ನು ಮತ್ತು ಮುಖ್ಯಮಂತ್ರಿ ಅವರನ್ನು ಡಿಸೆಂಬರ್ 21ರಂದು ದೆಹಲಿಗೆ ಬರುವಂತೆ ಆಹ್ವಾನ ನೀಡಿದ್ದಾರೆ. ಸೋನಿಯಾ ಗಾಂಧಿ ಒಂದೆರಡು ದಿನಗಳ ಹಿಂದೆ ನನ್ನ ಬಳಿ ಮಾತನಾಡಿದರು. ಸೋನಿಯಾ ಗಾಂಧಿ ಹಾಗೂ ಖರ್ಗೆ ನನ್ನ ಬಳಿ ಮಾತನಾಡಿರುವ ವಿವರವನ್ನು ಬಹಿರಂಗಪಡಿಸಲಾಗದು. ಯತೀಂದ್ರ ಸೇರಿದಂತೆ ಯಾರೇ ಹೇಳಿಕೆಗಳನ್ನು ನೀಡಿದರೆ ಅದಕ್ಕೆ ನೀವುಗಳು ಉದ್ವೇಗ ಮತ್ತು ಆವೇಶಕ್ಕೆ ಒಳಗಾಗಿ ಪ್ರತಿಕ್ರಿಯೆ ನೀಡಬೇಡಿ ಎಂದು ತಿಳಿಸಿದ್ದಾರೆ.

ನನಗೆ ಖರ್ಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರ ಸಲಹೆಯಂತೆಯೇ ಮುಂದುವರೆದಿದ್ದೇನೆ. ಈ ತಿಂಗಳ 14ರಂದು ದೆಹಲಿಯಲ್ಲಿ ಮತಗಳ್ಳತನ ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳಲು ಎಲ್ಲರೂ ಬನ್ನಿ, ಅವಕಾಶ ಸಿಕ್ಕರೆ ರಾಹುಲ್ ಗಾಂಧಿ ಜೊತೆ ಮಾತನಾಡೋಣ, ಇಲ್ಲದಿದ್ದರೆ, 21ಕ್ಕೆ ಹೇಗಿದ್ದರೂ ಸಭೆ ನಿಗದಿಯಾಗಿದೆ ಎಂದು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಇರುವವರೆಗೂ ಪ್ರತೀರಾತ್ರಿ ನಾವು ಭೋಜನಕೂಟಕ್ಕೆ ಸೇರೋಣ, ನಿಮ್ಮ ಜೊತೆ ಇನ್ನಷ್ಟು ಸ್ನೇಹಿತರು ಸೇರಿಕೊಳ್ಳುತ್ತಾರೆ. ಅವರಿಗೆ ಇಂದು ಬರಲು ಸಾಧ್ಯವಾಗಿಲ್ಲ ಎಂದು ಶಿವಕುಮಾರ್ ತಿಳಿಸಿದ್ದಾರೆ.

## ಕ್ಷಣದಲ್ಲಿ ಡಿಕೆಶಿ ಮುಖ್ಯಮಂತ್ರಿಯಾಗ್ತಾರೆ!

224 ಮಂದಿಯೂ ಬರುತ್ತಾರೆ. ಇಲ್ಲಿ ಪಕ್ಷ ಎಂಬುದಲ್ಲ. ನಮ್ಮ ನಾಯಕರು ಎಲ್ಲರಿಗೂ ಸ್ನೇಹಿತರು ಎಂದರು. ಇದೇ ಸಂದರ್ಭದಲ್ಲಿ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಶಿವಕುಮಾರ್ ಸಾಹೇಬರು ಊಟಕ್ಕೆ ಕರೆದಿರಲಿಲ್ಲ, ನಮಗೆ ಎಲ್ಲರಿಗೂ ಬೇಕಾದ ಸ್ನೇಹಿತರು ಔತಣ ಕೂಟ ಏರ್ಪಡಿಸಿದ್ದರು, ಹೋಗಿದ್ದೆವು.

**ಒಟ್ಟಿಗೆ ಹೋರಾಟದಿಂದ ಅಧಿಕಾರ:** ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಸಿದ್ದರಾಮಯ್ಯ, ಶಿವಕುಮಾರ್ ಒಟ್ಟಿಗೆ ಹೋರಾಟ ಮಾಡಿದ್ದರಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ಅದು ವರಿಷ್ಠರಿಗೂ ತಿಳಿದಿದೆ. ಅವರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ ಎಂದರು. ಬಾಲಕೃಷ್ಣ ಮಾತನಾಡಿ, ಕರ್ನಾಟಕ ಕಾಂಗ್ರೆಸ್ ಪರಿಸ್ಥಿತಿ ವರಿಷ್ಠರ ಗಮನಕ್ಕೆ ಬಂದಿದೆ. ಅವರು ಒಂದು ನಿರ್ಧಾರ ಕೈಗೊಳ್ಳುತ್ತಾರೆ. ಯತೀಂದ್ರ ನೀಡುತ್ತಿರುವ ಹೇಳಿಕೆ ಪಕ್ಷಕ್ಕೆ ಮುಜುಗರ ತರುತ್ತಿದೆ. ಇಲ್ಲಿ ಎಲ್ಲರಿಗೂ ಒಂದೇ ನ್ಯಾಯ ಇರಬೇಕು. ದೊಡ್ಡವರಿಗೊಂದು, ಚಿಕ್ಕವರಿಗೊಂದು ನ್ಯಾಯ ಸರಿಯಲ್ಲ. ಅವರ ಹೇಳಿಕೆಗೆ ನಮ್ಮ ಇಕ್ಬಾಲ್ ಹುಸೇನ್ ಅದ್ಭುತ ವ್ಯಾಖ್ಯಾನ ಮಾಡಿದ್ದಾರೆ. ಅಷ್ಟೇ ಸಾಕು ಎಂದರು.

# ನಾನು ಯಾವುದೇ ಬಲಪ್ರದರ್ಶನ ಮಾಡುತ್ತಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ: ಡಿಕೆಶಿ

**ಬೆಳಗಾವಿ:** ನಾನು ಯಾವುದೇ ಬಲಪ್ರದರ್ಶನ ಮಾಡುತ್ತಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.



ಬೆಳಗಾವಿಯ ಸರ್ಕಿಟ್ ಹೌಸ್ ಹಾಗೂ ಸುವರ್ಣ ಸೌಧದಲ್ಲಿ ಮಾತನಾಡಿದ ಅವರು, ಡಿನ್ನರ್ ಮೀಟಿಂಗ್ ಮೂಲಕ ಬಲಪ್ರದರ್ಶನ ಮಾಡುವ ಅಗತ್ಯ ನನಗಿಲ್ಲ. ನನ್ನ ಹಿಂದೆ ಯಾರೂ ಬರುವುದು ಬೇಡ, ನನ್ನ ಪರವಾಗಿ ಯಾರು ಮಾತನಾಡುವುದೂ ಬೇಡ. ನಾನು ಸಿಎಂ ಸೇರಿದಂತೆ 140 ಶಾಸಕರದ್ದು ಒಂದೇ ಗುಂಪು. ಅದು ಕಾಂಗ್ರೆಸ್ ಗುಂಪು. ಯಾವುದೇ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡಬೇಡಿ ಎಂದಿದ್ದಾರೆ. ನಾನು ಯಾವುದೇ ಡಿನ್ನರ್ ಮೀಟಿಂಗ್ ಮಾಡಿಲ್ಲ. ದೊಡ್ಡಣ್ಣನವರ ಬೆಳಗಾವಿ ಜಿಲ್ಲಾ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರು. ನನ್ನ ಸ್ನೇಹಿತರೂ ಹೌದು. ಅವರದು ದೊಡ್ಡ ಕುಟುಂಬ. ಕಳೆದ 15 ವರ್ಷಗಳಿಂದ ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ಹೀಗಾಗಿ ನಾನೂ ಸೇರಿದಂತೆ ಒಂದಷ್ಟು ಜನರು ಊಟಕ್ಕೆ ಹೋಗಿದ್ದೆವು, ಅಷ್ಟೇ. ಅವರಿಗೆ ಗೌರವ ನೀಡುವ ಉದ್ದೇಶದಿಂದ ಅವರ ಮನೆಗೆ ಹೋಗಿದ್ದೆ. ಇದರ ಹೊರತಾಗಿ ಬೇರೇನೂ ಇಲ್ಲ ಎಂದು ತಿಳಿಸಿದ್ದಾರೆ.

ಸಿಎಂ ಹುದ್ದೆ ವಿಚಾರವಾಗಿ ಯತೀಂದ್ರ ಅವರು ಪದೇ ಪದೆ ಹೇಳಿಕೆ ನೀಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲದಕ್ಕೂ ಉತ್ತರ ನೀಡಲಿದ್ದಾರೆ. ಮತಗಳ್ಳತನ ವಿರುದ್ಧದ ಹೋರಾಟದಲ್ಲಿ ಭಾಗವಹಿಸಲು ಶನಿವಾರ (ಡಿ.13) ದೆಹಲಿಗೆ ತೆರಳುತ್ತಿದ್ದೇನೆ. ರಾಹುಲ್ ಗಾಂಧಿ ಅವರು ಕರ್ನಾಟಕದಲ್ಲೇ ಮತಗಳ್ಳತನ ವಿರುದ್ಧ ಹೋರಾಟ ಆರಂಭಿಸಿದರು. ನಾವು 2023ರಲ್ಲೇ ಚಿಲುಮೆ ಅಕ್ರಮದ ಮೂಲಕ ಮತಗಳ್ಳತನವನ್ನು ಪತ್ತೆ ಮಾಡಿದ್ದೆವು. ನಾನು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರೆಲ್ಲರೂ ಚುನಾವಣಾ ಆಯೋಗಕ್ಕೆ ದೂರು ನೀಡಿ ಹೋರಾಟ ಮಾಡಿದೆವು. ನಂತರ ನಾವು ವಿಧಾನಸಭೆ ಚುನಾವಣೆಯಲ್ಲಿ ಗೆದ್ದೆವು. ಲೋಕಸಭೆ ಚುನಾವಣೆ ಸಮಯದಲ್ಲಿ ಆಗಿರುವ ಮತಗಳ್ಳತನವನ್ನು ರಾಹುಲ್ ಗಾಂಧಿ ಅವರು ಸಾಕ್ಷಿ ಸಮೇತ ಜನರ ಮುಂದಿಟ್ಟಿದ್ದಾರೆ. ಚುನಾವಣಾ ಆಯೋಗವು ನಿರ್ದಿಷ್ಟ ರಾಜಕೀಯ ಪಕ್ಷದ ಅಸ್ತ್ರವಾಗಿದ್ದು, ನಾವು ಅದರ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಈ ವಿಚಾರವಾಗಿ ರಾಜ್ಯದಲ್ಲಿ ನಡೆಸಿದ ಸಹಿ ಸಂಗ್ರಹ ಅಭಿಯಾನದಲ್ಲಿ 1.43 ಕೋಟಿ ಸಹಿ ಸಂಗ್ರಹವಾಗಿದ್ದು, ಎಲ್ಲಾ ಕಾರ್ಯಕರ್ತರು ಹಾಗೂ ನಾಯಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದಿದ್ದಾರೆ.

## ಆಡಳಿತ 'ಕೈ' ವಶ!

ಕಳೆದ ಜೂ.26 ರಂದು ನಡೆದ ಚುನಾವಣೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಂಘಗಳ ಪ್ರತಿನಿಧಿಗಳ ಕ್ಷೇತ್ರ, ತಾಲೂಕು ಜಿಲ್ಲೆ ಹಾಗೂ ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಪ್ರತಿನಿಧಿ ಕ್ಷೇತ್ರ ಹಾಗೂ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ ಕ್ಷೇತ್ರದ ಮತದಾರರಲ್ಲಿ ಕೆಲವರಿಗೆ ನ್ಯಾಯಾಲಯ ಮತದಾನಕ್ಕೆ ಅವಕಾಶ ನೀಡಿ, ಮುಂದಿನ ಆದೇಶದ ನಂತರ ಫಲಿತಾಂಶ ಪ್ರಕಟಿಸಲು ಸೂಚಿಸಿತ್ತು.

**ಒಂದು ಮತದ ಗೆಲುವು:** ಜೂ.26 ರಂದು ನಡೆದಿದ್ದ ಮತ ಎಣಿಕೆಯಲ್ಲಿ ತಾಲೂಕು ಜಿಲ್ಲೆ ಹಾಗೂ ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಪ್ರತಿನಿಧಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್.ಚಂದ್ರಶೇಖರ್ 23 ಹಾಗೂ ಟಿ.ರಾಮೇಗೌಡ 27 ಮತಗಳನ್ನು ಪಡೆದಿದ್ದರು. ಇಂದು ನ್ಯಾಯಾಲಯದ ಅನುಮತಿ ಪಡೆದು ಚಲಾಯಿಸಿದ್ದ 9 ಮತಗಳ ಎಣಿಕೆ ನಡೆಸಿದಾಗ ಚಂದ್ರಶೇಖರ್‌ಗೆ 7 ಹಾಗೂ ರಾಮೇಗೌಡರಿಗೆ 2 ಮತಗಳು ಚಲಾವಣೆ ಯಾಗಿವೆ. ಇದರೊಂದಿಗೆ ಚಂದ್ರಶೇಖರ್ ಒಟ್ಟು ಮತಗಳ ಸಂಖ್ಯೆ 30ಕ್ಕೆ ಹೆಚ್ಚಳವಾಗಿ, ಪ್ರತಿಸ್ಪರ್ಧಿ ವಿರುದ್ಧ 1 ಮತದಿಂದ ರೋಚಕ ಗೆಲುವು ಸಾಧಿಸಿದ್ದಾರೆ.

ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಂಘಗಳ ಪ್ರತಿನಿಧಿಗಳ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್‌ಬಿಎಂ ಮಂಜು 23, ಜಿ.ಎನ್.ಮಂಜುನಾಥ್ 22 ಹಾಗೂ ಹೆಚ್.ವಿ.ರಾಜೀವ್ 9 ಮತ ಪಡೆದಿದ್ದರು. ಇಂದು ನ್ಯಾಯಾಲಯದ ಅನುಮತಿ ಪಡೆದು ಚಲಾಯಿಸಿದ್ದ 3 ಮತಗಳ ಎಣಿಕೆ ನಡೆಸಿದಾಗ ಜಿ.ಎನ್.ಮಂಜುನಾಥ್‌ಗೆ 2 ಹಾಗೂ ರಾಜೀವ್‌ಗೆ 1 ಮತ ಚಲಾವಣೆಯಾಗಿವೆ. ಇದರೊಂದಿಗೆ ಜಿ.ಎನ್. ಮಂಜುನಾಥ್ ಮತಗಳ ಸಂಖ್ಯೆ 24ಕ್ಕೆ ಹೆಚ್ಚಳವಾಗಿ, ಇವರೂ ಒಂದು ಮತದಿಂದ ಗೆದ್ದಿದ್ದಾರೆ. ಇನ್ನು ಕೊಳ್ಳೇಗಾಲ ಹಾಗೂ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಆರ್. ನರೇಂದ್ರ 9 ಹಾಗೂ ಪ್ರತಿಸ್ಪರ್ಧಿ ಬಿ.ಎಸ್. ಮಲ್ಲೇಶ್ 8 ಮತಗಳನ್ನು ಪಡೆದಿದ್ದರು. ಇದೀಗ ನರೇಂದ್ರ ಗೆಲುವನ್ನು ಪ್ರಕಟಿಸಲಾಗಿದೆ.

## ಚುನಾವಣೆ ಸನ್ನಿಹಿತ!

'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಿತ್ತು. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್ ಮೊರೆ ಹೋಗಿತ್ತು. ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ 2023ರ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿ ಅಂತಿಮಗೊಳಿಸಿರಲಿಲ್ಲ. ಸಂಪುಟದ ನಿರ್ಧಾರದೊಂದಿಗೆ ಸುದೀರ್ಘ ಅವಧಿ ನನೆಗುದಿಗೆ ಬಿದ್ದಿದ್ದ ಚುನಾವಣೆ ನಡೆಯುವುದು ಖಚಿತವಾಗಿದೆ.

## ಮೈಸೂರು ನಗರ, ಜಿಲ್ಲೆಯ ಪೊಲೀಸರ ಸಮರ

ಪೋಷಕರು ಸೂಕ್ಷ್ಮವಾಗಿ ಗಮನಿಸಿ, ಮೇಲ್ವಿಚಾರಣೆ ನಡೆಸಬೇಕು. ಇದು ತಂದೆ–ತಾಯಿಗಳ ಪ್ರಮುಖ ಜವಾಬ್ದಾರಿಯೂ ಆಗಿರುತ್ತದೆ. ಇದೇ ರೀತಿ ತರಗತಿಗಳಲ್ಲಿ ವಿದ್ಯಾರ್ಥಿಗಳ ಮನಃಸ್ಥಿತಿಯನ್ನು ಶಿಕ್ಷಕರು ಗಮನಿಸಬೇಕು. ಮಕ್ಕಳು ದಾರಿ ತಪ್ಪಿದ್ದಾರೆ ಎಂದು ಖಚಿತವಾದರೆ ಅವರಿಗೆ ಬುದ್ಧಿವಾದ ಹೇಳಿ ಸರಿದಾರಿಗೆ ತರಬೇಕು ಎಂದು ಸೀಮಾ ಲಾಟ್ಕರ್ ಸಲಹೆ ನೀಡಿದರು.

### ಮೈಸೂರಿನ 166 ಕಾಲೇಜುಗಳಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ

ಮೈಸೂರಿನ 166 ಕಾಲೇಜುಗಳಿಗೆ ಭೇಟಿ ನೀಡಿ ಡ್ರಗ್ಸ್ ಸೇವನೆಯ ದುಷ್ಪರಿಣಾಮಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಮೈಸೂರು ಜಿಲ್ಲೆಯ 166 ಕಾಲೇಜುಗಳ 14 ಸಾವಿರ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಡ್ರಗ್ಸ್ ಸೇವನೆಯಿಂದ ಯಾವ ರೀತಿಯ ಸಂಕಷ್ಟ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂಬ ಬಗ್ಗೆ ಜಾಗೃತಿ ಮೂಡಿಸಿದ್ದೇವೆ. ಮೈಸೂರು ಜಿಲ್ಲೆಯಾದ್ಯಂತ ಕಾರ್ಯಾಚರಣೆ ನಡೆಸಿ, ಈಗಾಗಲೇ ಹಲವು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದೇವೆ. ಹೊರಗಿನಿಂದ ಬರುವ ಅಪರಿಚಿತ ವ್ಯಕ್ತಿಗಳನ್ನು ಕರೆತಂದು ತೀವ್ರ ವಿಚಾರಣೆಗೊಳಪಡಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶದ ಸಣ್ಣ ಪುಟ್ಟ ಅಂಗಡಿಗಳು, ಗುಡಿಸಲುಗಳ ಮೇಲೆ ದಾಳಿ ಮಾಡಿ ತಪಾಸಣೆ ಮಾಡುತ್ತಿದ್ದೇವೆ. ಈ ಮೂಲಕ ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಲು ಗಂಭೀರ ಪ್ರಯತ್ನ ಮಾಡುತ್ತಿದ್ದೇವೆ.

– ಎನ್.ವಿಷ್ಣುವರ್ಧನ್, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

# ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿರುವ ಮೈಸೂರಿನ ಡ್ರಗ್ಸ್ ಫ್ಯಾಕ್ಟರಿಯ ದಂಧೆಕೋರರು

● ಮುಂಬೈ, ಗುಜರಾತ್‌ಗಳಲ್ಲಿ ಜಾಲಾಡಿ ಬಂದ ಪೊಲೀಸ್ ವಿಶೇಷ ತಂಡ ● ಮೊಬೈಲ್ ಬಳಸದ, ಕುಟುಂಬಸ್ಥರನ್ನು ಸಂಪರ್ಕಿಸದ ದಂಧೆಕೋರರು ● ಇವರ ಬಂಧನಕ್ಕೆ ಪೊಲೀಸರು ಏನೇ ತಂತ್ರ ಬಳಸಿದರೂ ವರ್ಕ್‌ಔಟ್ ಆಗಿಲ್ಲ!



ಮೈಸೂರು, ಡಿ.12 (ಬಿಎಲ್‌ಯು)– ಮೈಸೂರಿನ ರಿಂಗ್ ರಸ್ತೆಯ ಬೆಲವತ್ತ ಬಳಿ ನೂರಾರು ಕೋಟಿ ರೂಪಾಯಿಗಳ ಡ್ರಗ್ಸ್ ಪತ್ತೆ ಹಾಗೂ ಈ ಡ್ರಗ್ಸ್ ಫ್ಯಾಕ್ಟರಿ ನಡೆಸುತ್ತಿದ್ದ ಮೂವರು ಆರೋಪಿಗಳು ಈ ತನಕ ಸಿಗದೆ ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದಾರೆ. ಮೈಸೂರಿನ ಬೆಲವತ್ತ ಬಳಿ ಶೆಡ್‌ನಲ್ಲಿ ಎಂಡಿಎಂಎ ಡ್ರಗ್ಸ್ ತಯಾರಿಸಲಾಗುತ್ತಿತ್ತು. ಇಲ್ಲಿ ತಯಾರಿಸುತ್ತಿದ್ದ ಡ್ರಗ್ಸ್ ಮುಂಬೈ ಸೇರಿದಂತೆ ಇತರೆ ರಾಜ್ಯಗಳಿಗೆ ಸರಬರಾಜಾಗುತ್ತಿತ್ತು.

ಮುಂಬೈನಲ್ಲಿ ಬಂಧಿತನಾದ ಡ್ರಗ್ಸ್ ಪೆಡ್ಲರ್ ನಿಂದ ಮಾಹಿತಿ ಪಡೆದ ಅಲ್ಲಿನ ಪೊಲೀಸರು ಮೈಸೂರು ಪೊಲೀಸರ ಸಹಕಾರದಿಂದ ರಿಂಗ್ ರಸ್ತೆಯ ಶೆಡ್ ಮೇಲೆ ದಾಳಿ ಮಾಡಿದ್ದರು. ಈ ವೇಳೆ ನೂರಾರು ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿ ಕೊಂಡ ಪೊಲೀಸರು, ಮೈಸೂರು ಹಾಗೂ ಮುಂಬೈನಲ್ಲಿ ಡ್ರಗ್ಸ್ ದಂಧೆಯಲ್ಲಿ ಭಾಗಿಯಾಗಿದ್ದ ಎಂಟು ಮಂದಿಯನ್ನು ಬಂಧಿಸಿದ್ದರು. ಆದರೆ, ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮೂವರು ಮಾತ್ರ ಈ ತನಕ ಪೊಲೀಸರ ಕೈಗೆ ಸಿಗದೆ ತಲೆ ಮರೆಸಿಕೊಂಡಿದ್ದಾರೆ. ಮೈಸೂರಿನವರೇ ಆದ ಇವರ ಬಂಧನಕ್ಕೆ ಪೊಲೀಸರು ವ್ಯಾಪಕ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಈಗಾಗಲೇ ಮುಂಬೈ ಹಾಗೂ ಗುಜರಾತ್‌ಗೆ ಹೋಗಿದ್ದ ಮೈಸೂರಿನ ವಿಶೇಷ ಪೊಲೀಸ್ ತಂಡ ಎಲ್ಲಾ ಕಡೆ ಜಾಲಾಡಿದರೂ ಆರೋಪಿಗಳ ಸುಳಿವು ಸಿಕ್ಕಿಲ್ಲ.


ಚಾಲಾಕಿಗಳಾದ ಇವರು ಪೊಲೀಸರಿಗೆ ಸಿಕ್ಕಿಬೀಳುತ್ತೇವೆ ಎಂದು ಮೊಬೈಲ್ ಫೋನ್ ಬಳಸುತ್ತಿಲ್ಲ. ಮನೆಯವರಿಗೆ ಫೋನ್ ಮಾಡಿದರೆ ಲೋಕೇಷನ್ ಟ್ರ್ಯಾಕ್ ಮಾಡಿ ತಮ್ಮನ್ನು ಬಂಧಿಸಬಹುದು ಎಂದು ಕುಟುಂಬಸ್ಥರನ್ನು ಸಹ ಸಂಪರ್ಕಿಸಿಲ್ಲ. ಈ ಮೂಲಕ ಖಾಕಿ ಬಲೆಗೆ ಬೀಳದೆ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ.

ಆದರೆ, ಒಂದಲ್ಲ ಒಂದು ದಿನ ಇವರಿಗೆ ಕೋಳ ತೊಡಿಸುತ್ತೇವೆ ಎಂದು ಪೊಲೀಸರು ಪ್ರತಿಜ್ಞೆ ಮಾಡಿ, ತಮ್ಮ ಪ್ರಯತ್ನ ಮುಂದುವರೆಸಿದ್ದಾರೆ.

### ಡ್ರಗ್ಸ್ ತಯಾರಿಸುತ್ತಿದ್ದ ಶೆಡ್‌ಗೆ ಬೀಗ ಮುದ್ರೆ

ಡ್ರಗ್ಸ್ ತಯಾರಿಸುತ್ತಿದ್ದ ಮೈಸೂರಿನ ರಿಂಗ್ ರಸ್ತೆಯ ಬೆಲವತ್ತ ಬಳಿಯ ಶೆಡ್‌ಗೆ ಪೊಲೀಸರು ಬೀಗಮುದ್ರೆ ಹಾಕಿದ್ದಾರೆ. ಇನ್ನು ಇದರ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ದಂಧೆಕೋರರು ಅನುಮಾನ ಬರಬಾರದೆಂದು ಶೆಡ್‌ನ ಒಂದು ಭಾಗದಲ್ಲಿ ಗ್ಯಾರೇಜ್ ನಡೆಸುತ್ತಿದ್ದರು. ಆದರೆ ಒಳಗೆ ಎಸಿ, ಶೀತೋಪಕರಣವುಳ್ಳ ಕೋಣೆಯಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ತಯಾರಿಸುತ್ತಿದ್ದರು. ಈ ಶೆಡ್‌ಗೆ ಪೊಲೀಸರು ಈಗ ಬೀಗಮುದ್ರೆ ಹಾಕಿದ್ದಾರೆ. ಶೆಡ್‌ನಲ್ಲಿ ಕೆಲವು ಹಳೆಯ ವಾಹನ ಹಾಗೂ ಟೂಲ್ಸ್‌ಗಳು ಹಾಗೆಯೇ ಬಿದ್ದಿವೆ. ಡ್ರಗ್ಸ್ ತಯಾರಿಸುತ್ತಿದ್ದ ಶೆಡ್‌ನ ಒಂದು ಭಾಗವನ್ನು ಸಂಪೂರ್ಣ ಬಂದ್ ಮಾಡಲಾಗಿದೆ. ಮೈಸೂರಿನ ಹೊಸಹುಂಡಿ ಬಳಿ ಚಾಮುಂಡಿಬೆಟ್ಟಕ್ಕೆ ಹೊಂದಿಕೊಂಡಂತೆ ನಿರ್ಜನ ಪ್ರದೇಶದಲ್ಲಿ ಇದೇ ರೀತಿಯ ಶೆಡ್‌ನಲ್ಲಿ ನಕಲಿ ನಂದಿನಿ ತುಪ್ಪ ತಯಾರಿಸಲಾಗುತ್ತಿತ್ತು. ಈ ಜಾಲವನ್ನು ಭೇದಿಸಿದ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದು, ಸಿಐಡಿ ವಿಚಾರಣೆ ನಡೆಯುತ್ತಿದೆ. ಇಂತಹ ಶೆಡ್ ನಿರ್ಮಾಣ ಮಾಡಿಕೊಂಡು, ಯಾರಿಗೂ ಅನುಮಾನ ಬಾರದಂತೆ ಗ್ಯಾರೇಜ್ ಸೇರಿದಂತೆ ಇತರೆ ಕೆಲಸ ಮಾಡಲಾಗುತ್ತದೆ. ಆದರೆ, ಇದು ನೆಪ ಮಾತ್ರ ಅಲ್ಲಿ ನಡೆಯುವ ದಂಧೆಯೇ ಬೇರೆ ಎಂದು ಸಾರ್ವಜನಿಕರು ದೂರಿದ್ದಾರೆ.

# ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್ ನಿಧನ



ಲಾತೂರ್, ಡಿ.12– ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್ ಅವರು ಶುಕ್ರವಾರ ಬೆಳಗ್ಗೆ ಮಹಾರಾಷ್ಟ್ರದ ತಮ್ಮ ಹುಟ್ಟೂರು ಲಾತೂರ್‌ನಲ್ಲಿ ನಿಧನರಾದರು.

90 ವರ್ಷದ ಪಾಟೀಲ್ ಅವರು ಅಲ್ಪಕಾಲದ ಅನಾರೋಗ್ಯದ ನಂತರ 'ದೇವ್‌ಘರ್' ನ ತಮ್ಮ ನಿವಾಸದಲ್ಲಿ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರ ಪುತ್ರ ಶೈಲೇಶ್ ಪಾಟೀಲ್, ಸೊಸೆ ಅರ್ಚನಾ (ಬಿಜೆಪಿ ನಾಯಕ) ಮತ್ತು ಇಬ್ಬರು ಮೊಮ್ಮಕ್ಕಳನ್ನು ಅಗಲಿದ್ದಾರೆ.

ಅವರು ಲೋಕಸಭೆಯ ಮಾಜಿ ಸ್ಪೀಕರ್ ಆಗಿದ್ದರು. ಹಿಂದಿನ ಯುಪಿಎ ಸರ್ಕಾರದಲ್ಲಿ ಗೃಹ ಖಾತೆ ಸೇರಿದಂತೆ ಪ್ರಮುಖ ಖಾತೆಗಳನ್ನು ಹೊಂದಿದ್ದರು.

**ಏಳು ಬಾರಿ ಗೆದ್ದಿದ್ದರು:** ಕಾಂಗ್ರೆಸ್ ನಾಯಕ ಶಿವರಾಜ್ ಪಾಟೀಲ್ 2004ರಿಂದ 2008ರವರೆಗೆ ಕೇಂದ್ರ ಗೃಹ ಸಚಿವರಾಗಿದ್ದರು ಮತ್ತು 1991ರಿಂದ 1996ರವರೆಗೆ ಲೋಕಸಭೆಯ 10ನೇ ಸ್ಪೀಕರ್ ಆಗಿದ್ದರು. ಅವರು ಪಂಜಾಬ್‌ನ ರಾಜ್ಯಪಾಲರೂ ಆಗಿದ್ದರು. 2010ರಿಂದ 2015ರವರೆಗೆ ಚಂಡೀಗಢ ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದರು.

ಅಕ್ಟೋಬರ್ 12, 1935ರಂದು ಜನಿಸಿದ ಪಾಟೀಲ್, ಲಾತೂರ್‌ನ ಪುರ ಸಭೆಯ ಮುಖ್ಯಸ್ಥರಾಗಿ ತಮ್ಮ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದ್ದರು. 70ರ ದಶಕದ ಆರಂಭದಲ್ಲಿ ಶಾಸಕರಾಗಿ ಆಯ್ಕೆಯಾದರು. ನಂತರ, ಅವರು ಲಾತೂರ್ ಲೋಕಸಭಾ ಸ್ಥಾನವನ್ನು ಏಳು ಬಾರಿ ಗೆದ್ದರು. 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ರೂಪತೈ ಪಾಟೀಲ್ ನೀಲಂಗೇಕರ್ ವಿರುದ್ಧ ಸೋತರು.

ತಮ್ಮ ಘನತೆಯ ನಡವಳಿಕೆಗೆ ಹೆಸರುವಾಸಿಯಾಗಿದ್ದ ಅವರು, ಸಾರ್ವಜನಿಕ ಭಾಷಣಗಳಲ್ಲಿ ಅಥವಾ ಖಾಸಗಿ ಸಂಭಾಷಣೆಗಳಲ್ಲಿ ಎಂದಿಗೂ ವೈಯಕ್ತಿಕ ವಾಗ್ದಾಳಿ ಮಾಡಿದವರಲ್ಲ.

**ಪ್ರಧಾನಿ ಸಂತಾಪ:** ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್ ಅವರ ನಿಧನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕಂಬನಿ ಮಿಡಿದಿದ್ದಾರೆ. ಶಿವರಾಜ್ ಪಾಟೀಲ್ ಅವರ ನಿಧನದಿಂದ ದುಃಖಿತನಾಗಿದ್ದೇನೆ. ಅವರು ಅನುಭವಿ ನಾಯಕರಾಗಿದ್ದರು, ಸಾರ್ವಜನಿಕ ಜೀವನದಲ್ಲಿ ತಮ್ಮ ದೀರ್ಘ ವರ್ಷಗಳಲ್ಲಿ ಶಾಸಕರು, ಸಂಸದರು, ಕೇಂದ್ರ ಸಚಿವರು, ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ಹಾಗೂ ಲೋಕಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅವರ ಕುಟುಂಬಸ್ಥರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

# ಜೋಯಾಲುಕ್ಕಾಸ್ 'ಉಡುಗೊರೆಗಳ ಋತು' ಅಭಿಯಾನ ಶುಭಾರಂಭ

Joyalukkas

ಮೈಸೂರು, ಡಿ.12– ಆರು ದಶಕಗಳಿಗೂ ಹೆಚ್ಚಿನ ಪರಂಪರೆ ಹೊಂದಿರುವ ಜೋಯಾಲುಕ್ಕಾಸ್ ಜ್ಯುವೆಲ್ಲರ್ಸ್‌ನ 'ಉಡುಗೊರೆಗಳ ಋತು(ದಿ ಸೀಸನ್ ಆಫ್ ಗಿಫ್ಟಿಂಗ್)' ಅಭಿಯಾನ ಶುಭಾರಂಭಗೊಂಡಿದೆ.


ಇಂದಿನಿಂದ ಜನವರಿ 4ರವರೆಗೆ ರಾಷ್ಟ್ರವ್ಯಾಪಿ ಈ ಅಭಿಯಾನ ಆಯೋಜಿಸಿದ್ದು, ದೇಶದ ಎಲ್ಲಾ ಜೋಯಾಲುಕ್ಕಾಸ್ ಶೋರೂಮ್‌ಗಳಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ. ಗ್ರಾಹಕರು ತಮ್ಮ ಹತ್ತಿರದ ಜೋಯಾಲುಕ್ಕಾಸ್ ಶೋರೂಮ್‌ಗೆ ಭೇಟಿ ನೀಡಿ, ವಿಶ್ವಾಸಾರ್ಹ ಸೇವೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಭಾರತದ ಕ್ರಿಯಾತ್ಮಕ ಆಭರಣಗಳ ರೀಟೇಲ್ ವ್ಯಾಪಾರದಲ್ಲಿ ಯಶಸ್ವಿಯಾಗಿ ಮುನ್ನಡೆದಿರುವ ಜೋಯಾಲುಕ್ಕಾಸ್, 'ಗ್ರಾಹಕ ಮೊದಲು' ಧ್ಯೇಯ ಹಾಗೂ 'ಮಾರುಕಟ್ಟೆ ನಾಯಕತ್ವ'ದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಸದ್ಯ 'ಉಡುಗೊರೆಗಳ ಋತು' ಶೀರ್ಷಿಕೆಯಲ್ಲಿ ಗ್ರಾಹಕರಿಗೆ ಎರಡು ಅಸಾಧಾರಣ ಕೊಡುಗೆಗಳನ್ನು ಘೋಷಿಸಿದ್ದು, ಗ್ರಾಹಕರು ಹಳೆಯ ಚಿನ್ನದ ವಿನಿಮಯದಲ್ಲಿ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ 250 ರೂ. ಹಾಗೂ ವಜ್ರ ಮತ್ತು ಕತ್ತರಿಸಿದ ವಜ್ರಗಳ ಮೌಲ್ಯದ ಮೇಲೆ ಶೇ.25ರಷ್ಟು ರಿಯಾಯ್ತಿ ಪಡೆಯಬಹುದಾಗಿದೆ.

ಈ ವಿಶೇಷ ಅಭಿಯಾನದ ಬಗ್ಗೆ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಡಾ.ಜೋಯ್ ಆಲುಕ್ಕಾಸ್ ಮಾತನಾಡಿ, ಭಾರತಾದ್ಯಂತ ಆಭರಣ ಪ್ರಿಯರಿಂದ ದೊರೆತಿರುವ ನಂಬಿಕೆ ಮತ್ತು ವಾತ್ಸಲ್ಯಕ್ಕೆ ಪ್ರತಿಯಾಗಿ ಕೃತಜ್ಞಾಪೂರ್ವಕವಾಗಿ ಉಡುಗೊರೆಗಳ ಋತು ಅಭಿಯಾನವನ್ನು ನೀಡಲಾಗಿದೆ. ಆಭರಣಗಳ ಮಾರಾಟ–ಖರೀದಿಗಷ್ಟೇ ಸೀಮಿತವಾಗಿರದ ಭಾವನೆ, ಸಂಬಂಧ, ಅನುಬಂಧವನ್ನು ಈ ಅಭಿಯಾನ ಸಂಕೇತಿಸುತ್ತದೆ. ವಿಶೇಷ ಕೊಡುಗೆಗಳ ಮೂಲಕ ವರ್ಷಾಂತ್ಯದಲ್ಲಿ ಗ್ರಾಹಕರಿಗೆ ಅನುಕೂಲಗಳನ್ನು ಕಲ್ಪಿಸಿ, ಅವರ ಸಂತಸ ಹೆಚ್ಚಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.

ಜೋಯಾಲುಕ್ಕಾಸ್, ಆಭರಣ ಮಾರಾಟ ಮತ್ತು ಖರೀದಿ ನಂತರದ ಪರಸ್ಪರ ಸಹಕಾರ, ಸುರಕ್ಷಿತ ಚಿನ್ನ ವಿನಿಮಯ ಸಂಬಂಧಿತ ಮಾರ್ಗದರ್ಶನ, ವೈವಿಧ್ಯಮಯ ವಿನ್ಯಾಸಗಳ ಪರಿಚಯ ಸೇರಿದಂತೆ ಹಲವು ಗ್ರಾಹಕ ಕೇಂದ್ರಿತ ಸೇವೆಗಳನ್ನು ಮುಂದುವರೆಸಿದೆ. ಹಬ್ಬ, ವಿವಾಹ ಇನ್ನಿತರ ಯಾವುದೇ ಕಾರ್ಯಕ್ರಮಗಳು, ಉದ್ದೇಶಗಳ ಹಿನ್ನೆಲೆಯಲ್ಲಿ ಆಭರಣ ಖರೀದಿಸುವ ಗ್ರಾಹಕರ ವಿಶ್ವಾಸವನ್ನು ಗಟ್ಟಿಯಾಗಿ ಉಳಿಸಿಕೊಂಡಿದೆ. ಜೋಯಾಲುಕ್ಕಾಸ್ ಪ್ರಯಾಣದಲ್ಲಿ ಆಭರಣಗಳ ಗುಣಮಟ್ಟ, ಮೌಲ್ಯ, ಗ್ರಾಹಕರಿಗೆ ಸಂತೃಪ್ತಿ ಒದಗಿಸುವಲ್ಲಿ ಬದ್ಧತೆ ಹೊಂದಲಾಗಿದೆ. ಪ್ರೀತಿಯ ಗ್ರಾಹಕರು ಹತ್ತಿರದ ಜೋಯಾಲುಕ್ಕಾಸ್ ಶೋರೂಮ್‌ಗೆ ಭೇಟಿ ನೀಡಿ, ಉಡುಗೊರೆಗಳ ಋತು ಅಭಿಯಾನವನ್ನು ಸಂಭ್ರಮಿಸುವಂತೆ ಮನವಿ ಮಾಡಿದ್ದಾರೆ.

## ಪೊಲೀಸ್ ಪಥಸಂಚಲನ



ಮೈಸೂರಿನಲ್ಲಿ ಶನಿವಾರ 'ಹನುಮ ಜಯಂತಿ' ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ನೂರಾರು ಪೊಲೀಸರು ಶುಕ್ರವಾರ ರಾತ್ರಿ, ಪುರಭವನದಿಂದ ಮಹಾರಾಣಿ ಪದವಿಪೂರ್ವ ಕಾಲೇಜಿನವರೆಗೆ ಪಥಸಂಚಲನ ನಡೆಸಿದರು.

# ಸರ್ಕಾರಿ ಶಾಲೆಗೆ ಪೀಠೋಪಕರಣ ಕೊಡುಗೆ



ದೊಡ್ಡಮಾರಗೌಡನಹಳ್ಳಿ ಶಾಲೆಗೆ ವಾಣಿಜ್ಯೋದ್ಯಮಿ ಮೋಹಿಯುದ್ದೀನ್ ಪೀಠೋಪಕರಣಗಳನ್ನು ಕೊಡುಗೆ ನೀಡಿದರು.

ಮೈಸೂರು, ಡಿ.12– ತಾಲೂಕಿನ ದೊಡ್ಡಮಾರಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಾಣಿಜ್ಯೋದ್ಯಮಿ ಹಾಗೂ ಹೆಚ್‌ಎಂಐ ಫ್ರೂಟ್ಸ್ ಮಾಲೀಕ ಜಂಬುಪುರ ಮೋಹಿಯುದ್ದೀನ್ ಪೀಠೋಪಕರಣ ಸೇರಿದಂತೆ ಹಲವು ಅಗತ್ಯ ವಸ್ತುಗಳನ್ನು ಕೊಡುಗೆ ನೀಡಿದರು.

ಪ್ರೊಜೆಕ್ಟರ್ ಸ್ಕ್ರೀನ್, ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ ಹಾಗೂ ಕಚೇರಿಗೆ ಮೂರು ಬೀರುಗಳು, ಡ್ರಾಯರ್ ಸಹಿತ ಟೇಬಲ್, ಐದು ರೌಂಡ್ ಟೇಬಲ್‌ಗಳು, 20 ಸಣ್ಣ ಕುರ್ಚಿಗಳು ಸೇರಿದಂತೆ 70 ಸಾವಿರ ಮೌಲ್ಯದ ಅಗತ್ಯ ವಸ್ತುಗಳನ್ನು, ಗುರುವಾರ ಶಾಲಾ ಮುಖ್ಯಶಿಕ್ಷಕರಿಗೆ ಹಸ್ತಾಂತರಿಸಿದರು.

ಈ ವೇಳೆ ಡಿಎಂಜಿ ಹಳ್ಳಿ ಗ್ರಾಮ ಪಂಚಾಯ್ತಿ ಪಿಡಿಓ ರುಕ್ಮಾಂಗದ, ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಡಿ.ಸಿ.ಚನ್ನಪ್ಪ, ಗ್ರಾಮ ಪಂಚಾಯ್ತಿ ಸದಸ್ಯರಾದ ಡಿ.ಬಿ ಶಂಕರ್, ಭಗವಂತ ಸ್ವಾಮಿ, ಮಾಜಿ ಸದಸ್ಯ ಬಿ.ನಾಗರಾಜು, ಗ್ರಾಮದ ಮುಖಂಡರಾದ ಬಸಪ್ಪ, ನಾಗಣ್ಣ, ರಾಜೇಶ್, ಆಟೋ ಶಿವು, ಎಸ್‌ಡಿಎಂಸಿ ಅಧ್ಯಕ್ಷೆ ಮಮತಾ, ಸರ್ಕಾರಿ ಪ್ರಾಥಮಿಕ ಮುಖ್ಯಶಿಕ್ಷಕಿ ಡಿ.ಸೀತಾ, ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಉಮಾ, ದೈಹಿಕ ಶಿಕ್ಷಕ ಡ್ಯಾನಿಯಲ್ ಹಾಗೂ ಸಹಶಿಕ್ಷಕರು ಉಪಸ್ಥಿತರಿದ್ದರು.

# ಬಂಡೀಪುರ ಅರಣ್ಯ ವ್ಯಾಪ್ತಿಯ ಮಾನವ–ವನ್ಯಜೀವಿ ಸಂಘರ್ಷ ತಡೆಗೆ 'ಕಮಾಂಡ್ ಕಂಟ್ರೋಲ್ ಸೆಂಟರ್' ಸ್ಥಾಪನೆ

- ಲೈವ್ ಕ್ಯಾಮರಾ, ಜಿಎಸ್‌ಎಂ ಕ್ಯಾಮರಾ, ಥರ್ಮಲ್ ಡ್ರೋನ್ ಮೂಲಕ ಹದ್ದಿನ ಕಣ್ಣು
- ಕಾಡಿನಿಂದ ಬರುವ ಪ್ರಾಣಿಗಳ ಚಲನವಲನದ ಮೇಲೆ ಅರಣ್ಯ ಇಲಾಖೆ ನಿಗಾ



ಬಂಡೀಪುರದ ಊಟಿ ರಸ್ತೆಯಲ್ಲಿ ಸೋಲಾರ್ ಬೇಸ್ಡ್ ಸಿಸಿ ಕ್ಯಾಮರದ ಮಾಹಿತಿ ನೀಡಿದ ಸಿಎಫ್ ಎಸ್.ಪ್ರಭಾಕರನ್.



ಮೇಲುಕಾಮನಹಳ್ಳಿ ಗೇಟ್ ಬಳಿಯಿರುವ ಸಫಾರಿ ಕ್ಯಾಂಪಸ್‌ನಲ್ಲಿರುವ 'ಕಮಾಂಡ್ ಕಂಟ್ರೋಲ್ ಸೆಂಟರ್'ನಲ್ಲಿ ಲೈವ್ ಕ್ಯಾಮರಾ ಸೆರೆಹಿಡಿದಿರುವ ದೃಶ್ಯ ಪರಿಶೀಲಿಸುತ್ತಿರುವುದು.

ಮೈಸೂರು,ಡಿ.12(ಎಂಟಿವೈ)– ಹುಲಿ ದಾಳಿಯಿಂದ ಮೂವರು ಮೃತಪಟ್ಟು, ಒಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕಾಡಂಚಿನ ಗ್ರಾಮಗಳಲ್ಲಿ ಮಾನವ–ಜನ್ಯಜೀವಿ ಸಂಘರ್ಷ ತಡೆಗೆ ನೂತನ ತಂತ್ರಜ್ಞಾನ ಬಳಸಿಕೊಂಡು 'ಕಮಾಂಡ್ ಕಂಟ್ರೋಲ್ ಸೆಂಟರ್' ಸ್ಥಾಪಿಸಿ ಲೈವ್ ಕ್ಯಾಮರಾ ಮೂಲಕ ಪ್ರಾಣಿಗಳ ಚಲನವಲದ ಮೇಲೆ ಹದ್ದಿನ ಕಣ್ಣಿಡಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಹಾಗೂ ನುಗು ವ್ಯಾಪ್ತಿಯ ಕಾಡಂಚಿನ ಗ್ರಾಮಗಳಾದ ಸರಗೂರು ತಾಲೂಕಿನ ಬಡಗಲಪುರ, ಮುಳ್ಳೂರು–ಬೆಣ್ಣೆಗೆರೆ, ಕೂಡಗಿ, ಹೆಗ್ಗುಡಿಲು ಗ್ರಾಮದ ಬಳಿ ಮೂವರನ್ನು ಬಲಿ ಪಡೆದು, ಓರ್ವ ವ್ಯಕ್ತಿಯನ್ನು ಗಂಭೀರವಾಗಿ ಗಾಯಗೊಳಿಸಿದ್ದವು. ಈ ಹುಲಿ ದಾಳಿ ಪ್ರಕರಣ ಸಂಚಲನವನ್ನುಂಟು ಮಾಡಿ, ಕಾಡಂಚಿನ ಗ್ರಾಮಗಳ ಜನರಲ್ಲಿ ಭಯದ ವಾತಾವರಣ ಸೃಷ್ಟಿಸಿತ್ತು. ಈ ಹಿನ್ನೆಲೆಯಲ್ಲಿ ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಸ್ಥಗಿತಗೊಳಿಸಿ, ಉಪಟಳ ನೀಡುವ ಹಾಗೂ ಜನರ ಮೇಲೆ ದಾಳಿ ನಡೆಸಿದ ಹುಲಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ಇದೀಗ ಮಾನವ–ವನ್ಯಜೀವಿ ಸಂಘರ್ಷ ಕೊಂಚ ತಗ್ಗಿದೆ. ಆದರೂ, ಕಾಡಿನಿಂದ ಕಾಡಂಚಿನ ಗ್ರಾಮಗಳತ್ತ ಬರುವ ವನ್ಯಜೀವಿಗಳ ಮೇಲೆ ನಿಗಾ ಇಟ್ಟು ಸಂಭವನೀಯ ದಾಳಿ ತಡೆಗೆ ಅರಣ್ಯ ಇಲಾಖೆ ಇದೀಗ ತಂತ್ರಜ್ಞಾನದ ಮೊರೆ ಹೋಗಿದೆ.

**ಇಲಾಖೆಗೆ ವರದಾನವಾದ ತಂತ್ರಜ್ಞಾನ:** ಮಾನವ–ವನ್ಯಜೀವಿ ಸಂಘರ್ಷ ತಡೆಗಟ್ಟಲು ಹಾಗೂ ಉಪಟಳ ನೀಡುವ ವನ್ಯಜೀವಿಗಳ ಜಾಡು ಪತ್ತೆ ಮಾಡಲು ಅರಣ್ಯ ಇಲಾಖೆಗೆ ಸುಧಾರಿತ ತಂತ್ರಜ್ಞಾನದ ಉಪಕರಣಗಳು ವರದಾನವಾಗಿ ಮಾರ್ಪಟ್ಟಿದೆ. ವನ್ಯಜೀವಿಗಳ ಉಪಟಳ ಕಂಡು ಬಂದ ಸರಗೂರು ತಾಲೂಕಿನ ವಿವಿಧ ವಿವಿಧ ಗ್ರಾಮಗಳಲ್ಲಿ ದಾಳಿ ನಡೆಸಿದ ಹುಲಿಗಳ ಪತ್ತೆಗೆ ಥರ್ಮಲ್ ಡ್ರೋನ್, ಜಿಎಸ್‌ಎಂ ಕ್ಯಾಮರ, ಲೈವ್ ಕ್ಯಾಮರ ನೆರವಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಸುಧಾರಿತ ತಂತ್ರಜ್ಞಾನವನ್ನೇ ಸದ್ಬಳಕೆ ಮಾಡಿಕೊಳ್ಳುವಲ್ಲಿ ಅರಣ್ಯ ಇಲಾಖೆ ಮುಂದಾಗಿದೆ.

**20 ಲೈವ್ ಕ್ಯಾಮರಾ, 10 ಜಿಎಸ್‌ಎಂ ಕ್ಯಾಮರ, 5 ಸೋಲಾರ್ ಬೇಸ್ಡ್ ಸಿಸಿ ಕ್ಯಾಮರಾ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಕಾಡಂಚಿನ ಗ್ರಾಮಗಳ ಬಳಿ ಆಯ್ದ ಸ್ಥಳದಲ್ಲಿ 20 ಲೈವ್ ಕ್ಯಾಮರ, 10 ಜಿಎಸ್‌ಎಂ ಕ್ಯಾಮರ ಹಾಗೂ ಸೋಲಾರ್ ಶಕ್ತಿಯಿಂದ ಚಾಲನೆಯಾಗುವ 5 ಸಿಸಿ ಕ್ಯಾಮರಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಗಳು ದಿನದ 24 ಗಂಟೆಯೂ ಚಾಲ್ತಿಯಲ್ಲಿದ್ದು, ಕಾಡಿನಿಂದ ಹೊರಗೆ ಬರುವ ಪ್ರಾಣಿಗಳ ಫೋಟೊ ಹಾಗೂ ವಿಡಿಯೋ ಚಿತ್ರೀಕರಣ ಮಾಡಿ, ನಿಖರವಾದ ಸ್ಥಳದ ಲೊಕೇಷನ್‌ನೊಂದಿಗೆ ಮಾಹಿತಿ ರವಾನಿಸಲಿದೆ. ಇದರಿಂದ ಕಾಡಿನಿಂದ ಹೊರಗೆ ಬಂದ ಸ್ಥಳಕ್ಕೆ ಅರಣ್ಯ ಸಿಬ್ಬಂದಿ ತಲುಪಿ ಪ್ರಾಣಿಗಳನ್ನು ಕಾಡಿಗೆ ಮರಳಿ ಓಡಿಸುವ ಕಾರ್ಯಾಚರಣೆಯಲ್ಲಿ ತೊಡಗಲು ಸಹಕಾರಿಯಾಗುತ್ತದೆ.

**ಕಮಾಂಡ್ ಕಂಟ್ರೋಲ್ ಸೆಂಟರ್:** ಗುಂಡ್ಲುಪೇಟೆ ತಾಲೂಕಿನ ಮೇಲುಕಾಮನಹಳ್ಳಿ ಗೇಟ್ ಬಳಿಯಿರುವ ಸಫಾರಿ (ನೂತನ) ಕ್ಯಾಂಪಸ್‌ನಲ್ಲಿ ಕಟ್ಟಿರುವ ನೂತನ ಕಟ್ಟಡದಲ್ಲಿ 'ಕಮಾಂಡ್ ಕಂಟ್ರೋಲ್ ಸೆಂಟರ್'ನಲ್ಲಿ ಬೃಹತ್ ಪರದೆ ಮೇಲೆ ಲೈವ್ ಕ್ಯಾಮರ, ಜಿಎಸ್‌ಎಂ ಕ್ಯಾಮರ, ಸೋಲಾರ್ ಬೇಸ್ಡ್ ಸಿಸಿ ಕ್ಯಾಮರದಲ್ಲಿ ಸೆರೆಯಾಗುವ ಫೋಟೊ ಹಾಗೂ ಧ್ವನಿ ಸಹಿತ ವಿಡಿಯೋ ಭಿತ್ತರಗೊಳ್ಳಲಿದೆ. ಈ ದೃಶ್ಯಾವಳಿಯಲ್ಲಿ ಪ್ರಾಣಿಗಳು ಅರಣ್ಯದಿಂದ ಗ್ರಾಮಗಳತ್ತ ಬರುತ್ತಿದ್ದಂತೆಯೆ ಸಮೀಪದಲ್ಲಿರುವ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಹೋಗಲು ಕಮಾಂಡ್ ಕಂಟ್ರೋಲ್ ಸೆಂಟರ್‌ನಿಂದ ಮಾಹಿತಿ ರವಾನೆಯಾಗಲಿದೆ. ಇದು ಅರಣ್ಯ ಇಲಾಖೆಗೆ ವರದಾನವಾಗಿ ಪರಿಣಮಿಸಿದ್ದು, ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಸಹಕಾರಿಯಾಗಿದೆ.

**ಕಾಡಾನೆ ಹಿಮ್ಮೆಟ್ಟಿಸಲು ನೆರವು:** ಬಂಡೀಪುರ ಅರಣ್ಯದ ನುಗು ಮತ್ತು ಹೆಡಿಯಾಲ ವಲಯದಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊಲ, ತೋಟಗಳತ್ತ ಬರುತ್ತಿರುವ 3–4 ಪ್ರಕರಣವನ್ನು ಲೈವ್ ಕ್ಯಾಮರದಿಂದ ಪತ್ತೆಯಾಗಿದ್ದು, ಕೂಡಲೆ ಕಾಡಾನೆ ಬಂದ ಸ್ಥಳಕ್ಕೆ ಅರಣ್ಯ ಸಿಬ್ಬಂದಿ ತಂಡ ಥರ್ಮಲ್ ಡ್ರೋನ್‌ನೊಂದಿಗೆ ತೆರಳಿ, ಡ್ರೋನ್ ಹಾರಿಸುತ್ತಲೇ ಆನೆಗಳನ್ನು ಅರಣ್ಯ ಪ್ರದೇಶಕ್ಕೆ ಮರಳಿ ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಿಮೋಟ್ ಕಂಟ್ರೋಲ್ ಮೂಲಕ ಥರ್ಮಲ್ ಡ್ರೋನ್ ಹಾರಿಸಿ, ದೂರದಿಂದಲೇ ಫ್ಲಾಶ್ ಲೈಟ್ ಹಾಗೂ ಶಬ್ದದ ಸಹಾಯದಿಂದ ಕಾಡಾನೆಯನ್ನು ಅರಣ್ಯ ಪ್ರದೇಶಕ್ಕೆ ಓಡಿಸಲಾಗಿದೆ.

**ಪ್ರತ್ಯೇಕ ಅಪ್ಲಿಕೇಷನ್ ಬಳಕೆ:** ಅರಣ್ಯದಂಚಿನ ಪ್ರದೇಶದಲ್ಲಿ ಅಳವಡಿಸಿರುವ ವಿವಿಧ ಕ್ಯಾಮರಗಳಲ್ಲಿ ಸೆರೆಯಾದ ದೃಶ್ಯ ಅಪ್ಲಿಕೇಷನ್ ಮೂಲಕ ಕಮಾಂಡ್ ಕಂಟ್ರೋಲ್ ಸೆಂಟರ್ ತಲುಪಲಿದೆ. ಇದರಿಂದ ತಕ್ಷಣಕ್ಕೆ ಸ್ಪಂದಿಸಲು ಸಹಕಾರಿಯಾಗುತ್ತದೆ. ಅಲ್ಲದೆ, ಕೇವಲ ವನ್ಯಜೀವಿಗಳು ಮಾತ್ರವಲ್ಲದೆ, ಅಕ್ರಮವಾಗಿ ಅರಣ್ಯ ಪ್ರವೇಶಿಸುವವರ ಚಿತ್ರಣವೂ ಈ ಕ್ಯಾಮರಗಳಲ್ಲಿ ದಾಖಲಾಗಿ, ಕಮಾಂಡ್ ಕಂಟ್ರೋಲ್ ಸೆಂಟರ್ ತಲುಪಲಿದೆ.

### ವನ್ಯಜೀವಿ ಸಂಘರ್ಷ ತಡೆಗೆ ಕ್ರಮ

ಬಂಡೀಪುರದಲ್ಲಿ ಕಮಾಂಡ್ ಕಂಟ್ರೋಲ್ ಸೆಂಟರ್ ಸ್ಥಾಪಿಸಲಾಗಿದ್ದು, ತಂತ್ರಜ್ಞಾನ ಬಳಸಿಕೊಂಡು ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳಲಾಗಿದೆ. ಮಾನವ–ವನ್ಯಜೀವಿಗಳ ಉಪಟಳ ಹೆಚ್ಚಾಗಿರುವ ಅರಣ್ಯದಂಚಿನ ಗ್ರಾಮಗಳ ಬಳಿ ಪ್ರಾಣಿಗಳ ಲೈವ್ ಅಪ್‌ಡೇಟೆಡ್‌ಗಾಗಿ ಲೈವ್ ಕ್ಯಾಮರಾ, ಥರ್ಮಲ್ ಡ್ರೋನ್, ಜಿಎಸ್‌ಎಂ ಕ್ಯಾಮರಾ ಸೋಲಾರ್ ಬೇಸ್ಡ್ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಇದರಿಂದ ಪ್ರಾಣಿಗಳು ಕಾಡಿನಿಂದ ಹೊರಗೆ ಬರುತ್ತಿದ್ದಂತೆಯೇ ಸ್ಥಳಕ್ಕೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಲು ಸಹಕಾರಿಯಾಗಲಿದೆ. ಈ ಕಮಾಂಡ್ ಕಂಟ್ರೋಲ್ ಸೆಂಟರ್‌ನಲ್ಲಿ ಕಡಿಮೆ ಸಿಬ್ಬಂದಿಗಳ ಬಳಕೆ ಮಾಡಿ ಪರಿಣಾಮಕಾರಿಯಾದ ಮಾಹಿತಿ ಪಡೆದು ಕೂಂಬಿಂಗ್ ಕಾರ್ಯಾಚರಣೆ ನಡೆಸಲು ಸಹಕಾರಿಯಾಗಿದೆ.

– ಎಸ್. ಪ್ರಭಾಕರನ್,
ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

# ಬ್ಯಾಂಕ್ ಸಾಲ ಸಂಬಂಧ ರೈತರ ಸಮಸ್ಯೆಗೆ ಪರಿಹಾರ

## ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ಯಶಸ್ವಿ ಮಾತುಕತೆ



ಬ್ಯಾಂಕ್ ಅಧಿಕಾರಿಗಳ ಜೊತೆಗೆ ಸಿ.ಚಂದನ್‌ಗೌಡ ಮಾತುಕತೆ ನಡೆಸುತ್ತಿರುವುದು.

ಮೈಸೂರು,ಡಿ.12(ಪಿಎಂ)– ಪಡೆದ ಸಾಲಕ್ಕೆ ಹೆಚ್ಚಿನ ಬಡ್ಡಿ ವಿಧಿಸಿದ್ದಲ್ಲದೆ, ಇದೀಗ ಏಕಾಏಕಿ ನೋಟಿಸ್ ನೀಡಿ ಸಾಲವನ್ನು ಮರುಪಾವತಿಸುವಂತೆ ಒತ್ತಡ ಹೇರಲಾಗುತ್ತಿದೆ ಎಂಬ ರೈತರ ದೂರಿಗೆ ಸ್ಪಂದಿಸಿದ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ನೋಟಿಸ್ ನೀಡಿದ್ದ ಬ್ಯಾಂಕ್‌ಗೆ ತೆರಳಿ ವ್ಯವಸ್ಥಾಪಕರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಿದ್ದಾರೆ.

ನಂಜನಗೂಡು ತಾಲೂಕಿನ ಹದಿನಾರು ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ವತಿಯಿಂದ ರೈತರಿಗೆ ಸಾಲ ವಸೂಲಾತಿಯ ನೋಟಿಸ್ ಜಾರಿ ಮಾಡಲಾಗಿದ್ದರಿಂದ, ಆತಂಕಗೊಳಗಾಗಿದ್ದ ರೈತರು ಸಮಸ್ಯೆಯನ್ನು ಚಂದನ್‌ಗೌಡ ಅವರಲ್ಲಿ ಹೇಳಿಕೊಂಡಿದ್ದರು. ಈ ವಿಷಯ ತಿಳಿದ ಚಂದನ್‌ಗೌಡ, ಕೂಡಲೇ ಸ್ಥಳಕ್ಕೆ ತೆರಳಿ ಸಮಸ್ಯೆ ಆಲಿಸಿದರಲ್ಲದೇ, ರೈತರ ಜೊತೆ ಬ್ಯಾಂಕಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.


ಇದೇ ವೇಳೆ ವಿಷಯ ತಿಳಿದು ಬ್ಯಾಂಕಿನ ರಿಜಿನಲ್ ಮ್ಯಾನೇಜರ್ ತ್ರಿವೇಣಿ ಅವರೇ ಸ್ಥಳಕ್ಕೆ ಆಗಮಿಸಿ, ಸಮಸ್ಯೆ ಆಲಿಸಿದರು. ಈ ಸಂದರ್ಭ ಚಂದನ್‌ಗೌಡರು, ರೈತರಿಂದ ಯಾವುದೇ ರೀತಿಯ ಬಡ್ಡಿ ಪಡೆಯದೆ ಕೇವಲ ಅಸಲು ಮಾತ್ರವೇ ಕಟ್ಟಿಸಿಕೊಳ್ಳುವಂತೆ ಕೋರಿದರು. ಚರ್ಚೆ ವೇಳೆ ಮನವಿಗೆ ಸಮ್ಮತಿಸಿದ ಬ್ಯಾಂಕ್ ಅಧಿಕಾರಿಗಳು ಅಸಲು ಹಣ ಮಾತ್ರ ಪಡೆಯುವುದಾಗಿ ಭರವಸೆ ನೀಡಿದರು.

ಈ ವೇಳೆ ರೈತರೊಂದಿಗೆ ಮಾತನಾಡಿದ ಚಂದನ್‌ಗೌಡ, ಸಕಾಲಕ್ಕೆ ಸಾಲವನ್ನು ಮರುಪಾವತಿಸಬೇಕು. ಆಗ ಮತ್ತೆ ಅವಶ್ಯಕತೆ ಇದ್ದಾಗ ಸಾಲ ಪಡೆಯಬಹುದು. ಬ್ಯಾಂಕಿನ ಅಧಿಕಾರಿಗಳು ಅಸಲು ಹಣವನ್ನು ಮಾತ್ರ ಕಟ್ಟಿಸಿಕೊಳ್ಳಲು ಒಪ್ಪಿಗೆ ಸೂಚಿಸಿದ್ದು, ನೀಡಿರುವ ಕಾಲಾವಕಾಶದಲ್ಲಿ ಸಾಲ ಮರುಪಾವತಿಸುವಂತೆ ಮನವಿ ಮಾಡಿದರು. ನೊಂದ ರೈತರ ಪರವಾಗಿ ಅಧಿಕಾರಿಗಳ ಮನವೊಲಿಸಿ ಸಮಸ್ಯೆ ಪರಿಹರಿಸಿದ್ದಕ್ಕಾಗಿ ರೈತರು, ಚಂದನ್‌ಗೌಡ ಅವರಿಗೆ ಅಭಿನಂದನೆ ಸಲ್ಲಿಸಿದರು.

# 14 ವರ್ಷದೊಳಗಿನ ಬಾಲಕ, ಬಾಲಕಿಯರ ಖೋ ಖೋ ತಂಡಗಳ ಆಯ್ಕೆ ಪ್ರಕ್ರಿಯೆ

ಮೈಸೂರು, ಡಿ. 12– ಕರ್ನಾಟಕ ಅಮೆಚೂರ್ ಖೋ–ಖೋ ಸಂಸ್ಥೆ ವತಿಯಿಂದ ನಡೆಯುವ ರಾಜ್ಯ ಮಟ್ಟದ ಪಂದ್ಯಾವಳಿಗೆ ಜಿಲ್ಲಾ ತಂಡವನ್ನು ಆಯ್ಕೆ ಮಾಡಬೇಕಾಗಿರುವುದರಿಂದ ಅಂತರ ಜಿಲ್ಲಾ 14 ವರ್ಷದೊಳಗಿನ ಬಾಲಕ ಹಾಗೂ ಬಾಲಕಿಯರ ಖೋ ಖೋ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಡಿ. 14 ರಂದು ಬೆಳಗ್ಗೆ 10 ಗಂಟೆಗೆ ಬೋಗಾದಿಯಲ್ಲಿರುವ ಹರಿ ವಿದ್ಯಾಲಯ ಸಂಸ್ಥೆಯ ಆಟದ ಮೈದಾನದಲ್ಲಿ ನಡೆಯಲಿದೆ. ಆಸಕ್ತ ಖೋ ಖೋ ಕ್ರೀಡಾಪಟುಗಳು ಭಾಗವಹಿಸಬಹುದು. ಈ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಮ್ಮ ಮೂಲ ಆಧಾರ್ ಕಾರ್ಡ್, ಮೂಲ ಜನನ ಪ್ರಮಾಣ ಪತ್ರ ಹಾಗೂ ಶಾಲಾ ದೃಡೀಕರಣ ಪತ್ರವನ್ನು ಕಡ್ಡಾಯವಾಗಿ ತರುವುದು. ಹೆಚ್ಚಿನ ಮಾಹಿತಿಗಾಗಿ ಮಹದೇವಪ್ಪ – 8123087678, ಶ್ರೀಕಾಂತ್ – 8095444056 ಸಂಪರ್ಕಿಸಬಹುದು.

## ಡಾ.ಬಿ.ಗುರುಬಸವರಾಜ ಅವರಿಗೆ ಸನ್ಮಾನ...



ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಖ್ಯಾತ ಆಯುರ್ವೇದ ವೈದ್ಯರೂ ಆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನಿವೃತ್ತ ಮುಖ್ಯ ವೈದ್ಯಾಧಿಕಾರಿ ಡಾ.ಬಿ.ಗುರುಬಸವರಾಜ ಅವರನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಪ್ರೊಫೆಸರ್ ಎಮೆರಿಟಸ್ ಪ್ರಶಸ್ತಿ ಪಡೆದಿದ್ದಕ್ಕಾಗಿ ಸನ್ಮಾನಿಸಲಾಯಿತು. ಮೈಸೂರು ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್. ರಂಗಪ್ಪ, ಪ್ರೊ.ಎಸ್.ಎನ್.ಹೆಗ್ಡೆ, ಆದಿಚುಂಚನಗಿರಿ ವೈದ್ಯಕೀಯ ವಿವಿಯ ವಿಶ್ರಾಂತ ಕುಲಪತಿ ಡಾ.ಎಂ.ಎ.ಶೇಖರ್ ಸೇರಿದಂತೆ ಅನೇಕ ಗಣ್ಯರು ಈ ವೇಳೆ ಹಾಜರಿದ್ದರು.

## ಮೈಸೂರು ಇಂಗ್ಲಿಷ್ ಥೀಯೇಟರ್ ಫೆಸ್ಟಿವಲ್ ಉದ್ಘಾಟನೆ

# ಮೈಸೂರು ಇಂಗ್ಲಿಷ್ ನಾಟಕಗಳ ದೀರ್ಘ ಪರಂಪರೆ ಹೊಂದಿದೆ

## ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್



ಮೈಸೂರು ಇಂಗ್ಲಿಷ್ ಥೇಟರ್ ಫೆಸ್ಟಿವಲ್‌ಗೆ ಶುಕ್ರವಾರ (ಎಡದಿಂದ 2ನೇಯವರು) ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಚಾಲನೆ ನೀಡಿದರು. ಕಲ್ಪ ಹೆರಿಟೇಜ್ ಟ್ರಸ್ಟ್ ನಿರ್ದೇಶಕ ಡಾ.ವಿ.ಆರ್.ಅನಿಲ್ ಕುಮಾರ್ ಅತಿಥಿಯಾಗಿ ಪಾಲ್ಗೊಂಡಿದ್ದರು.

ಮೈಸೂರು,ಡಿ.12(ಪಿಎಂ)–'ಮೈಸೂರು' ಇಂಗ್ಲಿಷ್ ನಾಟಕಗಳ ದೀರ್ಘ ಪರಂಪರೆ ಹೊಂದಿದೆ ಎಂದು ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಹೇಳಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಗನ್ನಾಥ ಆರ್ಟ್ ಅಂಡ್ ಕಲ್ಚರ್ ಕೇಂದ್ರ (ಜೆಸಿಎಸಿ)ದ ವೇದಿಕಾ ಸಭಾಂಗಣದಲ್ಲಿ ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಂ (ಎಂಇಟಿಎಫ್) ವತಿಯಿಂದ ಡಿ.14ರವರೆಗೆ ಮೂರು ದಿನಗಳು ಹಮ್ಮಿಕೊಂಡಿರುವ ಮೈಸೂರು ಇಂಗ್ಲಿಷ್ ಥೇಟರ್ ಫೆಸ್ಟಿವಲ್‌ನ ಮೊದಲ ಆವೃತ್ತಿಗೆ ನಾಟಕೋತ್ಸವದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ನಾನೂ ಮೈಸೂರು ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್ ಫೋರಂ ಭಾಗವಾಗಿದ್ದೇನೆ. ಮೈಸೂರು, ಇಂಗ್ಲಿಷ್ ನಾಟಕಗಳ ಕ್ಷೇತ್ರದಲ್ಲಿ ದೀರ್ಘ ಪರಂಪರೆ ಹೊಂದಿದೆ. 1940ರ ದಶಕದಲ್ಲೇ ಈ ಪರಂಪರೆ ಆರಂಭವಾಗಿದೆ. ಆ ಅವಧಿಯ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲದಿದ್ದರೂ 1950, 60, 70ರ ದಶಕಗಳಲ್ಲಿ ನಾನು ಸ್ವತಃ ಕಾರ್ಯನಿರ್ವಹಿಸಿದ್ದು, ಆ ಕಾಲಘಟ್ಟದ ನಾಟಕ ಚಟುವಟಿಕೆಗಳ ಸಾಕ್ಷಿಯಾಗಿದ್ದೇನೆ ಎಂದು ತಿಳಿಸಿದರು.

ನಾಟಕಕಾರ ಆಂಟನ್ ಚೆಕೊವ್ ಅವರ 'ದಿ ಪ್ರಪೋಸಲ್' ಎಂಬ ಇಂಗ್ಲಿಷ್ ನಾಟಕದಲ್ಲಿ ಅಭಿನಯಿಸುವ ಮೂಲಕ ನಾನು ರಂಗಭೂಮಿಗೆ ಪ್ರವೇಶ ಪಡೆದೆ. ಸದರಿ ನಾಟಕದಲ್ಲಿ ಹುಡುಗಿಯ ಪಾತ್ರ ಮಾಡಬೇಕಿದ್ದ ಹುಡುಗನೊಬ್ಬ ಗೈರು ಇದ್ದಾಗ, ಅನಿರೀಕ್ಷಿತವಾಗಿ ನಾನು ಆ ಪಾತ್ರ ಮಾಡುವ ಮೂಲಕ ರಂಗಭೂಮಿಗೆ ಬರುವಂತಾಯಿತು. ಇಲ್ಲವಾಗಿದ್ದರೆ ನಾನು ರೇಡಿಯೋ ಕಲಾವಿದೆಯಾಗಿ ಮುಂದುವರೆಯುತ್ತಿದ್ದೆ ಎಂದು ನೆನಪಿಸಿಕೊಂಡರು.

ಅಂದು ಸಂಪತ್ ಎಂಬ ಖ್ಯಾತ ಸಿನಿಮಾ ನಟರಿದ್ದರು. ಅವರು ಶೇಕ್ಸ್‌ಪಿಯರ್ ಇಂಟರ್‌ನ್ಯಾಷನಲ್ ಸೊಸೈಟಿ ಎಂಬ ಬ್ರಿಟಿಷ್ ಗ್ರೂಪ್‌ನೊಂದಿಗೆ ಸೇರಿ ಇಡೀ ಭಾರತದಲ್ಲಿ ಇಂಗ್ಲಿಷ್ ನಾಟಕಗಳ ಪ್ರದರ್ಶನ ಮಾಡುತ್ತಿದ್ದರು. ಸಂಪತ್ ಅವರ ನಿರ್ದೇಶನದ ನಾಟಕಗಳಲ್ಲಿ ಸಂಭಾಷಣೆಯ ಉಚ್ಚಾರಣೆ, ವೇಷಭೂಷಣಗಳ ಮೆರುಗು ವಿಶೇಷವಾಗಿದ್ದವು. ಅವರ ಮನೆಯಲ್ಲಿ ಎಲ್ಲಾ ನಾಟಕ ವೇಷಭೂಷಣಗಳನ್ನು ಅಚ್ಚುಕಟ್ಟಾಗಿ ಹಾಗೂ ಅತ್ಯಂತ ಮುತುವರ್ಜಿಯಿಂದ ಸಂಗ್ರಹಿಸಲಾಗುತ್ತಿತ್ತು. ಅವರೊಂದಿಗೆ ಪ್ರೊ.ಗುರುರಾಜ ರಾವ್ ಸಹ ಇದ್ದರು ಎಂದು ಹೇಳಿದರು.

ಸಂಪತ್ ಅವರು ಯುರೋಪಿಯನ್ ನಾಟಕಗಳ ಯಶಸ್ವಿ ಪ್ರದರ್ಶನದಿಂದ ಖ್ಯಾತಿ ಹೊಂದಿದ್ದಾರೆ. ಅವರ ನಿರ್ದೇಶನದ ಹಲವು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಇಂಗ್ಲಿಷ್ ಭಾಷೆಯು ಸಣ್ಣ–ಪಟ್ಟಣಗಳು ಮತ್ತು ಊರುಗಳಿಗೆ ಸರಿಯಾಗಿ ತಲುಪದಿದ್ದರೂ ಕಂಪ್ಯೂಟರ್‌ಗಳು ಮತ್ತು ಕೃತಕ ಬುದ್ಧಿಮತ್ತೆ (ಎಐ) ಕಾರಣಕ್ಕೆ ಇಂಗ್ಲಿಷ್ ಮತ್ತಷ್ಟು ವ್ಯಾಪಕವಾಗಿ ಬಳಸಲ್ಪಡುತ್ತಿದೆ ಎಂಬುದು ಗಮನಾರ್ಹ. ಭಾರತೀಯ ಇಂಗ್ಲಿಷ್ ತನ್ನದೇ ಆದ ಉಚ್ಚಾರಣಾ ವೈಶಿಷ್ಟ್ಯಗಳೊಂದಿಗೆ ಪ್ರೇಕ್ಷಕರಿಗೆ ಸುಲಭವಾಗಿ ಅರ್ಥವಾಗುತ್ತಿದೆ ಎಂದರು.

ಮುಂಬೈ, ದೆಹಲಿ, ಬೆಂಗಳೂರು, ಕೋಲ್ಕತ್ತಾ ಮುಂತಾದ ನಗರ ಕೇಂದ್ರಗಳಲ್ಲಿ ಮಾತ್ರ ಇಂಗ್ಲಿಷ್ ರಂಗಭೂಮಿ ಬೆಳೆಯುತ್ತಿದೆ. ಇಂಗ್ಲಿಷ್ ನಮ್ಮ ಸಂವಹನ ಭಾಷೆಯಲ್ಲ ಎಂಬುದು ಇದಕ್ಕೆ ಕಾರಣ. ಸಮಕಾಲೀನ ಭಾರತೀಯ ವಿಷಯಗಳನ್ನು ಜಾಗತಿಕ ಕಥನಾಶೈಲಿಯ ಸಂಯೋಜನೆ ಮೂಲಕ ಇಂಗ್ಲಿಷ್ ರಂಗಭೂಮಿ, ಇಂದಿನ ಯುವ ಪ್ರೇಕ್ಷಕರಿಗೆ ವಿಶೇಷವಾಗಿ ಆಕರ್ಷಕವಾಗಿದೆ. ಹೆಚ್ಚಿನ ವೆಚ್ಚ, ನಿರ್ದಿಷ್ಟ ಮಟ್ಟದ ವೇದಿಕೆಗಳ ಮಿತಿ ನಡುವೆಯೂ ಇಂಗ್ಲಿಷ್ ರಂಗಭೂಮಿ ಹಬ್ಬಗಳು, ಸ್ವತಂತ್ರ ತಂಡಗಳು, ಪ್ರಯೋಗಾತ್ಮಕ ವೇದಿಕೆಗಳು, ಡಿಜಿಟಲ್ ವೇದಿಕೆ, ಕಾರ್ಪೊರೇಟ್ ಪ್ರಾಯೋಜಕತ್ವ, ಅಂತರರಾಷ್ಟ್ರೀಯ ಕಲಾವಿದರ ಸಹಕಾರದ ಮೂಲಕ ನಿರಂತರವಾಗಿ ಬೆಳೆಯುತ್ತಿದೆ. ಇದು ಭಾರತದ ಸಾಂಸ್ಕೃತಿಕ ಲೋಕದ ವಿಶಿಷ್ಟತೆ ಎಂದು ಹೇಳಿದರು.

ಕಲ್ಪ ಹೆರಿಟೇಜ್ ಟ್ರಸ್ಟ್ ನಿರ್ದೇಶಕ ಡಾ.ವಿ.ಆರ್.ಅನಿಲ್ ಕುಮಾರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಬಳಿಕ ಕಲಾಸುರುಚಿ ಸಂಸ್ಥೆಯಿಂದ ಸುಂದರ್ ಸರುಕೈ ರಚನೆಯ ಹಾಗೂ ಬದರಿ ನಾರಾಯಣ ನಿರ್ದೇಶನದ 'ಟು ಫಾದರ್ಸ್' ನಾಟಕ ಪ್ರದರ್ಶನ ಕಂಡಿತು. ಡಿ.14ರವರೆಗೆ ಪ್ರತಿ ದಿನ ಸಂಜೆ 6.30ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದೆ. ವೇದಿಕಾ ಸಭಾಂಗಣದಲ್ಲಿ ನಡೆಯುವ ನಾಟಕಗಳಿಗೆ 200 ಟಿಕೆಟ್ ದರ ಇದ್ದು, ಇಡೀ ನಾಟಕಕೋತ್ಸವಕ್ಕೆ 500 ರೂ.ಗಳ ಪಾಸ್ ವ್ಯವಸ್ಥೆ ಸಹ ಇದೆ. ಇಲ್ಲಿನ ನಕ್ಷತ್ರ ಆಂಪಿ ಥೀಯೇಟರ್‌ನಲ್ಲಿ ನಡೆಯುವ ಇಂಗ್ಲಿಷ್ ರಂಗಭೂಮಿ ಪಠ್ಯದ ವಾಚನಾಕ್ಕೆ ಪ್ರವೇಶ ಉಚಿತವಿದೆ. ಫೋರಂನ ಶಶಿಧರ ಡೋಂಗ್ರೆ, ಸೀಮಂತಿನಿ ಬಿ.ಶರ್ಮ, ನೀಮಾ ಮಂಜ್ರೇಕರ್, ಮೀನು ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಶನಿವಾರ 13 ಡಿಸೆಂಬರ್ 2025

# ಕಟ್ಟೆಹಾಡಿ 10 ಕುಟುಂಬಕ್ಕೆ ಚೆಕ್ ವಿತರಣೆ



ಕುಶಾಲನಗರ, ಡಿ.12–ಕಟ್ಟೆಹಾಡಿಯ ಅರಣ್ಯ ಪ್ರದೇಶದಲ್ಲಿ ಪ್ಲಾಸ್ಟಿಕ್ ಹೊದಿಕೆಯೊಂದಿಗೆ ಗುಡಿಸಲಿನಲ್ಲಿ ಶೋಚನೀಯ ಜೀವನ ನಡೆಸುತ್ತಿರುವ ಸುಮಾರು 10 ಆದಿವಾಸಿ ಕುಟುಂಬಗಳಿಗೆ ದೆಹಲಿಯ ಭವಾನಿಪುರ್ ಬಾಬಾ ಬದ್ರುದ್ದೀನ್ ಶಾ ವೆಲ್ಫೇರ್ ಸೊಸೈಟಿ (ಎನ್.ಜಿ.ಒ)ವತಿಯಿಂದ ಉಚಿತವಾಗಿ ನೂತನ ಮನೆ ನಿರ್ಮಿಸಿಕೊಡಲು ತಲಾ ರೂ.5 ಲಕ್ಷ ಚೆಕ್ ಅನ್ನು ಸೊಸೈಟಿಯ ರಾಷ್ಟ್ರೀಯ ಅಧ್ಯಕ್ಷ ಶಶಿಕುಮಾರ್ ವಿತರಿಸಿದರು. ಬಡತನ ಮುಕ್ತ ಭಾರತ ಮಾಡಬೇಕು ಎಂಬ ಉದ್ದೇಶವನ್ನು ನಮ್ಮ ಸಂಸ್ಥೆ ಹೊಂದಿದೆ. ಪ್ರತಿ ಮನೆಗೆ ಆರೋಗ್ಯ ಹಾಗೂ ಆರ್ಥಿಕ ನೆರವಿನಿಂದ ಬಡತನ ನಿರ್ಮೂಲನೆ ಗುರಿ ಹೊಂದಲಾಗಿದೆ ಪ್ರತಿಯೊಂದು ಕುಟುಂಬಕ್ಕೆ ಆತ್ಮಶಕ್ತಿ, ಮನೆಯಿಲ್ಲದ ಬಡ ಕುಟುಂಬಕ್ಕೆ ಮನೆ ನಿರ್ಮಾಣ ನಮ್ಮ ಆದ್ಯ ಗುರಿ ಎಂದರು.

ನಮ್ಮ ಎನ್.ಜಿ.ಒ ವತಿಯಿಂದ ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗಿದ್ದು, ಸದಸ್ಯರಾದವರಿಗೆ ಜೀವವಿಮೆ ಸೌಲಭ್ಯ, ಹೆಣ್ಣು ಮಕ್ಕಳ ಮದುವೆಗೆ ಸಹಾಯಧನ, ಅಂಗವಿಕಲರಿಗೆ, ವೃದ್ಧರಿಗೆ ಸಹಾಯಧನ ಹಾಗೂ ಶವಸಂಸ್ಕಾರಕ್ಕೆ ನೆರವು ಸೇರಿದಂತೆ ಸ್ವಯಂ ಉದ್ಯೋಗ ಕೈಗೊಂಡು ಸಬಲೀಕರಣ ಹೊಂದಲು ಸಾಲ ಸೌಲಭ್ಯಗಳನ್ನು ನೀಡಲಾಗುತ್ತದೆ ಎಂದು ಹೇಳಿದರು.

ಎನ್.ಜಿ.ಒ.ಸಂಸ್ಥೆಯ ಸಂಚಾಲಕಿ ಫ್ರಾನ್ಸಿನ ಮೇರಿ ಮಾತನಾಡಿ, ನಮ್ಮ ನಡೆ ಬಡತನ ನಿರ್ಮೂಲನೆ ಕಡೆಗೆ ಎಂಬುದು ನಮ್ಮ ಸಂಸ್ಥೆಯ ಧ್ಯೇಯವಾಗಿದೆ. ಎಂಟು ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಸಂಸ್ಥೆ ಸರ್ವೇ ಮಾಡಿ ಸರ್ಕಾರದ ಸೌಲಭ್ಯಗಳಿಂದ ವಂಚಿತ ಕುಟುಂಬಗಳನ್ನು ಗುರುತಿಸಿ ಅಗತ್ಯ ನೆರವು ನೀಡಲಾಗುತ್ತದೆ ಎಂದರು.

ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ಸದಸ್ಯ ಆರ್.ಕೆ.ಚಂದ್ರು ಮಾತನಾಡಿ, ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಇಂತಹ ಬಡ ಕುಟುಂಬಗಳನ್ನು ಗುರುತಿಸಿ ಭವಾನಿಪುರ್ ಬಾಬಾ ಬದ್ರುದ್ದೀನ್ ಶಾ ವೆಲ್ಫೇರ್ ಸೊಸೈಟಿ ವತಿಯಿಂದ ಉಚಿತವಾಗಿ ಮನೆ ನಿರ್ಮಿಸಿಕೊಡಲು ಮುಂದಾಗಿರುವ ಕ್ರಮ ಸ್ವಾಗತಾರ್ಹವಾಗಿದೆ. ಎನ್‌ಜಿಓಸೇವೆ ಇದೇ ರೀತಿ ಮುಂದುವರೆಯಲಿ ಇದರಿಂದ ಅನೇಕ ಆದಿವಾಸಿ ಕುಟುಂಬಗಳಿಗೆ ನೆರವು ಸಿಗಲಿ ಎಂದು ಹೇಳಿ ಸಂಸ್ಥೆಯ ಅಧ್ಯಕ್ಷ ಶಶಿಕುಮಾರ್ ಸೇವೆಯನ್ನು ಶ್ಲಾಘಿಸಿದರು.

ಸೊಸೈಟಿ ಪದಾಧಿಕಾರಿಗಳಾದ ಬಿಂದು, ಸತೀಶ್ ಹಾಗೂ ಫಲಾನುಭವಿಗಳಾದ ಲಕ್ಷ್ಮಿ, ಗೌರಿ, ಸುಮಿತ್ರ, ರಾಧ, ಗೀತಾ, ಸಣ್ಣಮ್ಮ, ಮುತ್ತಮ್ಮ, ಶಿವಣ್ಣ ಹಾಗೂ ಹಾಡಿ ಮುಖಂಡರು ಪಾಲ್ಗೊಂಡಿದ್ದರು.

# ಪ್ರಧಾನಿ ವಿರುದ್ಧ ವೀಡಿಯೋ ಬಗ್ಗೆ ವರ್ತಕ ಸಮುದಾಯ ವಿಷಾದ

ಮಡಿಕೇರಿ, ಡಿ.12–ಪ್ರಧಾನಿ ನರೇಂದ್ರ ಮೋದಿ ಕುರಿತು ಅವಹೇಳನಕಾರಿ ವಿಡಿಯೋ ವೈರಲ್ ಮಾಡಿರುವ ಪ್ರಕರಣ ವ್ಯಾಪಾರಿ ಕ್ಷೇತ್ರದ ಗೌರವಕ್ಕೆ ಧಕ್ಕೆ ಉಂಟು ಮಾಡಿದೆ. ಇಂಥ ಪ್ರಕರಣಗಳು ಮುಂದೆ ನಡೆಯದಂತೆ ವರ್ತಕ ಸಮುದಾಯ ಎಚ್ಚರದಿಂದಿರಬೇಕು ಮತ್ತು ಸಿಬ್ಬಂದಿಗಳ ಮೇಲೆ ನಿಗಾ ವಹಿಸಬೇಕು ಎಂದು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ನಿರ್ದೇಶಕ ಎಂ.ಧನಂಜಯ ಮನವಿ ಮಾಡಿದ್ದಾರೆ.

ಪ್ರಧಾನ ಮಂತ್ರಿಗಳನ್ನು ಅವಹೇಳನ ಮಾಡಿರುವ ಪ್ರಕರಣ ರಾಜ್ಯವ್ಯಾಪಿ ಟೀಕೆಗೆ ಗುರಿಯಾಗಿದ್ದು, ವರ್ತಕ ಸಮುದಾಯ ತಲೆ ತಗ್ಗಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಈ ರೀತಿಯ ನಿಯಮಬಾಹಿರ ವರ್ತನೆಗಳಿಗೆ ಅವಕಾಶ ನೀಡಬಾರದು. ಮುಂದಿನ ದಿನಗಳಲ್ಲಿ ಇದು ಪುನರಾವರ್ತನೆಯಾಗದಂತೆ ಸಂಬಂಧಿಸಿದವರು ಕ್ರಮ ಕೈಗೊಳ್ಳಬೇಕು. ಎಂದು ಆಗ್ರಹಿಸಿದ್ದಾರೆ.

# ಗೋಜೊಕಾಯ್ ಕರಾಟೆ ತರಬೇತಿಗೆ ಸಮಗ್ರ ಚಾಂಪಿಯನ್ ಪಟ್ಟ

ವಿರಾಜಪೇಟೆ, ಡಿ.12–ಸಮರ ಕಲೆಯಾದ ಕರಾಟೆ ಪಂದ್ಯಾಟದಲ್ಲಿ ಕೊಡಗು ಜಿಲ್ಲೆಯ ಗೋಜೊಕಾಯ್ ಕರಾಟೆ ತರಬೇತಿ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಚಾಂಪಿಯನ್ ಪಟ್ಟ ಅಲಂಕರಿಸಿತು.

ವಿ.ಎಸ್.ಕೆ ಓಪನ್ ಕರಾಟೆ ಚಾಂಪಿಯನ್ ಶಿಪ್ ಪಂದ್ಯಾಟಗಳು ಮೈಸೂರಿನ ಯುವರಾಜ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ ಮುಕ್ತ ಕರಾಟೆ ಪಂದ್ಯಾಟಗಳಲ್ಲಿ ಕೊಡಗು ಜಿಲ್ಲೆಯ ಗೋಜೊಕಾಯ್ ಕರಾಟೆ ತರಬೇತಿ ಶಾಲೆಯ ಒಟ್ಟು 68 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕತ್ತಾ ಮತ್ತು ಕುಮಿತೆ ವಿಭಾಗದಲ್ಲಿ 32 ಪ್ರಥಮ, 28 ದ್ವಿತೀಯ ಹಾಗೂ 24 ತೃತೀಯ ಸ್ಥಾನಗಳನ್ನು ಪಡೆದುಕೊಂಡು ಉತ್ತಮ ಪ್ರದರ್ಶನ ನೀಡಿರುವುದನ್ನು ಮನಗಂಡ ಆಯೋಜಕರು ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಭಾಗವಹಿಸಿದ ಎಲ್ಲಾ 68 ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಲಾಯಿತು. ವಿದ್ಯಾರ್ಥಿಗಳಿಗೆ ಕರಾಟೆ ತರಬೇತಿ ಶಾಲೆಯ ಶಿಕ್ಷಕರಾದ ಸೆನ್ ಸಾಯಿ, ಎಂ.ಬಿ.ಚಂದ್ರನ್ ತರಬೇತಿ ನೀಡಿದರು.




ಕರಾಟೆ ತರಬೇತಿ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಚಾಂಪಿಯನ್ ಪಟ್ಟ ಅಲಂಕರಿಸಿದ ವಿದ್ಯಾರ್ಥಿಗಳು

# ಸಿಎನ್‌ಸಿಯಿಂದ ಹಿರಿಯರಿಗೆ ಶ್ರದ್ಧಾಂಜಲಿ ಸಮರ್ಪಣೆ



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಸ್ಮಾರಕ ಸಮಾಧಿಯಲ್ಲಿ ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಮಡಿಕೇರಿ,ಡಿ.12– ದೇವಟ್ ಪರಂಬುವಿನಲ್ಲಿ ಕೊಡವರ ಹತ್ಯಾಕಾಂಡ ನಡೆದು 240 ವರ್ಷಗಳಾದ ಹಿನ್ನೆಲೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಸ್ಮಾರಕ ಸಮಾಧಿಯಲ್ಲಿ ಹಿರಿಯರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಹಿರಿಯರಿಗೆ ಪುಷ್ಪ ನಮನ ಮೂಲಕ ಗೌರವ ಅರ್ಪಿಸಿ ಮಾತನಾಡಿದ ಎನ್.ಯು. ನಾಚಪ್ಪ, ದೇವಟ್ ಪರಂಬ್ ದುರಂತ ಮತ್ತು ಕೊಡವ ಜನಾಂಗದ ರಾಜಕೀಯ ಹತ್ಯೆಗಳು ಕೊಡವ ಇತಿಹಾಸದಲ್ಲಿ ಆಘಾತಕಾರಿ ಅಧ್ಯಾಯಗಳಾಗಿದ್ದು, ಸೂರ್ಯ ಮತ್ತು ಚಂದ್ರರು ಇರುವವರೆಗೂ ವಾಸಿಯಾಗದ ಗಾಯಗಳಾಗಿವೆ ಎಂದು ಹೇಳಿದರು.

ಇದೇ ಸಂದರ್ಭ ಕೊಡವ ಜನಾಂಗಕ್ಕೆ ಅವರ ಸಮಗ್ರ ಸಬಲೀಕರಣಕ್ಕಾಗಿ ಮತ್ತು ಈ ದುರಂತಗಳಲ್ಲಿ ವಿನಾಶಕಾರಿ ಮಾನವನ ನಷ್ಟವನ್ನು ಸರಿದೂಗಿಸಲು ಎಸ್‌ಟಿ ಸ್ಥಾನಮಾನವನ್ನು ನೀಡಬೇಕು ಎಂದು ಒತ್ತಾಯಿಸಿದರು.

ಅರೆಯಡ ಸವಿತಾ ಗಿರೀಶ್, ಚೋಳಪಂಡ ಜ್ಯೋತಿ ನಾಣಯ್ಯ, ಅಪ್ಪಾರಂಡ ನಂದಿನಿ ನಂಜಪ್ಪ, ಪುಲ್ಲೇರ ಸ್ವಾತಿ ಕಾಳಪ್ಪ, ಕಂಞಂಡ ದೀಪನಾ, ಕರವಂಡ ಸರಸು, ಕಲಿಯಂಡ ಪ್ರಕಾಶ್, ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ, ಪಟ್ಟಮಾಡ ಕುಶಾ, ಅರೆಯಡ ಗಿರೀಶ್, ಮಂದಪಂಡ ಮನೋಜ್ ಮಂದಣ್ಣ, ಅಜ್ಜಿಕುಟ್ಟೀರ ಲೋಕೇಶ್, ನೆಲ್ಲಮಕ್ಕಡ ವಿವೇಕ್, ಕಿರಿಯಮಾಡ ಶೆರಿನ್, ಪುಲ್ಲೇರ ಕಾಳಪ್ಪ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ಡಿ.15, ತಿತಿಮತಿಯಲ್ಲಿ ಮಾನವ ಸರಪಳಿ

ಮಡಿಕೇರಿ, ಡಿ.12–ರಾಷ್ಟ್ರೀಯ ಜನಗಣತಿ ಸಂದರ್ಭದಲ್ಲಿ ಪ್ರತ್ಯೇಕವಾಗಿ 'ಕೊಡವ' ಎಂದು ದಾಖಲೀಕರಣಗೊಳ್ಳುವಂತೆ ಜನಜಾಗೃತಿ ಮೂಡಿಸುವ ಸಲುವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ 22ನೇ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ಡಿ.15ರಂದು ತಿತಿಮತಿಯಲ್ಲಿ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಬೆಳಿಗ್ಗೆ 10.30 ಗಂಟೆಗೆ ತಿತಿಮತಿಯಲ್ಲಿ ಶಾಂತಿಯುತವಾಗಿ ಮಾನವ ಸರಪಳಿ ನಿರ್ಮಿಸಲಾಗುವುದು.

## ವಿಜೃಂಭಣೆಯಿಂದ ಜರುಗಿದ ಪುತ್ತರಿ ಕೋಲಾಟ್ ಪ್ರದರ್ಶನ



ಪೂಮಾಲೆ ಮಂದ್‌ನಲ್ಲಿ ವಾರ್ಷಿಕ ಪುತ್ತರಿ ಕೋಲಾಟ್ ಪ್ರದರ್ಶನ ವಿಜೃಂಭಣೆಯಿಂದ ಜರುಗಿತು.

ವಿರಾಜಪೇಟೆ, ಡಿ.12– ಆರಾಯಿರ ನಾಡ್ ಪೂಮಾಲೆ ಮಂದ್ ವತಿಯಿಂದ ಪೂಮಾಲೆ ಮಂದ್‌ನಲ್ಲಿ ವಾರ್ಷಿಕ ಪುತ್ತರಿ ಕೋಲಾಟ್ ಪ್ರದರ್ಶನ ವಿಜೃಂಭಣೆಯಿಂದ ಜರುಗಿತು.

ಭೈರವನಾಡ್ ಎಡೆನಾಡ್, ಬೇಟೋಳಿನಾಡ್, ಪೊರೆವನಾಡ್ ಮತ್ತು, ಕುಕ್ಲೂರು ಗ್ರಾಮ ನಾಡುಗಳು ಮತ್ತು ಐಮಂಗಲ, ಚೆಂಬೆಬೆಳ್ಳೂರು, ಮಗ್ಗುಲ, ತಲಕಟ್ಟಕೇರಿ, ದೇವಣಗೇರಿ, ಹಾಲುಗುಂದ, ಭೈರನಾಡ್, ಬೇಟೋಳಿ, ಆರ್ಜಿ, ನಾಂಗಾಲ, ಕುಕ್ಲೂರು, ಕಣ್ಣಂಗಾಲ, ವೈಪಡ(ಮಗ್ಗುಲ) ಬಿಟ್ಟಂಗಾಲ. ಹಚ್ಚಿನಾಡ್ (ಪಚ್ಚಾಟ್) ಪೆಗ್ಗಳ, ಮತ್ತು ಬಾಳುಗೋಡು ಗ್ರಾಮಗಳ ಬಾಂಧವರು ಕೊಡವ ಸಾಂಪ್ರದಾಯಕ ಧಿರಿಸಿನಲ್ಲಿ ಪೂಮಾಲೆ ಮಂದ್‌ಗೆ ಪ್ರವೇಶ ಮಾಡಿದರು. ನಂತರ ಊರು, ತಕ್ಕ, ನಾಡ್ ತಕ್ಕರಿಗೆ ಮಂದ್ ಸಮಿತಿಯ ಪಧಾದಿಕಾರಿಗಳು ಹೂಮಾಲೆ ಹಾಕಿ ಬರಮಾಡಿಕೊಂಡರು. ಎಲ್ಲಾ ಊರುಗಳ ಬಾಂಧವರಿಂದ ಮೂರು ಸುತ್ತುಗಳ ಕೋಲಾಟ್ ಪ್ರದರ್ಶನ ನಡೆಯಿತು. ಏಳು ಜೋಡಿಗಳಿಂದ ಪರೆಯ ಕಳಿ, ತ್ರಿವೇಣಿ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳಿಂದ ಉಮ್ಮತಾಟ್, ಬೊಳಕಾಟ್ ಪ್ರದರ್ಶನ ನಡೆಯಿತು.

ಆರಾಯಿರ ನಾಡ್ ಪೂಮಾಲೆ ಮಂದ್ ಸಮಿತಿಯ ಮರಣ ನಿಧಿ ಫಂಡ್ ಅಧ್ಯಕ್ಷ ಚೆಂದಂಡ ಪೊನ್ನಪ್ಪ ವರ್ಷದಲ್ಲಿ ಒಂದು ಬಾರಿ ನಡೆಯುವ ಕೊಡವ ಸಂಪ್ರದಾಯಕ ವಾರ್ಷಿಕ ಕೋಲ್ ಧೀಮಂತ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಕೊಡವರ ಆಚಾರ–ವಿಚಾರಗಳು ಜೀವಂತವಾಗಿರಿಸುವ ನಿಟ್ಟಿನಲ್ಲಿ ಕೊಡವ ಸಮುದಾಯದವರು ಮತ್ತು ಕೊಡವ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಲೆಗಳನ್ನು ಉಳಿಸುವ ಮತ್ತು ಪ್ರೋತ್ಸಾಹಿಸಿದಲ್ಲಿ ಮಾತ್ರ ಮುಂದಿನ ಪೀಳಿಗೆಯು ಆಚರಣೆಗೆ ಮುಂದಾಗುತ್ತದೆ ಎಂದು ಹೇಳಿದರು. ಕೋಲಾಟ್, ಪರಿಯ ಕಳಿಯಲ್ಲಿ ಭಾಗವಹಿಸಿದ ವಿಜೇತರಿಗೆ ಕಾಣಿಕೆ ನೀಡಿ ಗೌರವಿಸಲಾಯಿತು. ಆರಾಯಿರ ನಾಡ್ ಪೂಮಾಲೆ ಮಂದ್ ಸಮಿತಿಯ ಅಧ್ಯಕ್ಷ ಅಜ್ಜನಿಕಂಡ ಸುಧೀರ್, ಉಪಾಧ್ಯಕ್ಷ ವಾಟೇರಿರ ಶಂಕರಿ ಪೂವಯ್ಯ, ಕಾರ್ಯದರ್ಶಿ ಪೊಟ್ಟಂಡ ಗಣೇಶ್ ಮತ್ತು ಕ್ರೀಡಾ ಸಮಿತಿ ಅಧ್ಯಕ್ಷ ಪುಗ್ಗೇರ ನಂದಾ ಹಾಗೂ ಊರು ತಕ್ಕ ನಾಡ್ ತಕ್ಕ ಹಾಜರಿದ್ದರು.

## ಡಿ.15, ಮಲ್ಲಂಗೋಟು ದೇವರ ವಾರ್ಷಿಕ ಉತ್ಸವ

**ನಾಪೋಕ್ಲು :** ಚೋನಕೆರೆಯ ಮಲಂಗೋಟು ಶ್ರೀ ಅಯ್ಯಪ್ಪ ಶಾಸ್ತ್ರವು ದೇವರ ವಾರ್ಷಿಕ ಉತ್ಸವ ಡಿ.15ರಂದು ಜರುಗಲಿದೆ. ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಚೇಯಕ್ ಪೂವಂಡ ಸತೀಶ್ ದೇವಯ್ಯ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. 11 ಗಂಟೆಗೆ ವಾರ್ಷಿಕ ಮಹಾಪೂಜೆ ಜರುಗಲಿದೆ ಎಂದು ಕಾರ್ಯದರ್ಶಿ ಕಮ್ಮಿ ತಿಮ್ಮಯ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ವಿಶ್ವಮಾನವ ದಿನಾಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಿ

ಚಾಮರಾಜನಗರ, ಡಿ. 12–ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನವನ್ನು ವಿಶ್ವ ಮಾನವ ದಿನವನ್ನಾಗಿ ಜಿಲ್ಲಾಡಳಿತ ಹಾಗೂ ಎಲ್ಲಾ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಎಲ್ಲ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಸೂಚಿಸಿದ್ದಾರೆ.



ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳ ಸಭೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ವಿಶ್ವ ಮಾನವ ಕುವೆಂಪು ಜನ್ಮ ದಿನಾಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಡಿ. 29ರ ಬೆಳಿಗ್ಗೆ 11 ಗಂಟೆಗೆ ವಿಶ್ವಮಾನವ ಕುವೆಂಪು ಜನ್ಮ ದಿನಾಚರಣೆಯನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮಕ್ಕೆ ಅವಶ್ಯವಿರುವ ಸಿದ್ದತೆಗಳನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂದರು.

ಕುವೆಂಪು ಅವರ ವಿಶ್ವಮಾನವ ಸಂದೇಶ, ಅವರ ವಿಚಾರ, ಆದರ್ಶ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಬೇಕು. ವಿಜೇತರಾದ ಮಕ್ಕಳಿಗೆ ಕಾರ್ಯಕ್ರಮದಂದು ಬಹುಮಾನ ವಿತರಣೆ ಮಾಡಬೇಕು. ವಿಶ್ವ ಮಾನವ ಕುವೆಂಪು ಜನ್ಮ ದಿನಾಚರಣೆ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಯಾವುದೇ ಲೋಪವಿಲ್ಲದೆ ಅಚ್ಚುಕಟ್ಟಾಗಿ ಕಾರ್ಯಕ್ರಮ ಏರ್ಪಾಡು ಮಾಡಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


ವಿವಿಧ ಸಂಘ ಸಂಸ್ಥೆಗಳ ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಸಿ.ಎಂ. ನರಸಿಂಹಮೂರ್ತಿ, ರಾಜಪ್ಪ, ಎಸ್. ಮಹೇಶ್‌ಗೌಡ, ಜಿ.ಬಂಗಾರು, ಪಣ್ಯದ ಹುಂಡಿ ರಾಜು, ಲಿಂಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ವಿಶ್ವನಾಥ್ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ಶುಭಾಶಯ



ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಅವರ ಮೈಸೂರು ನಿವಾಸಕ್ಕೆ ತೊಂಡವಾಡಿಯ ಗ್ರಾ.ಪಂ. ಮಾಜಿ ಅಧ್ಯಕ್ಷ ಟಿಸಿ ಹೊಣಕಾರ ನಾಯಕ, ಮಾಜಿ ಅಧ್ಯಕ್ಷ ವರದನಾಯಕ, ಸದಸ್ಯ ರಾಮುಲು (ರಾಜು) ಭೇಟಿ ನೀಡಿ ಹೂವಿನ ಮಾಲೆಯನ್ನು ಹಾಕುವ ಮೂಲಕ ಶುಭಾಶಯ ಕೋರಿದರು.

## ಸಿಡಿಮದ್ದು ಸ್ಫೋಟಗೊಂಡು ಹಸುವಿಗೆ ತೀವ್ರ ಗಾಯ



ಸೋಮಹಳ್ಳಿ ಗ್ರಾಮದಲ್ಲಿ ಶುಕ್ರವಾರ ಕಿಡಿಗೇಡಿಗಳ ಕೃತ್ಯಕ್ಕೆ ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರಗೊಂಡಿದ್ದು ನರಳಾಟ ಮನಕಲಕುವಂತಿದೆ.

ಬೇಗೂರು, ಡಿ.12–ಸಮೀಪದ ಸೋಮಹಳ್ಳಿ ಗ್ರಾಮದ ಜಮೀನಿನಲ್ಲಿ ಸಿಡಿಮದ್ದು ಸಿಡಿದು ಹಸುವಿನ ಬಾಯಿ ಛಿದ್ರವಾಗಿದ್ದು, ಹಸುವಿನ ನರಳಾಟ ಮನಕಲಕುವಂತಿದೆ.

ಸೋಮಹಳ್ಳಿ ಗ್ರಾಮದ ನಂಜಪ್ಪ ಎಂಬುವರು ಸೋಮಹಳ್ಳಿ–ಮಾದಪಟ್ಟಣ ರಸ್ತೆ ಪಕ್ಕದಲ್ಲಿರುವ ತಮ್ಮ ಜಮೀನಿಗೆ ಹಸುವನ್ನು ಮೇಯಿಸಲು ತೆರಳುತ್ತಿದ್ದ ಸಂದರ್ಭ ಜಮೀನಿನ ಬಳಿ ಕಾಲುದಾರಿಯಲ್ಲಿ ಹಸು ಸಿಡಿಮದ್ದಿಗೆ ಬಾಯಿ ಹಾಕಿದ ಕೂಡಲೇ ಹಸುವಿನ ಬಾಯಿ ಸಿಡಿದು ಆಹಾರ ಸೇವಿಸದಂತೆ ತೀವ್ರವಾಗಿ ಗಾಯಗೊಂಡಿದೆ.

ಹಸುವಿನ ಬಾಯಿ ಛಿದ್ರಗೊಂಡಿದ್ದು ಸದ್ಯ ಜೀವನ್ಮರಣ ಹೋರಾಟ ನಡೆಸುತ್ತಿದೆ. ಹಸುವಿನ ಮಾಲಿಕ ನಂಜಪ್ಪ ಬೇಗೂರು ಠಾಣೆಯಲ್ಲಿ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ಮುಂದಿನ ತನಿಖೆ ಕೈಗೊಂಡಿದ್ದಾರೆ. ಹಂದಿಗಳ ಬೇಟೆಗೆ ಸಿಡಿಮದ್ದು ಇರಿಸಿದ್ದರೊ ಇಲ್ಲವೇ ಕಿಡಿಗೇಡಿಗಳ ಕೃತ್ಯವಿರಬಹುದೆ ಎಂಬ ಬಗ್ಗೆ ಸಂಶಯಗಳು ವ್ಯಕ್ತಗೊಂಡಿದ್ದು, ಪೊಲೀಸರ ತನಿಖೆಯಿಂದ ಈ ಅಂಶಗಳು ಬೆಳಕಿಗೆ ಬರಬೇಕಾಗಿದೆ.

## ಡಿ.15, 16 ವಿ.ವಿ.ಯಲ್ಲಿ ಸಮಗ್ರ ಅಭಿವೃದ್ಧಿ ಯೋಜನೆ ಕಾರ್ಯಕ್ರಮ

**ಚಾಮರಾಜನಗರ:** ಚಾಮರಾಜನಗರ ವಿಶ್ವವಿದ್ಯಾನಿಲಯವು ಧಾರವಾಡದ ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ಡೆವಲೆಪ್ ಮೆಂಟ್ ರಿಸರ್ಚ್ (ಸಿ.ಎಂ.ಡಿ.ಆರ್)ವತಿಯಿಂದ ಸಮಗ್ರ ಅಭಿವೃದ್ಧಿ ಯೋಜನೆಯ ಸಿದ್ದತೆ ಕುರಿತ ಕಾರ್ಯಕ್ರಮವನ್ನು ಡಿ.15, 16ರಂದು ಬೆಳಿಗ್ಗೆ 10ರಿಂದ ಸಂಜೆ 4.30 ಗಂಟೆಯವರೆಗೆ ಸುವರ್ಣ ಗಂಗೋತ್ರಿಯ ಕಾನ್ಫರೆನ್ಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂತಾರಾಷ್ಟ್ರೀಯ ಸೈಬರ್ ಸೆಕ್ಯುರಿಟಿ ಮತ್ತು ಕೃತಕ ತಂತ್ರಜ್ಞಾನ (ಎಐ) ತಜ್ಞರು ಹಾಗೂ ವಿಜ್ಞಾನ ಲೇಖಕ ಡಾ. ಉದಯಶಂಕರ್ ಪುರಾಣಿಕ್ ಕಾರ್ಯಕ್ರಮ ಉದ್ಘಾಟಿಸುವರು. ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರು, ಹಾವೇರಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಸುರೇಶ್ ಹೆಚ್. ಜಂಗಮ್ ಶೆಟ್ಟಿ, ಧಾರವಾಡ ಸಿ.ಎಂ.ಡಿ.ಆರ್. ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕುಲಪತಿಪ್ರೊ. ಎಂ.ಆರ್. ಗಂಗಾಧರ್ ಅಧ್ಯಕ್ಷತೆ ವಹಿಸುವರು ಎಂದು ವಿವಿ ಪ್ರಕಟಣೆ ತಿಳಿಸಿದೆ.

## ಗಾಂಜಾ ಮಾರಾಟ ಯತ್ನ; ವ್ಯಕ್ತಿ ಬಂಧನ

ಯಳಂದೂರು,ಡಿ.12 (ವಿ.ನಾಗರಾಜು)–ಪಟ್ಟಣದ ಬಳೆಪೇಟೆಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿರುವ ಘಟನೆ ನಡೆದಿದೆ.

ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಮುತ್ತುಗದ ಗದ್ದೆ ಪೋಡಿನ ನಿವಾಸಿ ರಂಗಸ್ವಾಮಿ ಎಂಬಾತನೇ ಬಂಧಿತ ವ್ಯಕ್ತಿಯಾಗಿದ್ದಾನೆ. ಈತ ಬಿಳಿಗಿರಿರಂಗನ ಬೆಟ್ಟದಿಂದ ಗಾಂಜಾವನ್ನು ತಂದು ಪಟ್ಟಣದ ಬಳೆಪೇಟೆಯ ಬಿ ಆರ್ ಹಿಲ್ಸ್ ರಸ್ತೆ ಬಳಿಯಲ್ಲಿರುವ ಕೆರೆಯ ಬಳಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಎನ್ನಲಾಗಿದೆ. ಪೊಲೀಸರು ಆರೋಪಿ ಬಂಧಿತನಿಂದ 650 ಗ್ರಾಂ ಒಣಗಾಂಜವನ್ನು ವಶಪಡಿಸಿಕೊಳ್ಳಲಾಗಿದೆ. ಡಿವೈಎಸ್ಪಿ ಪವನ್ ಕುಮಾರ್, ಪಿಎಸ್‌ಐ ಆಕಾಶ್, ಪಪಂ ಮುಖ್ಯ ಅಧಿಕಾರಿ ಎಂ.ಪಿ. ಮಹೇಶ್ ಕುಮಾರ್ ಪೊಲೀಸ್ ಸಿಬ್ಬಂದಿಗಳಾದ ಕೆ.ಪಿ. ನಾಗೇಂದ್ರ, ನಂಜುಂಡಸ್ವಾಮಿ, ಶಿವಮೂರ್ತಿ, ಭಾಗಿಯಾಗಿದ್ದರು.

# ಗೃಹಲಕ್ಷ್ಮೀ ಯೋಜನೆ ಸಮರ್ಪಕವಾಗಿ ತಲುಪಿಸಿ

ಚಾಮರಾಜನಗರ, ಡಿ.12–ರಾಜ್ಯಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಗೃಹಲಕ್ಷ್ಮೀ ಯೋಜನೆಯನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ತಾಲೂಕು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ತಿಳಿಸಿದರು.



ತಾಲೂಕು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ತಾಲೂಕಿನ ಕಾಡಂಚಿನ ಗ್ರಾಮ ಪುಣಜನೂರು ಗ್ರಾ.ಪಂ ಕಚೇರಿಯಲ್ಲಿ ನಡೆದ ತಾಲೂಕು ಪಂಚಗ್ಯಾರಂಟಿ ಯೋಜನೆಯಡಿ ಹಮ್ಮಿಕೊಂಡಿದ್ದ ಅಟ್ಟುಗೂಳಿಪುರ, ಪುಣಜನೂರು ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಿಯರು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಉದ್ಘಾಟಿಸಿ, ಅಂಗನವಾಡಿ ಕಾರ್ಯಕರ್ತೆಯರು, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಗಿರಿಜನ ಹಾಡಿಗಳಿಗೆ ಭೇಟಿ ನೀಡಿ, ಪಡಿತರ ಕಾರ್ಡ್ ಇಕೆವೈಸಿ ಆಗದಿರುವುದು, ಆಧಾರ್ ಕಾರ್ಡ್ ಲಿಂಕ್ ಆಗದಿರುವುದು ಇದ್ದಲ್ಲಿ ಲೋಪದೋಷ ಸರಿಪಡಿಸಿಕೊಟ್ಟು, 107 ಫಲಾನುಭವಿಗಳಿಗೆ ಗೃಹಲಕ್ಷ್ಮೀ ಯೋಜನೆಯ ಹಣಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳಬೇಕು ಎಂದು ತಾಕೀತುಮಾಡಿದರು.

ಸಭೆಯಲ್ಲಿ ತಾಲೂಕು ಪಂಚಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಮರಿಯಾಲ ಹುಂಡಿಕುಮಾರ್, ಮಾದಾಪುರ ಕುಮಾರ್, ರಮೇಶ್, ಮಾದೇಶ್, ಸುಕುಮಾರ್, ಸಿಡಿಪಿಓ ನಾಗೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕಿ ಕಸ್ತೂರಿ, ಸಿಬ್ಬಂದಿ ಪುಣಜನೂರು ಗ್ರಾ.ಪಂ. ಪಿಡಿಓ, ಕಾರ್ಯದರ್ಶಿ ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು.

# ಕಾವಲು ಪಡೆಯಿಂದ ನಾಡಗೀತೆಗೆ ನೂರರ ಸಂಭ್ರಮದ ಸಮಾರೋಪ



ನಾಡಗೀತೆಗೆ ನೂರರ ಸಂಭ್ರಮದ ಸಮಾರೋಪ ಸಮಾರಂಭ ನಡೆಯಿತು.

ಗುಂಡ್ಲುಪೇಟೆ ಡಿ.12(ಸೋಮ್. ಜಿ)–ಇಲ್ಲಿನ ಕರ್ನಾಟಕ ಕಾವಲು ಪಡೆಯಿಂದ ಪಟ್ಟಣದ ಸಿ.ಎಂ.ಎಸ್. ಮಕ್ಕಳ ಮನೆಯಲ್ಲಿ ತಾಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಅವರ ನೇತೃತ್ವದಲ್ಲಿ ನಾಡಗೀತೆಗೆ ನೂರರ ಸಂಭ್ರಮದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕನ್ನಡಕ್ಕೆ ಅತಿ ಹೆಚ್ಚು ಒತ್ತು ಕೊಡಬೇಕೆಂದರು.

ಇದೇ ವೇಳೆ ಸಾಹಿತಿ ಕಾಳಿಂಗ ಸ್ವಾಮಿ ಸಿದ್ದಾರ್ಥ ಪ್ರಾಸ್ತಾವಿಕ ಭಾಷಣಮಾಡಿದರು.

ಬಾಲ ನ್ಯಾಯ ಮಂಡಳಿ ಸದಸ್ಯೆ ಸರಸ್ವತಿ ಮಾತನಾಡಿ ಕನ್ನಡದ ಬಗ್ಗೆ ಹಲವು ವಿಚಾರ ತಿಳಿಸಿದರು ಮುಖ್ಯ ಭಾಷಣ ಮಾಡಿದ ಸುಭಾಷ್ ಮಾಡ್ರಹಳ್ಳಿ ಕಾವಲು ಪಡೆಯ 30ದಿನದ ಕಾರ್ಯಕ್ರಮದ ಬಗ್ಗೆ ಶ್ಲಾಘನೀಯ ಎಂದರು.

ಲೆಕ್ಕ ಪರಿಶೋಧಕ ಕೆ.ಬಿ.ಶಾಂತರಾಜು ಮಾತನಾಡಿ ಕನ್ನಡ ಅಕ್ಷರದ ಬಗ್ಗೆ ಹಲವು ವಿಚಾರ ತಿಳಿಸಿದರು. ಕನ್ನಡಪರ ಹಿರಿಯ ಹೋರಾಟಗಾರರಾದ ಬ್ರಹ್ಮಾನಂದ್ ಮಾತನಾಡಿದರು.

ಗಡಿನಾಡು ವನ್ಯಜೀವಿ ಪರಿಸರ ಸಂಘದ ಅಧ್ಯಕ್ಷ ಪಿ.ಬಾಲು ಮಾತನಾಡಿದರು. ಇದೇ ವೇಳೆ ಸಾಧಕರನ್ನು ಗೌರವಿಸಲಾಯಿತು. ಜಿಲ್ಲಾ ಕಾರ್ಯಾಧ್ಯಕ್ಷ ಅಬ್ದುಲ್ ರಷೀದ್, ಅಗ್ನಿ ಶಾಮಕ ದಳದ ಅಧಿಕಾರಿ ಕಲ್ಯಾಣ್ ರಾವ್, ಮಹದೇವ ಸ್ವಾಮಿ, ಗೃಹರಕ್ಷಕ ದಳದ ಕಮಾಂಡರ್ ಸಿದ್ದರಾಜು, ಕಾವಲು ಪಡೆಯ ತಾಲೂಕು ಕಾರ್ಯದರ್ಶಿ ಎಸ್.ಮುಬಾರಕ್, ಉಪಾಧ್ಯಕ್ಷ ಮಂಜುನಾಥ್, ಸಂಚಾಲಕ ಕುಂಜುಟ್ಟಿ, ಟೌನ್ ಉಪಾಧ್ಯಕ್ಷ ಸಾದಿಕ್ ಪಾಷ. ಟೌನ್ ಸಂಚಾಲಕ ಮಿಮಿಕ್ರಿರಾಜು, ಮುಂಟೀಪುರ ಮಾದಯ್ಯ, ಸುರೇಶ್, ರಘು, ರಾಮೇಗೌಡ, ಸಿ.ಎಂ.ಎಸ್. ಮಕ್ಕಳ ಮನೆಯ ವ್ಯವಸ್ಥಾಪಕರಾದ ಚೆಲುವರಾಜ್ ಹಾಗೂ ಮಕ್ಕಳು ಹಾಜರಿದ್ದರು.

# ಮುಖ್ಯಮಂತ್ರಿಗಾದಿಗೆ ಪ್ರಹಸನ

## ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯ



ಬೆಂಗಳೂರು, ಡಿ.12(ಕೆಎಂಶಿ)– ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಬ್ರೇಕ್ ಫಾಸ್ಟ್, ಲಂಚ್ ಆಯ್ತು, ಈಗ ಬೆಳಗಾವಿಯಲ್ಲಿ ಡಿನ್ನರ್ ಮೀಟಿಂಗ್ ನಡೀತಿದೆ. ಮುಖ್ಯಮಂತ್ರಿಗಾದಿಯಲ್ಲಿ ಯಾರು ಕೂರಬೇಕೆಂಬ ಮ್ಯೂಸಿಕಲ್ ಚೇರ್ ಪ್ರಹಸನ ನಡೆಯುತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ಸರ್ಕಾರದಲ್ಲಿ ಇರುವವರಿಗೆ ಜನರ ಬಗ್ಗೆ ಕಾಳಜಿ ಇಲ್ಲ, ಕುರ್ಚಿ ಕಮಿಟ್ಮೆಂಟ್ ಅಷ್ಟೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಲಿಕಾಪ್ಟರ್ ಸುತ್ತಾಟಕ್ಕೆ 47 ಕೋಟಿ ರೂ. ಬಿಲ್ ಆಗಿದೆ. ರಸ್ತೆಯಲ್ಲಿ ಓಡಾಡಿದರೆ ಗುಂಡಿ ಎಷ್ಟು ಇವೆ ಎಂಬುದಾದರೂ ತಿಳಿಯುತ್ತಿತ್ತು ಎಂದರು.

ಪಕ್ಷದ ಕಚೇರಿಯಲ್ಲಿ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಸಹಾಯಕತೆ ನೋಡೋಕೆ ಆಗ್ತಿಲ್ಲ. ಅವರೇ ಹೈಕಮಾಂಡ್ ಜೊತೆ ಮಾತಾಡುತ್ತೇವೆ ಅಂತಾರೆ, ಯತೀಂದ್ರ ಏಕೆ ಆ ರೀತಿ ಹೇಳ್ತಿದ್ದಾರೆ ಎಂಬುದು ಗೊತ್ತಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಮಾತ್ರ ಹಾಳಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರ ದ್ವೇಷ ಭಾಷಣ ತಡೆಗೆ ಕಾನೂನು ತರಲು ಹೊರಟಿದೆ. ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕವನ್ನು ಜೆಡಿಎಸ್ ವಿರೋಧಿಸುತ್ತದೆ. ಇದರ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸುತ್ತೇವೆ.

ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ ಮೂಲಕ ಕಾಂಗ್ರೆಸ್ ಸರ್ಕಾರ 1975ರ ತುರ್ತು ಪರಿಸ್ಥಿತಿಯನ್ನು ಮತ್ತೆ ಹೇರುವ ಕುತಂತ್ರ ಮಾಡುತ್ತಿದೆ, ಇದರಿಂದ ಕಾಂಗ್ರೆಸ್ ಸರ್ಕಾರದ ಪತನದ ದಿನ ದೂರವಿಲ್ಲ.

ಉತ್ತರ ಕರ್ನಾಟಕ ರೈತರು 6 ತಿಂಗಳಿಂದ ಸಂಕಷ್ಟದಲ್ಲಿದ್ದಾರೆ. ಅತಿವೃಷ್ಟಿಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬೆಳಗಾವಿಯಲ್ಲಿ ವಿಧಾನಮಂಡಲದ ಕಾಟಾಚಾರದ ಅಧಿವೇಶನ ನಡೆಯುತ್ತಿದೆ. ಕೃಷಿಕರ ನೋವಿಗೆ ಸ್ಪಂದಿಸುವ ಅಧಿವೇಶನ ನಡೆಯಬೇಕು. ನಾಡಿನ ಸಮಗ್ರ ಬೆಳವಣಿಗೆಗೆ ಅಧಿವೇಶನ ಆಗುತ್ತಿಲ್ಲ ಎಂದರು.

# ಮಾಜಿ ಸಚಿವ ಎಚ್.ಎಂ.ರೇವಣ್ಣ ಪುತ್ರನ ಕಾರು, ಬೈಕಿಗೆ ಡಿಕ್ಕಿ; ಯುವಕ ಸಾವು

ರಾಮನಗರ, ಡಿ.12– ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರ ಪುತ್ರ ಆರ್. ಶಶಾಂಕ್ ಪ್ರಯಾಣಿಸುತ್ತಿದ್ದ ಕಾರು ಗುರುವಾರ ತಡ ರಾತ್ರಿ ಬೈಕಿಗೆ ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಯುವಕ ಸಾವನ್ನಪ್ಪಿದ್ದಾನೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲೂಕು ಗುಡೇಮಾರನಹಳ್ಳಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದ್ದು, ಘಟನೆ ವೇಳೆ ರೇವಣ್ಣ ಪುತ್ರ ಶಶಾಂಕ್ ಕಾರು ಚಲಾಯಿಸುತ್ತಿದ್ದರು ಎಂದು ಆರೋಪಿಸಲಾಗಿದೆ. ಆದರೆ ಈ ಆರೋಪವನ್ನು ನಿರಾಕರಿಸಿದ ರೇವಣ್ಣ, ನನ್ನ ಪುತ್ರನ ಕಾರು ಅಪಘಾತವಾಗಿದ್ದು ನಿಜ. ಆದರೆ ಚಾಲಕ ಕಾರು ಚಲಾಯಿಸುತ್ತಿದ್ದರು ಎಂದು ಹೇಳಿದ್ದಾರೆ.

ಮಾಗಡಿ ತಾಲೂಕಿನ ಬೆಳಗುಂಬ ಗ್ರಾಮದ ನಿವಾಸಿ ರಾಜೇಶ್(27) ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ, ಕಾರು (ಎಂ 51 ಒಕೆ 0555) ಡಿಕ್ಕಿಯಾದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಕಾರು ಆರ್. ಶಶಾಂಕ್ ಅವರ ಹೆಸರಿನಲ್ಲಿರುವುದು ದೃಢಪಟ್ಟಿದೆ.

ಈ ಸಂಬಂಧ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ

### ಕೇರಳ ನಟಿ ಮೇಲೆ ಅತ್ಯಾಚಾರ, ಹಲ್ಲೆ ಪ್ರಕರಣ

# ಪಲ್ಸರ್ ಸುನಿ ಸೇರಿ ಎಲ್ಲಾ ಆರೋಪಿಗಳಿಗೆ 20 ವರ್ಷ ಕಠಿಣ ಜೈಲು ಶಿಕ್ಷೆ!

ಕೊಚ್ಚಿ, ಡಿ.12– ನಟಿಯನ್ನು ಅಪಹರಿಸಿ, ಲೈಂಗಿಕ ದೌರ್ಜನ್ಯ ಎಸಗಿ, ಚಿತ್ರೀಕರಣ ಮಾಡಿದ ಪ್ರಕರಣದಲ್ಲಿ ಮೊದಲ ಆರೋಪಿ ಪಲ್ಸರ್ ಸುನಿ ಸೇರಿದಂತೆ ಆರು ಆರೋಪಿಗಳಿಗೆ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ.

ಎರ್ನಾಕುಲಂ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಹನಿ ಎಂ.ವರ್ಗೀಸ್ ಶಿಕ್ಷೆ ಪ್ರಕಟಿಸಿದ್ದಾರೆ. ಲೈಂಗಿಕ ಕೃತ್ಯಕ್ಕೆ ಸುಫಾರಿ ನೀಡಿದ್ದಕ್ಕಾಗಿ ದೇಶದಲ್ಲಿ ದಾಖಲಾಗಿದ್ದ ಮೊದಲ ಪ್ರಕರಣ ಇದಾಗಿದೆ. ಎಲ್ಲಾ ಆರು ಆರೋಪಿಗಳಿಗೆ ತಲಾ 50,000 ರೂ. ದಂಡ ವಿಧಿಸಲಾಗಿದೆ.

ಒಂದರಿಂದ ಆರು ಆರೋಪಿಗಳಾದ ಪಲ್ಸರ್ ಸುನಿ ಅಲಿಯಾಸ್ ಎನ್.ಎಸ್.ಸುನಿಲ್, ಮಾರ್ಟಿನ್ ಆಂಟೋನಿ, ಬಿ. ಮಣಿಕಂಡನ್, ವಿ.ಪಿ.ವಿಜಯೇಶ್, ಎಚ್.ಸಲೀಂ (ವಡಿವಾಲ್ ಸಲೀಂ) ಮತ್ತು ಪ್ರದೀಪ್‌ನನ್ನು ಸೋಮವಾರ ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಲಯ ತಪ್ಪಿತಸ್ಥರೆಂದು ಘೋಷಿಸಿತ್ತು. ಈಗ ಅವರೆಲ್ಲರಿಗೂ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ.

ಕ್ರಿಮಿನಲ್ ಪಿತೂರಿ, ಅಕ್ರಮ ಬಂಧನ, ಬಲವಂತವಾಗಿ ಮಹಿಳೆಯನ್ನು ವಿವಸ್ತ್ರಗೊಳಿಸಿದ್ದು, ಸ್ತ್ರೀತ್ವವನ್ನು ಕೆರಳಿಸುವ ಉದ್ದೇಶದಿಂದ ಹಲ್ಲೆ, ಸಾಮೂಹಿಕ ಅತ್ಯಾಚಾರ, ಸಾಕ್ಷ್ಯ ನಾಶ, ಅಪಹರಣ, ಪ್ರಚೋದನೆ, ಸಾರ್ವಜನಿಕ ಉದ್ದೇಶದಿಂದ ಅಪರಾಧ ಮತ್ತು ಐಟಿ ಕಾಯ್ದೆಯಡಿ ಖಾಸಗಿ ಚಿತ್ರಗಳು ಅಥವಾ ಚಿತ್ರಗಳನ್ನು ನಕಲಿಸುವುದು ಅಥವಾ ಪ್ರಸಾರ ಮಾಡುವುದು ಸೇರಿದೆ

# ಅಕ್ರಮ ಕಟ್ಟಡಗಳನ್ನು ನಿರ್ಮಿಸಿರುವ ಹುಣಸೂರು ಕ್ಲಬ್‌ಗೆ ಅಧಿಕಾರಿಗಳ ಭೇಟಿ

● ಸ್ಥಳ, ದಾಖಲಾತಿಗಳ ಪರಿಶೀಲನೆ ● ಜಾಗದ ಅಳತೆ ಮಾಡಿದ ಅಧಿಕಾರಿಗಳು ● ಮೂಲ ದಾಖಲಾತಿ ಹಾಜರು ಪಡಿಸಲು ಸೂಚನೆ

ಮೈಸೂರು ಮಿತ್ರ ಫಲಶ್ರುತಿ ಮೈಸೂರು ಮಿತ್ರ



ಹುಣಸೂರು, ಡಿ.12(ಕೆಕೆ)– 'ಹುಣಸೂರಿನಲ್ಲಿ ಅನುಮತಿ ಇಲ್ಲದೆ ಅಕ್ರಮ ಕಟ್ಟಡ ನಿರ್ಮಾಣ' ಶೀರ್ಷಿಕೆಯಡಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಶುಕ್ರವಾರ ವರದಿ ಪ್ರಕಟವಾಗುತ್ತಿದ್ದಂತೆ ಅಧಿಕಾರಿಗಳು ಇಂದು ಅಕ್ರಮ ಕಟ್ಟಡ ನಿರ್ಮಿಸಿರುವ ಹುಣಸೂರು ಕ್ಲಬ್‌ಗೆ ಭೇಟಿ ನೀಡಿ ಕ್ಲಬ್ ಜಾಗವನ್ನೆಲ್ಲ ಅಳತೆ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳದ ಮಹಜರ್ ನಡೆಸಿದರು.

ಇಂದು ಬೆಳಗ್ಗೆ ನಗರಸಭೆ ಆಯುಕ್ತರಾದ ಮಾನಸ ಅವರ ಸೂಚನೆ ಮೇರೆಗೆ ಹಿರಿಯ ಕಂದಾಯಾಧಿಕಾರಿ ಸಿದ್ದಯ್ಯ, ಕಂದಾಯ ನಿರೀಕ್ಷಕ ಮಧುಸೂದನ್, ಕಿರಿಯ ಅಭಿಯಂತರ ಜೋಯೆಲ್, ನೋಡಲ್ ಅಧಿಕಾರಿ ಸೋಮಸುಂದರ್, ಹಂಗಾಮಿ ದಿನಗೂಲಿ ನೌಕರ ಸುರೇಂದ್ರ ಅವರುಗಳು ಕ್ಲಬ್‌ಗೆ ತೆರಳಿ ಅಳತೆ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿದರು ಹಾಗೂ ಕ್ಲಬ್‌ಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಕಚೇರಿಗೆ ತಂದು ಹಾಜರು ಪಡಿಸಲು ಸೂಚಿಸಿದರು.

ಪರಿಸರ ಇಂಜಿನಿಯರ್ ಸೌಮ್ಯ ಅವರು ಮಾತನಾಡಿ ಕ್ಲಬ್ ವ್ಯಾಪ್ತಿಯಲ್ಲಿ ಯಾವುದೆ ಮಳಿಗೆಗಳಿಗೂ ವಾಣಿಜ್ಯ ಉದ್ದಿಮೆ ಪರವಾನಿಗೆ ಪಡೆದಿಲ್ಲ. ನಾವು ಈಗಾಗಲೆ ಕಾನೂನು ರೀತ್ಯಾ ನೋಟಿಸ್ ನೀಡಿದ್ದೇವೆ. ಅವರಿಂದ ಯಾವುದೆ ಪ್ರತಿಕ್ರಿಯೆ ಬಂದಿಲ್ಲ. ಆಯುಕ್ತರ ನಿರ್ದೇಶನದಂತೆ ಸೋಮವಾರ ನಾವು ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತೇವೆ ಎಂದರು.

ಕಂದಾಯಾಧಿಕಾರಿ ಸಿದ್ದಯ್ಯ ಮಾತನಾಡಿ 'ಮೈಸೂರು ಮಿತ್ರ'ದಲ್ಲಿ ಸುದ್ದಿ ಬಂದ ವಿಚಾರವಾಗಿ ಆಯುಕ್ತರ ಸೂಚನೆಯಂತೆ ನಾವು ಮತ್ತು ನಮ್ಮ ಸಿಬ್ಬಂದಿವರ್ಗದವರು ಸ್ಥಳಕ್ಕೆ ಭೇಟಿ ನೀಡಿ ಕ್ಲಬ್ ವ್ಯಾಪ್ತಿಯ ಪ್ರದೇಶವನ್ನೆಲ್ಲ ಅಳತೆ ಮಾಡಿ ಕ್ಲಬ್‌ಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಮೂಲ ದಾಖಲಾತಿಗಳನ್ನು ಕಚೇರಿಗೆ ತಂದು ಹಾಜರುಪಡಿಸಲು ಸೂಚನೆ ನೀಡಿ ಕ್ರಮ ವಹಿಸಿದ್ದೇವೆ. ಮೂಲ ದಾಖಲಾತಿಗಳನ್ನು ತಂದು ಹಾಜರುಪಡಿಸಿದ ನಂತರ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಅಯುಕ್ತರಾದ ಮಾನಸ ಅವರು ಮಾತನಾಡಿ ಕಳೆದ ಎರಡು ಮೂರು ದಿನಗಳಿಂದ ಈ ಬಗ್ಗೆ ತಪಾಸಣೆಯಲ್ಲಿ ತೊಡಗಿದ್ದೇವೆ. ಪತ್ರಿಕೆಯಲ್ಲಿ ಸುದ್ದಿ ಬಂದ ನಂತರ ಇಂದು ನಮ್ಮ ಕಂದಾಯ ಅಧಿಕಾರಿ ಮತ್ತು ಸಿಬ್ಬಂದಿ ಯನ್ನು ಸ್ಥಳಕ್ಕೆ ಕಳುಹಿಸಿ ಕ್ಲಬ್ ವ್ಯಾಪ್ತಿಯ ಪ್ರದೇಶವನ್ನು ಅಳತೆ ಮಾಡಿಸಿ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿದೆ. ಮೂಲ ದಾಖಲಾತಿಗಳನ್ನು ಕಚೇರಿಗೆ ತಂದು ಹಾಜರು ಪಡಿಸಲು ಸೂಚಿಸಲಾಗಿದೆ ಎಂದರು.

# ಬೆಳಗ್ಗೆ ಪ್ರತಿಭಟನೆ ಎಚ್ಚರಿಕೆ, ಸಂಜೆ ಕೆರೆಗೆ ನೀರು

## ರೈತರು, ಗ್ರಾಮಸ್ಥರ ಬೆದರಿಕೆಗೆ ಮಣಿದ ಅಧಿಕಾರಿಗಳು!



ಶಿಂಡೇನಹಳ್ಳಿ ಕೆರೆಗೆ ನೀರು ತುಂಬಿಸದೆ ಬತ್ತಿ ಹೋಗಿರುವುದು.



ಒಣಗಿ ನಿಂತಿರುವ ಡಿಸ್ಟ್ರಿಬ್ಯೂಟರ್‌ಗಳು.

ಹೆಚ್.ಡಿ.ಕೋಟೆ, ಡಿ.12– ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಅಧಿಕಾರಿಗಳು ತಾರತಮ್ಯ ನೀತಿ ಅನುಸರಿಸುತ್ತಿದ್ದು, ಅವರ ವಿರುದ್ಧ ರೈತರು ಮತ್ತು ಗ್ರಾಮಸ್ಥರು ಉಗ್ರ ಪ್ರತಿಭಟನೆ ನಡೆಸುತ್ತೇವೆ ಎಂದು ಬೆಳಗ್ಗೆ ಎಚ್ಚರಿಕೆ ನೀಡುತ್ತಿದ್ದಂತೆ ಅಧಿಕಾರಿಗಳು ಸಂಜೆ ವೇಳೆಗೆ ಕೆರೆಗೆ ನೀರು ತುಂಬಿಸಲು ಮುಂದಾಗಿದ್ದಾರೆ.

ರೈತ ಮುಖಂಡ ಶಿಂಡೇನಹಳ್ಳಿ ಯತೀಶ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ವಿಚಾರ ಘೋಷಿಸುತ್ತಿದ್ದಂತೆ ಬರಿದಾಗಿ ಒಣಗಿ ನಿಂತಿದ್ದ ಕೆರೆಗೆ ಅಧಿಕಾರಿಗಳು ನೀರು ಹರಿಸಲು ಪ್ರಾರಂಭಿಸಿದ್ದಾರೆ.

ತಾಲೂಕಿನ ಹಂಪಾಪುರ ಹೋಬಳಿ ವ್ಯಾಪ್ತಿಯಲ್ಲಿ ಒಟ್ಟು 17 ಕೆರೆಗಳಿದ್ದು, ಅದರಲ್ಲಿ 11 ಕೆರೆಗಳಿಗೆ ಮಾತ್ರ ಅಧಿಕಾರಿಗಳು ನೀರು ತುಂಬಿಸಿದ್ದು, ಉಳಿದ 6 ಕೆರೆಗೆ ನೀರು ತುಂಬಿಸಲು ಮೀನಾ ಮೇಷ ಎಣಿಸುತ್ತಿದ್ದಾರೆ. ಕೆರೆಗಳಿಗೆ ನೀರು ತುಂಬಿಸದ ಕಾರಣ ದನ–ಕರುಗಳಿಗೆ, ಕುಡಿಯಲು ನೀರಿಲ್ಲದೆ ಸಾಕಷ್ಟು ಸಮಸ್ಯೆಯಾಗುತ್ತಿದೆ, ಅಲ್ಲದೆ ಬೋರ್‌ವೆಲ್‌ಗಳ ಅಂತರ್ಜಲ ಕುಸಿಯುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದರು.

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳಿನಲ್ಲಿ ಕೆರೆಗೆ ನೀರು ತುಂಬಿಸಬೇಕು. ಇನ್ನೇನು ಡಿಸೆಂಬರ್ ತಿಂಗಳು ಮುಗಿಯುತ್ತಾ ಬರುತ್ತಿದೆ. ಅಧಿಕಾರಿಗಳಿಗೆ ಸಾಕಷ್ಟು ಮನವಿ ಮಾಡಿದರೂ ರೈತರ ಮನವಿಗೆ ಸ್ಪಂದಿಸದೆ ರೈತರನ್ನು ಕಡೆಗಣಿಸಿ ಸುಳ್ಳು ಭರವಸೆ ನೀಡುತ್ತಿದ್ದಾರೆ. ಅಧಿಕಾರಿಗಳ ವಿರುದ್ಧ ಡಿ.14ರ ಭಾನುವಾರ ಶಿಂಡೇನಹಳ್ಳಿ ಗ್ರಾಮದ ಗೇಟ್ ಬಳಿ ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸರ್ಕಾರ ಕೆರೆಗೆ ನೀರು ತುಂಬಿಸುವ ಸಲುವಾಗಿ ಕರಿಗಳ ಬಳಿ 68 ಕೋಟಿ ರೂ. ವೆಚ್ಚದ ಪಂಪ್‌ಹೌಸ್ ನಿರ್ಮಿಸಿದೆ. ಆದರೂ ಅಧಿ ಕಾರಿಗಳು ಬೇಜವಾಬ್ದಾರಿತನದಿಂದ ವರ್ತಿಸಿ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಸಿಂಡೆನಹಳ್ಳಿ ರೈತ ಮುಖಂಡ ಯತೀಶ್ ಕುಮಾರ್ ದೂರಿದರು. ಪ್ರತಿಭಟನೆಯ ವಿಚಾರ ತಿಳಿಯುತ್ತಿದ್ದಂತೆ ಎಚ್ಚೆತ್ತ ಅಧಿಕಾರಿಗಳು ಸಂಜೆ ವೇಳೆಗೆ ಸದ್ದಿಲ್ಲದೆ ಕೆರೆಗೆ ನೀರು ತುಂಬಿಸಲು ಆರಂಭಿಸಿದರು.

ಈ ಬಾರಿ ಮಳೆ ಕಮ್ಮಿಯಾಗಿರುವ ಕಾರಣ ಅಂತರ್ಜಲ ಕುಸಿಯುತ್ತಿದೆ. ಆದ ಕಾರಣ ಕೆರೆಗಳಿಗೆ ನೀರು ತುಂಬಿಸಿದರೆ ಭೂಮಿ ಸಾಕಷ್ಟು ನೀರನ್ನು ಕುಡಿಯಲಿದೆ. ಕೆರೆಗಳಿಗೆ ಸಂಪೂರ್ಣ ನೀರು ಬಿಟ್ಟರೂ ಕೂಡ ಕೆಲವು ಕೆರೆಗಳು ತುಂಬಿಸಲು ಸಾಧ್ಯವಾಗುತ್ತಿಲ್ಲ. ಶಿಂಡೆನಹಳ್ಳಿ ಭಾಗದ ಕೆಲವು ಕೆರೆಗಳಿಗೆ ನೀರು ಹರಿಸಿದ್ದೇವೆ. ಕೆಲವು ಕೆರೆಗಳಿಗೆ ನೀರನ್ನು ತುಂಬಿಸುವ ಕೆಲಸವನ್ನು ಮಾಡುತ್ತೇವೆ ಎಂದು ತಿಳಿಸಿದ ಸಹಾಯಕ ಇಂಜಿನಿಯರ್ ಅವಿನಾಶ್ ಸಂಜೆ ವೇಳೆಗೆ ನೀರು ತುಂಬಿಸಲು ಆರಂಭಿಸಿದ್ದಾರೆ.

# ಅರಕೆರೆ ನಾಲೆಯಲ್ಲಿ ಅಪರಿಚಿತ ಶವ ಪತ್ತೆ

ಕೆ.ಆರ್.ನಗರ, ಡಿ.12– ಕೆ.ಅರ್.ನಗರ ತಾಲೂಕಿನ ಅರಕೆರೆ ಗ್ರಾಮದ ಚಾಮರಾಜ ಬಲದಂಡೆ ನಾಲೆಯಲ್ಲಿ ಮೈತುಂಬಾ ಹಚ್ಚೆ ಇರುವ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ.

ಅರಕೆರೆ ಗ್ರಾಮದ ನಾರಾಯಣಗೌಡರ ಜಮೀನಿನ ಪಕ್ಕದಲ್ಲಿ ಹಾದು ಹೋಗಿರುವ ಚಾಮರಾಜ ಬಲದಂಡೆ ನಾಲೆಯ ನೀರಿನಲ್ಲಿ ಸುಮಾರು 35 ರಿಂದ 40 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಮೃತ ದೇಹ ಪತ್ತೆಯಾಗಿದ್ದು ಮೃತ ವ್ಯಕ್ತಿಯು ಧೃಡಕಾಯ ಶರೀರ, ದುಂಡು ಮುಖ, ಕಪ್ಪು ತಲೆ ಕೂದಲು, ಗಡ್ಡ ಮತ್ತು ಮೀಸೆಯನ್ನು ಬಿಟ್ಟಿರುತ್ತಾರೆ

ಮೃತನ ಎದೆಯ ಬಲಭಾಗದಲ್ಲಿ, ಯಶು, ಸುಷ್ಮಾ, ಎಡಭಾಗದಲ್ಲಿ ರಮ್ಯ ಎಂದು ಹಾಗೂ ಎಡಕೈನಲ್ಲಿ ಕುಮಾರ್ ಮತ್ತು ಲವ್ ಸಿಂಬಲ್‌ನ ಒಳಗೆ ರಮ್ಯ ಎಂದು ಹಾಗೂ ಬಲಗೈ ರಟ್ಟೆಯಲ್ಲಿ Nisha, ಹಚ್ಚೆ ಇರುತ್ತದೆ. RR , LAKSHMI, DARSHAN, R Gowda ಎಂದು ಇಂಗ್ಲೀಷ್ ಅಕ್ಷರದಲ್ಲಿ ಹಚ್ಚೆ ಹಾಕಲಾಗಿದೆ.

ಶವದ ಮೈ ಮೇಲೆ ಬ್ರೌನ್ ಕಲರ್‌ನ ಜರ್ಕಿನ್, ನೆರಳೆ ಮತ್ತು ಕಪ್ಪು ಮಿಶ್ರಿತ ಗೆರೆಯುಳ್ಳ ಟೀ ಶರ್ಟು, ಮಿಲಿಟರಿ ಕಲರ್ ಪ್ಯಾಂಟು ಧರಿಸಿರುವುದು ಕಂಡು ಬಂದಿದ್ದು ಶವದ ವಾರಸುದಾರರು ಯಾರು ಇದುವರೆಗೆ ಪತ್ತೆಯಾಗಿಲ್ಲ.

ಈ ಸಂಬಂಧ ಕೆ.ಅರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ವಾರಸುದಾರರು ಇದ್ದರೆ ಪೊಲೀಸ್ ನಿರೀಕ್ಷಕರ ದೂರವಾಣಿ ಸಂಖ್ಯೆ 9480805036 ಇಲ್ಲವೇ ಠಾಣೆಯ ದೂ.ಸಂಖ್ಯೆ 08223–263666 ಅನ್ನು ಸಂಪರ್ಕಿಸುವಂತೆ ಕೆ.ಆರ್.ನಗರ ಪೊಲೀಸರು ಮನವಿ ಮಾಡಿದ್ದಾರೆ.

# ಹುಲಿ ಸೆರೆಗೆ ಆಗ್ರಹಿಸಿ ರೈತರಿಂದ ರಸ್ತೆ ತಡೆ



ಹುಣಸೂರು–ವಿರಾಜಪೇಟೆ ಹೆದ್ದಾರಿಯ ಮುತ್ತುರಾಯನ ಹೊಸಹಳ್ಳಿಯಲ್ಲಿ ಹುಲಿ ಸೆರೆಗೆ ಆಗ್ರಹಿಸಿ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಹನಗೋಡು, ಡಿ.12– ಮುಂಜಾನೆ ಹುಲಿ ಕಾಣಿಸಿಕೊಂಡಿದ್ದರಿಂದ ಆತಂಕಗೊಂಡ ಗ್ರಾಮಸ್ಥರು ವಿರಾಜಪೇಟೆ ಹೆದ್ದಾರಿಯ ಹನಗೋಡು ಹೋಬಳಿಯ ಮುತ್ತುರಾಯನಹೊಸಹಳ್ಳಿ ಬಳಿ ರಸ್ತೆ ತಡೆ ನಡೆಸಿ ಹುಲಿ ಸೆರೆಗೆ ಆಗ್ರಹಿಸಿದರು.

ಕಳೆದ ಒಂದು ವರ್ಷದಿಂದ ಹನಗೋಡು ಹೋಬಳಿಯ ಮುತ್ತುರಾಯನ ಹೊಸಹಳ್ಳಿ ಅರಣ್ಯ ಪ್ರದೇಶದ ಸುತ್ತಮುತ್ತಲಿನ ಮುತ್ತುರಾಯನ ಹೊಸಹಳ್ಳಿ, ಕಲ್ಲಹಳ್ಳಿ, ನಾಗಮಂಗಲ, ಹೈರಿಗೆ, ತಟ್ಟೆಕೆರೆ ಮತ್ತಿತರ ಗ್ರಾಮಗಳಲ್ಲಿ ಹುಲಿ ಆಗಾಗ್ಗೆ ದಾಳಿ ನಡೆಸುತ್ತಾ ಜಾನುವಾರುಗಳನ್ನು ಭೇಟೆಯಾಡುತ್ತಿದ್ದರೆ, ಆರು ತಿಂಗಳ ಹಿಂದಷ್ಟೆ ಹೈರಿಗೆಯ ತೋಟದಲ್ಲಿದ್ದ ಹುಲಿ ಜನರನ್ನು ಕಂಡು ಕಾಡಿನತ್ತ ಓಡಿ ಹೋಗಿದ್ದನ್ನು ವಿಡಿಯೋ ಮಾಡಿ ವೈರಲ್ ಮಾಡಲಾಗಿದೆ.

ಬೆಳಗ್ಗೆ 8 ಗಂಟೆಗೆ ಮುತ್ತುರಾಯನ ಹೊಸಹಳ್ಳಿಯ ವೆಂಕಟೇಶ್ ಹೊಲಕ್ಕೆ ಹೋಗುತ್ತಿದ್ದ ವೇಳೆ ಮಲಗಿದ್ದ ಹುಲಿಯ ಗರ್ಜನೆ ಕೇಳಿ ಹೆದ್ದಾರಿಗೆ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ.

ಮುತ್ತುರಾಯನ ಹೊಸಹಳ್ಳಿ ಗ್ರಾಮಸ್ಥರು ಹುಲಿ ಸೆರೆ ಹಿಡಿಯಲು ವಿಫಲವಾಗಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿ ಅರಣ್ಯ ಇಲಾಖೆ ವಿರುದ್ಧ ಮುತ್ತುರಾಯನ ಹೊಸಹಳ್ಳಿ ಅರಣ್ಯ ಪ್ರದೇಶದ ಹೆದ್ದಾರಿಯಲ್ಲೇ ಟಯರ್‌ಗೆ ಬೆಂಕಿ ಹೊತ್ತಿಸಿ, ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನಿಟ್ಟು ರಸ್ತೆ ತಡೆ ನಡೆಸಿ, ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು. ಹುಲಿ ಸೆರೆ ಹಿಡಿಯಿರಿ, ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸಬೇಕೆಂದು ಪಟ್ಟುಹಿಡಿದು ಘೋಷಣೆ ಕೂಗಲಾರಂಭಿಸಿದರು.

ಪ್ರತಿಭಟನೆಯಲ್ಲಿ ಯ.ಹನುಮಂತೇಗೌಡ ಮಾತನಾಡಿ ಈ ಭಾಗದಲ್ಲಿ ಹಗಲು ವೇಳೆಯೇ ಹುಲಿ ಓಡಾಡುತ್ತಿದೆ. ಜಾನುವಾರುಗಳನ್ನು ಕೊಂದು ಹಾಕುತ್ತಿದ್ದರೂ ಹುಲಿ ಸೆರೆಗೆ ಅಧಿಕಾರಿಗಳು ವಿಫಲರಾಗಿದ್ದಾರೆ. ಕಾಟಾಚಾರದ ಕೂಂಬಿಂಗ್ ನಡೆಸುತ್ತಿದ್ದಾರೆ. ಹುಲಿ ಸೆರೆ ಹಿಡಿಯುವವರೆಗೆ ಪ್ರತಿಭಟನೆ ನಡೆಸುತ್ತೇವೆಂದು ಎಚ್ಚರಿಸಿದರು.

ಸ್ಥಳಕ್ಕಾಗಮಿಸಿದ ಎಸಿಎಫ್ ಮಹದೇವಯ್ಯ ಕಳೆದ ಒಂದು ವಾರದಿಂದ ಈ ಭಾಗದಲ್ಲಿ ಕೂಂಬಿಂಗ್ ನಡೆಸುತ್ತಿದ್ದೇವೆ. ಒಮ್ಮೆ ಕಾಣಿಸಿಕೊಂಡ ಹುಲಿ ಮತ್ತೆ ಪತ್ತೆಯಾಗುತ್ತಿಲ್ಲ. ನಾವು ಹುಲಿ ಸೆರೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಇಂದಿನಿಂದಲೇ ಮತ್ತೆ ಕೂಂಬಿಂಗ್ ನಡೆಸಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ನೀವು ಕಾಟಾಚಾರಕ್ಕೆ ಕೂಂಬಿಂಗ್ ಮಾಡದೆ ಹೆಚ್ಚಿನ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ನಡೆಸಿ ಹಳ್ಳಿಗರಿಗೆ ಕಂಟಕವಾಗಿರುವ ಹುಲಿ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದರು. ಇನ್ಸ್‌ಪೆಕ್ಟರ್ ಮುನಿಯಪ್ಪ, ಎಸ್.ಐ.ರಾಮು ಹಾಗೂ ಸಿಬ್ಬಂದಿ ಪ್ರತಿಭಟನಾಕಾರರ ಮನವೊಲಿಸಿ ರಸ್ತೆ ತಡೆ ತೆರವುಗೊಳಿಸಿದರು.

ಪ್ರತಿಭಟನೆಯಲ್ಲಿ ಕಲ್ಲಹಳ್ಳಿ ಗ್ರಾ.ಪಂ.ಅಧ್ಯಕ್ಷ ಪ್ರಸನ್ನನಾಯಕ, ಮಾಜಿ ಅಧ್ಯಕ್ಷ ಜಗದೀಶ್, ಮುಖಂಡರಾದ ರಾಜನಾಯಕ, ಶಿವರಾಜು, ಬಸವರಾಜು, ಹೇಮಂತಕುಮಾರ್, ಗುಣಪ್ರಕಾಶ್, ಪುಟ್ಟೇಗೌಡ, ರಾಜಶೇಖರ್ ಸೇರಿದಂತೆ ಪಿರಿಯಾಪಟ್ಟಣ, ಕೋಟೆ ರೈತ ಸಂಘದ ಮುಖಂಡರು ಭಾಗವಹಿಸಿದ್ದರು.

# ಸಾಧನೆಗೆ ಅಸಾಧ್ಯವಾದದ್ದು ಯಾವುದು ಇಲ್ಲ



ಸರಗೂರು,ಡಿ.12–ಯಾವುದೇ ದೇವರು ನಿಮ್ಮ ಹಣೆಬರಹ ಬರೆಯುವುದಿಲ್ಲ. ನಿಮ್ಮ ಹಣೆಬರಹ ನೀವೇ ಬರೆದುಕೊಳ್ಳಬೇಕು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಡಾ.ಜಯಪ್ಪ ಹೊನ್ನಾಳಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಾಲಾ– ಕಾಲೇಜು ವಾರ್ಷಿಕೋತ್ಸವ ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ಬದುಕು ಸುಂದರವಾಗಿರಲು ಸಂಸ್ಕಾರ ಬೆಳಸಿಕೊಳ್ಳಬೇಕು. ಸಾಧನೆ ಕಾಲಾತೀತಗೊಳಿಸುತ್ತದೆ. ಸಾಧನೆಗೆ ಅಸಾಧ್ಯವಾದದ್ದು ಯಾವುದು ಇಲ್ಲ, ಸಹನೆ, ತಾಳ್ಮೆ ನಿಮ್ಮನ್ನು ಸಾಧನೆ ಮಾಡುವಂತೆ ಮಾಡುತ್ತದೆ. ಅದರ ಅರಿವು ನಿಮಗೆ ಇರಬೇಕು. ಮಕ್ಕಳು ಜ್ಞಾನದ ಬೆಳೆ ಬೆಳೆಯಬೇಕು ಎಂದರು.

ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ತಿಮಕಾಪುರ ಮಾತನಾಡಿ ನಮ್ಮ ಕಣ್ಣ ಮುಂದೆ ಇರುವ ಸಾಧಕರ ಜೀವನ ಚರಿತ್ರೆ ಓದಬೇಕು. ಜ್ಞಾನದ ಮುಂದೆ ಯಾವುದು ದೊಡ್ಡದಲ್ಲ. ಸಮಯವನ್ನು ಕಳೆದುಕೊಂಡರೆ ಮತ್ತೆ ಸಿಗುವುದಿಲ್ಲ ಎಂದರು. ಜೆಎಸ್‌ಎಸ್ ಶಾಲಾ ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಇಲ್ಲಿ 1400 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ನಮಗಾಗಿ ನಾವು ಬದುಕುವುದರ ಜೊತೆ ಬೇರೆಯವರ ಬದುಕಿಗೂ ಆಸರೆಯಾಗಬೇಕು. ಸಂಸ್ಕೃತಿಯನ್ನು ನಾವು ಬೆಳೆಸಿಕೊಳ್ಳಬೇಕು. ಕನಸು ಕಂಡರೆ ಅದು ಸಾರ್ಥಕ ಆಗುವ ತನಕ ಸಾಧನೆ ಮಾಡಬೇಕು ಎಂದರು.

ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಜಯಣ್ಣ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಶಾಲಾ ಮತ್ತು ಕಾಲೇಜು ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಶಾಲಾ ಮತ್ತು ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ನಡೆದ ಕ್ರೀಡಾಕೂಟದಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಬಹುಮಾನ ನೀಡಲಾಯಿತು.

ಕೃಷಿ ವಿಜ್ಞಾನಿ ಡಾ.ಹರೀಶ್, ಜೆಎಸ್‌ಎಸ್ ಕಾಲೇಜು ಪ್ರಾಂಶುಪಾಲ ಮಹದೇವಸ್ವಾಮಿ, ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯ ಶಿಕ್ಷಕಿ ನಾಗರತ್ನಮ್ಮ, ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಜಯಣ್ಣ, ಶಿಕ್ಷಕರಾದ ಪ್ರವೀಣ್, ಕೃಷ್ಣ ಮೂರ್ತಿ, ಅಶೋಕ್, ಗುರುಪ್ರಸಾದ್, ಬಿ.ಜಯ ಲಕ್ಷ್ಮೀ, ಮಂಜುನಾಥ್, ಸುರೇಶ್, ಎಸ್.ಶೋಭಾ, ಸ್ನೇಹಶ್ರೀ ಸಮಾಜದ ಅಧ್ಯಕ್ಷೆ ಸೀಮಾ, ಪುಷ್ಪಲತಾ, ಬೋಧಕ ಬೋಧಕೇತರ ವೃಂದ ಇದ್ದರು.

# ಅನುಮತಿ ಪಡೆಯದೆ ನಡೆಸುತ್ತಿರುವ ಶಾಲೆ ವಿರುದ್ಧ ಪ್ರತಿಭಟನೆ



ನಂಜನಗೂಡಿನ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿದ್ಯಾರ್ಥಿಗಳ ಪೋಷಕರು ಮಾತನಾಡುತ್ತಿರುವುದು.

ನಂಜನಗೂಡು, ಡಿ.12– ಅನುಮತಿಯನ್ನು ಪಡೆಯದೆ ಕಾನೂನು ಬಾಹಿರವಾಗಿ ಶಾಲೆಯನ್ನು ಮುನ್ನಡೆಸುವ ಮೂಲಕ ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿರುವ ತಾಲೂಕಿನ ಹುಣಸನಾಳು ಗ್ರಾಮದ ಬಳಿಯಿರುವ ಗೋಕುಲಂ ಇಂಟರ್ನ್ಯಾಷನಲ್, ಶಾಲೆಯ ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳ ಪೋಷಕರು ಸೇರಿ ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ ಎಂದು ಎಂ.ಡಿ.ಬಾಲರಾಜು ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮೊದಲು ಗಾರ್ಡನ್ ಏಂಜಲ್ಸ್ ಎಂಬ ಹೆಸರಿನಿಂದ ಶಾಲೆಯನ್ನು ನಡೆಸಲಾಗುತ್ತಿತ್ತು, ನಂತರ ಗೋಕುಲಂ ಇಂಟರ್ನ್ಯಾಷನಲ್ ಶಾಲೆಯ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿದ್ದು, ಶಾಲೆಯಲ್ಲಿ ಶಿಕ್ಷಣ ಇಲಾಖೆಯಿಂದ ಅನುಮತಿಯನ್ನು ಪಡೆಯದೆ ಶಾಲೆಯನ್ನು ನಡೆಸಲಾಗುತ್ತಿದೆ, ಜೊತೆಗೆ ರಾಜ್ಯ ಪಠ್ಯ ಕ್ರಮಕ್ಕೆ ಅನುಮತಿಯನ್ನು ಪಡೆದು ಶಿಕ್ಷಣ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿ ಐಸಿಎಸ್ಸಿ ಪಠ್ಯಕ್ರಮಗಳನ್ನು ಬೋಧಿಸುವ ಮೂಲಕ ಪೋಷಕರನ್ನು ದಿಕ್ಕು ತಪ್ಪಿಸಿ ಹಗಲು ದರೋಡೆ ನಡೆಸುತ್ತಿದ್ದಾರೆ ಎಂದು ಅವರು ದೂರಿದರು.

ಅಲ್ಲದೆ ಸರ್ಕಾರ ನಿಗದಿ ಮಾಡಿರುವ ಶುಲ್ಕಕ್ಕಿಂತ ಸುಮಾರು 30, ಸಾವಿರದಷ್ಟು ಹೆಚ್ಚುವರಿಯಾಗಿ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ, ಜೊತೆಗೆ 6ನೇ ತರಗತಿಗೆ ಅನುಮತಿಯನ್ನು ಪಡೆಯದೆ ಶಾಲೆಯನ್ನು ಮುನ್ನಡೆಸುವ ಮೂಲಕ ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿದೆ, ಶಾಲೆಯ ಈ ದುರಾವಸ್ಥೆಯ ವಿರುದ್ಧ ಪೋಷಕರು ಸೇರಿ ಬೃಹತ್ ಪ್ರತಿಭಟನೆ ನಡೆಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ದೂರು ನೀಡಲಾಗಿತ್ತು, ಡಿಡಿಪಿಐ ಜವರೇಗೌಡರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಶಾಲೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದ್ದರು. ಸಹ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಯ ಆಡಳಿತ ಮಂಡಳಿಯವರ ಜೊತೆ ಶಾಮೀಲಾಗಿ ಶಾಲೆಯ ಆಡಳಿತ ಮಂಡಳಿಗೆ ಸಹಕಾರ ನೀಡುತ್ತಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಿದ್ಯಾರ್ಥಿಗಳ ಪೋಷಕರಾದ ಪವಿತ್ರ ಕುಮಾರ್, ಪ್ರಶಾಂತ್, ಸಿದ್ದರಾಜು, ಮಹೇಶ್, ಅಮರ್, ಗಿರೀಶ್, ಅಶೋಕ್, ಕುಮಾರ್, ಮಂಜುನಾಥ್, ವೆಂಕಟರಾಮಯ್ಯ, ಪರಶಿವಮೂರ್ತಿ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

# ಅನಧಿಕೃತವಾಗಿ 6ನೇ ತರಗತಿಗೆ ದಾಖಲಾತಿ

## ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಲು ಬಿಇಒ ಸೂಚನೆ

**ನಂಜನಗೂಡು:** ತಾಲೂಕಿನ ಹುಣಸನಾಳು ಗ್ರಾಮದ ಬಳಿ ಇರುವ ಗೋಕುಲಂ ಇಂಟರ್ನ್ಯಾಷನಲ್ ಶಾಲೆಯ ಆಡಳಿತ ಮಂಡಳಿಯವರು 2025–26ನೇ ಸಾಲಿನಲ್ಲಿ ಅನುಮತಿಯನ್ನು ಪಡೆಯದೆ ಅನಧಿಕೃತವಾಗಿ 6ನೇ ತರಗತಿಗೆ ದಾಖಲಾತಿ ಮಾಡಿಕೊಂಡಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳ ಪೋಷಕರು ಕೂಡಲೇ ಶಾಲೆಯಿಂದ ವರ್ಗಾವಣೆ ಪತ್ರವನ್ನು ಪಡೆದು ಬೇರೊಂದು ಅಧಿಕೃತ ಶಾಲೆಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡುವಂತೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ತಿಳಿಸಿದ್ದಾರೆ.

ಗೋಕುಲಂ ಇಂಟರ್ನ್ಯಾಷನಲ್ ಶಾಲೆಯು ಶಿಕ್ಷಣ ಇಲಾಖೆಯ ಗಮನಕ್ಕೆ ತಾರದೆ ಹಾಗೂ ನಿಯಮಾನುಸಾರ ಇಲಾಖೆಯ ಪೂರ್ವಾನುಮತಿಯನ್ನು ಪಡೆಯದೆ ಪೋಷಕರಿಗೆ ತಪ್ಪು ಮಾಹಿತಿ ನೀಡಿ ಅನಧಿಕೃತವಾಗಿ ಆರನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿದೆ. ಅನಧಿಕೃತವಾಗಿ ನಡೆಸಲಾಗುತ್ತಿರುವ 6ನೇ ತರಗತಿಯನ್ನು ರದ್ದುಪಡಿಸಿ ಕೂಡಲೇ ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರವನ್ನು ನೀಡುವಂತೆ ಶಾಲೆಯ ಆಡಳಿತ ಮಂಡಳಿಗೆ ಮೂರು ಬಾರಿ ನೋಟಿಸ್ ಜಾರಿ ಮಾಡಲಾಗಿದೆ ಆದರೂ ಸಹ ಶಾಲಾ ಆಡಳಿತ ಮಂಡಳಿ ಇಲಾಖೆಯ ಆದೇಶವನ್ನು ಪಾಲಿಸಿರುವುದಿಲ್ಲ, ಆದ್ದರಿಂದ ವಿದ್ಯಾರ್ಥಿಗಳ ಪೋಷಕರು ನಿಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದಾಗಿ ಕೂಡಲೇ ಶಾಲೆಯಿಂದ ವರ್ಗಾವಣೆ ಪತ್ರವನ್ನು ಪಡೆದು ಸಮೀಪದ ಬೇರೊಂದು ಅಧಿಕೃತ ಶಾಲೆಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಬೇಕು ಎಂದು ಕೋರಿದ್ದಾರೆ.

# ಗುಳುವಿನ ಅತ್ತಿಗುಪ್ಪೆ ಗ್ರಾಮದ ಡೇರಿ ಜೆಡಿಎಸ್ ತೆಕ್ಕೆಗೆ

## ಅಧ್ಯಕ್ಷರಾಗಿ ಕಾಂತೇಗೌಡ, ಉಪಾಧ್ಯಕ್ಷರಾಗಿ ರವಿಗೌಡ ಆಯ್ಕೆ



ಗುಳುವಿನ ಅತ್ತಿಗುಪ್ಪೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತರಾದ ಕಾಂತೇಗೌಡ ಹಾಗೂ ಉಪಾಧ್ಯಕ್ಷರಾಗಿ ರವಿಗೌಡ ಅವಿರೋಧವಾಗಿ ಆಯ್ಕೆಯಾದರು.


ಭೇರ್ಯ, ಡಿ.12– ಗುಳುವಿನ ಅತ್ತಿಗುಪ್ಪೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತರಾದ ಕಾಂತೇಗೌಡ ಹಾಗೂ ಉಪಾಧ್ಯಕ್ಷರಾಗಿ ರವಿಗೌಡ ಅವಿರೋಧವಾಗಿ ಆಯ್ಕೆಯಾದರು.

ಇಂದು ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂತೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರವಿಗೌಡ ಮಾತ್ರ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರು ಕೂಡ ನಾಮ ಪತ್ರ ಸಲ್ಲಿದ ಕಾರಣದಿಂದ ಅವಿರೋಧವಾಗಿ ಆಯ್ಕೆಯನ್ನು ಚುನಾವಣಾಧಿಕಾರಿ ಡೈರಿಯ ಕಾರ್ಯದರ್ಶಿ ಪ್ರಸನ್ನ ಪ್ರಕಟಿಸಿದರು. ಸಿಬ್ಬಂದಿಗಳಾದ ಸುರೇಶ್, ಮಹದೇವ್, ಆದಿ ಸಹಕಾರ ನೀಡಿದರು.

ಇದಕ್ಕೂ ಮೊದಲು ಇತ್ತೀಚೆಗೆ 2025–30 ನೇ ಸಾಲಿನ ನೂತನ ಆಡಳಿತ ಮಂಡಳಿಗೆ 11 ಮಂದಿ ನಿರ್ದೇಶಕರಾಗಿ ಆಯ್ಕೆಯಾದ ಕಾಂತೇಗೌಡ, ಮಾದೇಗೌಡ, ರವಿಗೌಡ, ಸ್ವಾಮೀಗೌಡ, ಚಂದ್ರೇಗೌಡ, ಮಂಜೇಗೌಡ, ನಿಂಗಾಜಮ್ಮ, ಸುಗುಣ, ಸುನೀತ, ನಂದೀಶ್, ಸುಕನ್ಯ ಇವರುಗಳನ್ನು ಹಾರಹಾಕಿ ಅಭಿನಂದಿಸಲಾಯಿತು. ಬಳಿಕ 11 ಮಂದಿ ನಿರ್ದೇಶಕರು ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಸಭೆಯಲ್ಲಿ ಭಾಗವಹಿಸಿದ್ದರು. ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಕಾಂತೇಗೌಡ, ಉಪಾಧ್ಯಕ್ಷ ರವಿಗೌಡ ಅವರುಗಳನ್ನು ಜೆಡಿಎಸ್ ಪಕ್ಷದಿಂದ ಭಾರೀ ಗಾತ್ರದ ಗುಲಾಬಿ ಹಾರಹಾಕಿ ಅಭಿನಂದಿಸಲಾಯಿತು. ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆ ಲಾಭದಾಯಕವಾಗಿದೆ. ಗ್ರಾಮದಲ್ಲಿರುವ ಹಾಲಿನ ಡೈರಿ ದುಡಿಯುವ ವರ್ಗಕ್ಕೆ ಅಸರೆಯಾಗಿದ್ದು, ಹೈನುಗಾರಿಕೆ ದೊಡ್ಡ ಉದ್ಯಮವಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ಜೆಡಿಎಸ್ ಮುಖಂಡರಾದ ಆರ್ ಸತೀಶ್, ದಿನೇಶ್, ಶ್ರೀನಿವಾಸ್, ಸಿಂಧು, ರತನ್, ಲಿಂಗಪ್ಪ ಮಾಸ್ಟರ್ ಮೊದಲಾದವರು ಇದ್ದರು.

# ಮತದಾರರ ಪಟ್ಟಿಯಲ್ಲಿ ಅಕ್ರಮ ಮತದಾರರ ಹೆಸರು ತೆಗೆಸಿ, ಅರ್ಹರ ಸೇರಿಸಿ



ಪಕ್ಷ ಸಂಘಟನೆಗಾಗಿ ತಿ.ನರಸೀಪುರಕ್ಕೆ ಆಗಮಿಸಿದ ಮೈಸೂರು ಜಿಲ್ಲಾ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಡಿ.12– ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ನುಸುಳಿರುವವರ ಹೆಸರುಗಳನ್ನು ತೆಗೆಸಿ ಅರ್ಹ ಮತ್ತು ಮತದಾನದಿಂದ ವಂಚಿತರಾಗಿರುವವರ ಹೆಸರನ್ನು ಸೇರಿಸುವಂತೆ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ತಿಳಿಸಿದ್ದಾರೆ.

ತಿ.ನರಸೀಪುರ ಬಿಜೆಪಿ ಮಂಡಲದ ವತಿಯಿಂದ ಮಾಜಿ ವಿಧಾನಸಭಾ ಪರಿಷತ್ ಸದಸ್ಯ ಸಿ.ರಮೇಶ್ ನಿವಾಸದಲ್ಲಿ ಟೌನ್ ಮಹಾಶಕ್ತಿ ಕೇಂದ್ರದ ಬಿಎಲ್‌ಎ 2 ನೇಮಕಾತಿ ವಿಚಾರವಾಗಿ ನಡೆದ ಸಭೆಯಲ್ಲಿ ಅವರು ಮಾತನಾಡಿ, ಬಿಎಲ್‌ಎ ಟು ಕಾರ್ಯಕರ್ತರ ಈ ಸಲಹೆ ನೀಡಿದರು.

ಗ್ರಾಮೀಣ ಪ್ರದೇಶ ನಗರ ಪ್ರದೇಶ ಎರಡರಲ್ಲಿ ಇರುವ ಮತದಾರರನ್ನು ಪರಿಶೀಲಿಸಬೇಕು. ಅಂತವರನ್ನು ಅವರು ವಾಸ ಮಾಡುವ ಪ್ರದೇಶದ ಮತದಾರರಿಗೆ ಪಟ್ಟಿಯಲ್ಲಿ ಸೇರಿಸುವಂತೆ ತಿಳುವಳಿಕೆ ನೀಡಬೇಕು ಎಂದರು.

ವಿಧಾನ ಪರಿಸತ್ ಮಾಜಿ ಸದಸ್ಯ ಸಿ. ರಮೇಶ್ ಮಾತನಾಡಿ, ಪಕ್ಷ ಸಂಘಟನೆಯಲ್ಲಿ ಪ್ರಾಮಾಣಿಕ ಕಾರ್ಯಕರ್ತರನ್ನು ಗುರುತಿಸಿ ಸಂಘಟನೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಮತ್ತು ಮುಂಬರುವ ಚುನಾವಣೆಯಲ್ಲಿ ನನ್ನ ಬಿಜೆಪಿ ಕಾರ್ಯಕರ್ತರು ಸೈನಿಕರಂತೆ ಕೆಲಸ ನಿರ್ವಹಿಸಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಅಧಿಕಾರ ಹಿಡಿಯುವ ರೀತಿಯಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದರು.

ಬಿಹಾರದಲ್ಲಿ ನಡೆದ ಚುನಾವಣೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಶಕ್ತಿ ಏನೆಂದು ತೋರಿಸಿದ್ದಾರೆ. ಅದೇ ಮಾದರಿಯಲ್ಲಿ ಸಹ ಕರ್ನಾಟಕದಲ್ಲಿಯೂ ನಮ್ಮ ಕಾರ್ಯಕರ್ತರು ತೋರಿಸಬೇಕು ಎಂದರು. ಈ ಸಭೆಯಲ್ಲಿ ತಿ.ನರಸೀಪುರ ಮಂಡಲ ಅಧ್ಯಕ್ಷ ಶಿವಕುಮಾರ್, ಡಾ. ರೇವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಿಷತ್ ರಾಜ್ ಅರಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಬಿಜೆಪಿ ಹಿರಿಯ ಮುಖಂಡರಾದ ಕರೋಹಟ್ಟಿ ಮಹದೇವಯ್ಯ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಡಾ.ಮಲ್ಲಿಕಾರ್ಜುನ್ ಗೌಡ, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಅನಿಲ್, ತಿ.ನರಸೀಪುರ ಪುರಸಭಾ ಸದಸ್ಯ ಕೆ ಕಿರಣ್, ಮಾಜಿ ತಾಲೂಕು ಪಂಚಾಯತಿ ಸದಸ್ಯ ಬಸವರಾಜ್, ತಿ.ನರಸೀಪುರ ತಾಲೂಕು ಮಂಡಲದ ಬಿಎಲ್‌ಎ 1 ಅಧ್ಯಕ್ಷ ಹೆಬ್ಬೆ ಹುಂಡಿ ಶಿವಕುಮಾರ್, ರೈತ ಮೋರ್ಚಾ ತಾಲೂಕು ಅಧ್ಯಕ್ಷ ಕೆಬ್ಬೆಹುಂಡಿ ಸೋಮಶೇಖರಪ್ಪ, ಬಿಜೆಪಿ ಯುವ ಮುಖಂಡರಾದ ಬೆನಕನಹಳ್ಳಿ ವಿಜಯಕುಮಾರ್, ರಾಜೇಶ್, ಟೌನ್ ಕಾರ್ಯದರ್ಶಿ ರಮೇಶ್, ಟೌನ್ ಅಧ್ಯಕ್ಷ ಕೆ.ನಂಜುಂಡಸ್ವಾಮಿ, ಜಿಲ್ಲಾ ಓಬಿಸಿ ಕಾರ್ಯದರ್ಶಿಗಳಾದ ಕೆ.ಮಾದೇವ ಶೆಟ್ಟಿ, ಟೈಲರ್ ಮಹಾದೇವ, ಕಾರ್ಯಾಲಯ ಕಾರ್ಯದರ್ಶಿ, ರಾಜಶೇಖರ್, ಹಾಜರಿದ್ದರು.

# ಸಂಭ್ರಮಾಚರಣೆಯಲ್ಲಿ ಮಿಂದೆದ್ದ ವಿಶೇಷ ಚೇತನ ಮಕ್ಕಳು

## — ನಿಬ್ಬೆರಗಾದ ಪೋಷಕರು, ಪ್ರೇಕ್ಷಕರು —



ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಶುಕ್ರವಾರ 'ಕಿಡ್ಸ್ ಕಾರ್ನಿವಲ್' ವಿಶೇಷಚೇತನ ಮಕ್ಕಳ ಸಂಭ್ರಮಾಚರಣೆ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.12(ಎಂಕೆ)– ಕುಣಿದು ಕುಪ್ಪಳಿಸಿ, ಸಂಭ್ರಮಿಸಿದ ವಿಶೇಷ ಚೇತನ ಮುದ್ದು ಮಕ್ಕಳ ಕಂಡು ಕಂಬನಿ ಮಿಡಿದ ಪೋಷಕ ಹೃದಯಗಳು... ಚಿತ್ರ ಬಿಡಿಸಿ, ಟಪಾಂಗುಚ್ಚಿ ಸ್ಟೆಪ್ ಹಾಕುತ್ತಾ ಮಸ್ತ್ ಮಜಾ ಮಾಡುವಲ್ಲಿ ನಾವು ಯಾರಿಗೂ ಕಮ್ಮಿ ಇಲ್ಲವೆಂದು ಸಾರಿದ ದೇವರ ಮಕ್ಕಳು...!

ಮೈಸೂರಿನ ಕುವೆಂಪುನಗರದಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮೈಸೂರು ಹೆರಿಟೇಜ್ ರೌಂಡ್ ಟೇಬಲ್–109 ಮತ್ತು ಮೈಸೂರು ಹೆರಿಟೇಜ್ ಲೇಡಿಸ್ ಕ್ಲಬ್–109 ವತಿಯಿಂದ ಆಯೋಜಿಸಿದ್ದ 'ಕಿಡ್ಸ್ ಕಾರ್ನಿವಲ್' ವಿಶೇಷ ಚೇತನ ಮಕ್ಕಳ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪುಟಾಣಿಗಳ ಹರ್ಷೋದ್ಗಾರ ಕಲ್ಯಾಣ ಮಂಟಪದ ಮೂಲೆ ಮೂಲೆಗೂ ಆವರಿಸಿತು.

ಚಾಕೊಲೇಟ್ ಫ್ಲೇವರ್ ಕೇಕ್ ಹಿಡಿದು ಕಾಟನ್ ಕ್ಯಾಂಡಿ ಸವಿಯುತ್ತಾ ಎಂಟ್ರಿಯಾದ ಮೈಸೂರಿನ ವಿವಿಧ ಶಾಲೆಯ ನೂರಾರು ವಿಶೇಷಚೇತನ ಮಕ್ಕಳು, ತಮ್ಮಲ್ಲಿನ ಚಿತ್ರಕಲಾ ಕೌಶಲ್ಯತೆಯ ಪ್ರದರ್ಶನ ನೀಡಿದರು. ಪರ್ವತಗಳ ನಡುವೆ ಸೂರ್ಯನ ಉದಯ ಮತ್ತು ಮುಸ್ಸಂಜೆ ವೇಳೆ ಸೂರ್ಯಾಸ್ತದ ಸುಂದರ ತಾಣದ ಚಿತ್ರಗಳನ್ನು ಬಿಡಿಸಿ ಸೈ ಎನಿಸಿಕೊಂಡರು.

ಹಾಗೆಯೇ ಕಣ್ಣಿನ ತಪಾಸಣೆ ಶಿಬಿರದಲ್ಲೂ ಭಾಗಿಯಾಗಿ ತಮ್ಮ ಕಣ್ಣಿನ ಪರೀಕ್ಷೆ ಮಾಡಿಸಿಕೊಂಡ ಪುಟಾಣಿಗಳು ಕನ್ನಡ, ಹಿಂದಿ ಹಾಗೂ ಇಂಗ್ಲಿಷ್‌ನ ಜಯಪ್ರಿಯ ಟಪಾಂಗುಚ್ಚಿ ಡಿಜೆ ಹಾಡುಗಳ ನಾದಕ್ಕೆ ಬಲೂನ್‌ಗಳನ್ನು ಹಿಡಿದು ಕುಣಿದು ಕುಪ್ಪಳಿಸಿದರು.

ನಿಷ್ಕಲ್ಮಷ ಪುಟಾಣಿ ಹೃದಯಗಳ ಸಡಗರ–ಸಂಭ್ರಮ ಕಂಡು ಪೋಷಕರು, ಸಭಿಕರು ಆನಂದದ ಕಂಬನಿ ಮಿಡಿದರು.

ಗೊಂಬೆಗಳ ವೇಷ ತೊಟ್ಟು ಪುಟಾಣಿಗಳ ಸೆಳೆದ ವೇಷಧಾರಿಗಳು ಹೆಜ್ಜೆ ಹಾಕಿ ಗಮನ ಸೆಳೆದರು. ಅಲ್ಲದೆ ಮಕ್ಕಳ ಮುಖಕ್ಕೆ ಅವರವರ ಇಷ್ಟದಂತೆ ಚಿತ್ರ ಬಿಡಿಸಿ, ಆಕರ್ಷಕವಾಗಿ ಕಾಣುವಂತೆ ಮಾಡಲಾಯಿತು. ನಂತರ ಮಧ್ಯಾಹ್ನದ ಊಟ ಸವಿದು ಕೆಲ ಗೇಮ್ಸ್‌ಗಳಲ್ಲಿ ಭಾಗವಹಿಸಿದ ಪುಟಾಣಿಗಳು ಆನಂದದ ಅಲೆಯಲ್ಲಿ ತೇಲಾಡಿದರು.

**ನಗುವಿಗೆ ನಷ್ಟವಿಲ್ಲ:** ಇದೇ ವೇಳೆ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಇದೊಂದು ಸುಂದರ ಕಾರ್ಯಕ್ರಮ. ಮಕ್ಕಳ ಉಡುಗೆ–ತೊಡುಗೆ ಆಕರ್ಷಣೀಯವಾಗಿದೆ. ನಗುವನ್ನೇ ಮರೆತಿದ್ದೇವೆ. ಆದರೆ, ಈ ಕಾರ್ಯಕ್ರಮದಲ್ಲಿ ನಗುವೇ ತುಂಬಿದೆ. ಮಕ್ಕಳು ಇರುವ ಜಾಗದಲ್ಲಿ ನಗುವಿಗೆ ನಷ್ಟವಿಲ್ಲ ಎಂದರು.

**ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಬೇಕು:** ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಕೆ.ಪರಮೇಶ್ ಮಾತನಾಡಿ, ಮಕ್ಕಳಲ್ಲಿನ ಸಹಜ ಪ್ರತಿಭೆಯನ್ನು ಗುರುತಿಸಿ, ಪ್ರತಿಭೆಯೊಂದಿಗೆ ಅವರನ್ನು ಬೆಳೆಸುವ ಕಾರ್ಯವನ್ನು ಪೋಷಕರು ಮಾಡಬೇಕು. ಮಕ್ಕಳು ಹತ್ತಾರು ಸಂಗತಿಗಳನ್ನು ಕಲಿಯುತ್ತಾರೆ. ಹಾಗಾಗಿ ಮಕ್ಕಳು ಮುಕ್ತವಾಗಿ ಎಲ್ಲರೊಂದಿಗೆ ಬೆರೆಯುವಂತೆ ಮಾಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಇನ್ನಷ್ಟು ಆಗಬೇಕಿದೆ ಎಂದರು.

> ವಿಶೇಷಚೇತನ ಮಕ್ಕಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಸಾಕಷ್ಟು ಉದಾಹರಣೆಗಳಿವೆ. ಅಂತಹ ಸಾಧಕರನ್ನು ಆದರ್ಶವಾಗಿಟ್ಟುಕೊಂಡು ಸಾಧಕರಾಗಿ. ಇತರರಿಗೆ ಪ್ರೇರಣೆಯಾಗಿ. ದೇಶಕ್ಕೆ ಆಸ್ತಿಯಾಗಿ.
> - ಸೀಮಾ ಲಾಟ್ಕರ್,
> ಆಯುಕ್ತರು, ಮೈಸೂರು ನಗರ ಪೊಲೀಸ್

**ವಿಶೇಷ ಕಾರ್ಯಕ್ರಮ:** ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ಮುಖ್ಯಸ್ಥರೂ ಆದ ಉದ್ಯಮಿ ಶಿವಕುಮಾರ್ ಮಾತನಾಡಿ, ವಿಶೇಷ ಮಕ್ಕಳ ಸಂಭ್ರಮಾಚರಣೆಯ ಈ ಕಾರ್ಯಕ್ರಮ ವಿಶೇಷವಾಗಿದೆ. ಮಕ್ಕಳನ್ನು ನೋಡುತ್ತಿದ್ದರೆ ಖುಷಿಯಾಗುತ್ತದೆ. ಯಾವುದೇ ಭೇದ–ಭಾವವಿಲ್ಲದ, ಕಲ್ಮಶವಿಲ್ಲದ ಮಕ್ಕಳ ಚಟುವಟಿಕೆಗಳು ನಮಗೆ ಸ್ಫೂರ್ತಿ ನೀಡುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್.ರಾಘವೇಂದ್ರ, ಕಲ್ಯಾಣ ಮಂಟಪದ ಮಾಲೀಕ ಅರುಣ್ ಗೌಡ, ದಿಯಾ ಫೌಂಡೇಶನ್ ಟ್ರಸ್ಟಿ ನಮ್ರತಾ ಶೆಣೈ, ಲೇಡಿಸ್ ಸರ್ಕಲ್ ಏರಿಯಾ–13 ಅಧ್ಯಕ್ಷೆ ನಾಗಶ್ರೀ ನಿಖಿಲೇಶ್, ಕಿಡ್ಸ್ ಕಾರ್ನಿವಲ್ ಆಯೋಜನೆ ಅಧ್ಯಕ್ಷ ಸಿದ್ದೇಶ್, ಕಾರ್ಯದರ್ಶಿ ವಿನಾಯಕ್, ಖಜಾಂಚಿ ಶರದ್, ಮೈಸೂರು ಹೆರಿಟೇಜ್ ರೌಂಡ್ ಟೇಬಲ್ ಸಲಹೆಗಾರ ಶರತ್, ಹರಿಶ್ ಶೆಣೈ ಮತ್ತಿತರರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಹಾಸೇನಾ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಡೆವಿಲ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಡೆವಿಲ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಡೆವಿಲ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಖಂಡ–2 (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಡೆವಿಲ್ (ಕ) | 3 ಪ್ರದರ್ಶನಗಳು |
| **ಲಿಡೋ** | |
| ಅಖಂಡ–2 (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಕಾಂತಾರ–2 (ಕ) | 4 ಪ್ರದರ್ಶನಗಳು |

## ಇಂದು 'ಕೌಟಿಲ್ಯ ಸಾಂಸ್ಕೃತಿಕ ಪರ್ವ' ಕಾರ್ಯಕ್ರಮ

ಮೈಸೂರು, ಡಿ.12(ಜಿಎ)–ಮೈಸೂರಿನ ಕನಕದಾಸ ನಗರದಲ್ಲಿರುವ ಕೌಟಿಲ್ಯ ವಿದ್ಯಾಲಯದ ವಾರ್ಷಿಕೋತ್ಸವದ ಅಂಗವಾಗಿ ಡಿ. 13ರಂದು ಬೆಳಗ್ಗೆ 9ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ವಿದ್ಯಾರ್ಥಿಗಳಿಗಾಗಿ ಕಿರಿಯರ ಕೀರ್ತಿಗೆ ಹಿರಿಯರ ಸ್ಫೂರ್ತಿ 'ಕೌಟಿಲ್ಯ ಸಾಂಸ್ಕೃತಿಕ ಪರ್ವ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ. ಜಯಶ್ರೀ ಮುರಳೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೈಗಾರಿಕೋದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಆರ್‌ವಿ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ರಾಮ್ ಕುಮಾರ್ ಕಕನಿ ಅತಿಥಿಗಳಾಗಿರುವರು. ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಟಿ. ಬಾಬು ಅಧ್ಯಕ್ಷತೆ ವಹಿಸುವರು ಎಂದರು.

ಕಾರ್ಯಕ್ರಮದಲ್ಲಿ ಹಿರಿಯರು ತಮ್ಮ ಮಕ್ಕಳೊಂದಿಗೆ ಹೆಜ್ಜೆ ಹಾಕುವುದು ವಿಶೇಷವಾಗಿದೆ. ಪ್ರಮುಖವಾಗಿ ವಿದ್ಯಾರ್ಥಿಗಳು ಸಾಲುಮರದ ತಿಮ್ಮಕ್ಕ, ಆಪರೇಷನ್ ಸಿಂಧೂರ್ ಸೇರಿದಂತೆ ಅನೇಕ ವಿಷಯಗಳ ಕುರಿತು ವಿಶೇಷ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ನಂತರ ಮಧ್ಯಾಹ್ನ 2.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟಿಲ್, ಪರಿಸರ ವಾದಿ ರೇವತಿ ಕಾಮತ್, ಮಾಜಿ ಎಂಎಲ್‌ಸಿ ಅಶೋಕ್ ಖೇಣಿ, ಆರ್‌ವಿ ಡೆಂಟಲ್ ಕಾಲೇಜಿನ ಅಧ್ಯಕ್ಷ ಎಂ.ಎಸ್.ಪ್ರಕಾಶ್ ಬಾಬು ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಟಿ.ಬಾಬು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾ ಸಂಸ್ಥೆಯಲ್ಲಿ ಪ್ರಶಂಸನೀಯ ಸೇವೆ ಸಲ್ಲಿಸಿದ ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ಕೌಟಿಲ್ಯ ವಿದ್ಯಾರತ್ನ ಪ್ರಶಸ್ತಿ ಪ್ರದಾನ, ಕಳೆದ ಸಾಲಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಕಾರ್ಯಕ್ರಮ ಸಹಾ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೊಹಮ್ಮದ್ ಗೌಸ್, ಸಮ್ಯುದ್ವತ ಉಪಸ್ಥಿತರಿದ್ದರು.

## ಇಂದಿನಿಂದ 'ಮಾಗಿ ಬೀಜ ಸಂಭ್ರಮ'

### ಕಡಲೆಕಾಯಿ, ಅವರೆಕಾಯಿ, ಕೆಂಪಕ್ಕಿ ಪರಿಷೆ

ಮೈಸೂರು, ಡಿ.12(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ, ಸಹಜ ಸೀಡ್ಸ್ ವತಿಯಿಂದ ನಾಳೆ(ಡಿ.13)ಯಿಂದ ಎರಡು ದಿನಗಳ 'ಮಾಗಿ ಬೀಜ ಸಂಭ್ರಮ'(ಕಡಲೆಕಾಯಿ, ಅವರೆಕಾಯಿ ಮತ್ತು ಕೆಂಪಕ್ಕಿ ಪರಿಷೆ) ಹಮ್ಮಿಕೊಳ್ಳಲಾಗಿದೆ.

ಮೇಳದಲ್ಲಿ ಅವರೆಕಾಯಿ, ತೊಗರಿಕಾಯಿ, ಹಸಿ ಕಡಲೆಕಾಯಿ, ಪರ್ಪಲ್ ಯಾಮ್ ಗೆಡ್ಡೆ, ಕೆಂಪು ಮುಸುಕಿನ ಜೋಳ, ಬಳ್ಳಿ ಆಲೂಗೆಡ್ಡೆ ಇನ್ನಿತರ ಬೆಳೆಗಳು ಮಾರಾಟ ಮತ್ತು ಪ್ರದರ್ಶನ ಇರಲಿದೆ. ಕ್ಯಾರೆಟ್, ಕಲ್ಲಂಗಡಿ, ಕರ್ಬೂಜ, ಬೀಟ್ ರೂಟ್, ಹೂ ಕೋಸು, ಎಲೆ ಕೋಸು, ಲೆಟ್ಯೂಸ್ ಮೊದಲಾದ ಚಳಿಗಾಲದ ತರಕಾರಿ ಬೆಳೆಗಳ ಬೀಜಗಳು, ಸಿದ್ಧ ಸಣ್ಣ ಮತ್ತು ನವರ ಅಕ್ಕಿ, ಜಗಳೂರು ರಾಗಿ ಮೊದಲಾದ ದೇಸಿ ತಳಿಗಳ ಮಾರಾಟವೂ ಇರಲಿದೆ.

ಹಾಗೆಯೇ ಅವರೆಕಾಳಿನ ಬಗೆ ಬಗೆಯ ಅಡುಗೆಗಳನ್ನು ಉಣಬಡಿಸಲು ಆಹಾರ ಮಳಿಗೆ ಇರಲಿದ್ದು, ಅವರೆಕಾಳು ಉಪ್ಪಿಟ್ಟು, ಅವರೆಕಾಳು ದೋಸೆ, ಮುದ್ದೆ ಮತ್ತು ಹಿಚುಕಿದ ಅವರೆಕಾಳು ಸಾಂಬಾರ್, ಅವರೆಕಾಳು ಬಾತ್, ಅವರೆಕಾಳಿನ ಜಾಮೂನು ಸವಿಯಬಹುದು. ಅಲ್ಲದೆ ಸೋರೆಯಿಂದ ಮಾಡಿದ ಕ್ರಿಸ್ ಮಸ್ ಅಲಂಕಾರಕ ವಸ್ತುಗಳು, ಸಿರಿಧಾನ್ಯ ಮತ್ತು ಸಾವಯವ ಪದಾರ್ಥಗಳು, ಮೌಲ್ಯವರ್ಧಿತ ಉತ್ಪನ್ನಗಳು, ಶೃಂಗಾರ ವರ್ಧಕಗಳು, ಕೋತಿ ಓಡಿಸುವ ಬಂದೂಕು, ಬಿದಿರಿನ ಉತ್ಪನ್ನಗಳು ಮತ್ತು ದೇಸಿ ಅಕ್ಕಿಗಳು ಮೇಳದಲ್ಲಿ ದೊರೆಯಲಿವೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪತ್ರ ಬರಹಗಾರರ ಪ್ರತಿಭಟನೆ




ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಮುಂದೆ ಪತ್ರ ಬರಹಗಾರರು ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.12(ಎಂಟಿವೈ)– ಪ್ರತ್ಯೇಕ ಲಾಗಿನ್ ನೀಡಿ, ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ನೋಂದಣಿಯಲ್ಲಿ ಆಗುತ್ತಿರುವ ತಾಂತ್ರಿಕ ಸಮಸ್ಯೆ ಬಗೆಹರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರು ನಗರ ಮತ್ತು ತಾಲೂಕು ಪತ್ರ ಬರಹಗಾರರ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಆವರಣದಲ್ಲಿರುವ ಉಪನೋಂದಣಾಧಿಕಾರಿ ಕಚೇರಿ ಹಾಗೂ ತಾಲೂಕು ತಹಶೀಲ್ದಾರ್ ಕಚೇರಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದ ಪತ್ರ ಬರಹಗಾರರು, ಮುದ್ರಾಂಕ ಹಾಗೂ ನೋಂದಣಿ ಇಲಾಖೆಯು ಈಗಾಗಲೇ ಕಾವೇರಿ 2.0 ತಂತ್ರಾಂಶದ ಮೂಲಕ ದಾಖಲಾತಿಗಳನ್ನು ರವಾನಿಸುವ ಬಗ್ಗೆ ಕ್ರಮ ಕೈಗೊಂಡಿದೆ. ತಂತ್ರಾಂಶದಲ್ಲಿ ಸುಧಾರಣೆ ತರಲು ಹಲವಾರು ಬದಲಾವಣೆ ತರಲಾಗಿದೆ. ಈ ಸುಧಾರಣೆ ಗಳಿಂದಾಗಿ ಜನಸಾಮಾನ್ಯರ ನೋಂದಣಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ತಾಂತ್ರಿಕ ಸಮಸ್ಯೆಯಿಂದ ಪತ್ರ ಬರಹಗಾರರು ಜನ ಸಾಮಾನ್ಯರಿಗೆ ಸಮರ್ಪಕ ಸೇವೆ ಒದಗಿಸಲು ಕಷ್ಟವಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ನೋಂದಣಿ ಪ್ರಕ್ರಿಯೆಯಲ್ಲಿ ವಿಭಾಗ ಪತ್ರ, ದಾನಪತ್ರ ಹಾಗೂ ಇನ್ನಿತರೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಜನ ಸಾಮಾನ್ಯರು ತಮ್ಮ ಕುಟುಂಬದ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಸುಧಾರಣೆಯ ನೆಪದಲ್ಲಿ ಪತ್ರಬರಹಗಾರರು, ವಕೀಲರು ಹಾಗೂ ಜನಸಾಮಾನ್ಯರಿಗೆ ಆಗುತ್ತಿರುವ ಸಮಸ್ಯೆಯನ್ನು ಕೂಡಲೇ ಇತ್ಯರ್ಥ ಮಾಡಬೇಕು. ತಾಂತ್ರಿಕ ಸಮಸ್ಯೆ, ಸುಧಾರಣೆಯ ಬಗ್ಗೆ ಇಲಾಖೆ ಯಿಂದ ರಹದಾರಿ ಪಡೆದಿರುವ ಪತ್ರ ಬರಹಗಾರರಿಗೆ ತೊಂದರೆಯಾಗುತ್ತಿದೆ. ಕೂಡಲೇ ಜನಸಾಮಾನ್ಯರ ನೋಂದಣಿ ಪ್ರಕ್ರಿಯೆ ಹಾಗೂ ಪತ್ರ ಬರಹಗಾರರು ಸುಲಲಿತವಾಗಿ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ನಗರ ಹಾಗೂ ತಾಲೂಕು ಪತ್ರಬರಹಗಾರರ ಒಕ್ಕೂಟದ ಅಧ್ಯಕ್ಷ ನಿಸಾರ್ ಅಹಮದ್ ಖಾನ್, ಉಪಾಧ್ಯಕ್ಷ ಎಂ.ಎಸ್.ಧನಂಜಯ್, ಕಾರ್ಯದರ್ಶಿ ಕೆಆರ್.ಉದಯ್ ಕುಮಾರ್, ಖಜಾಂಜಿ ಎಂ.ಎಸ್.ನರಸಿಂಹ ಮೂರ್ತಿ, ಸಂಚಾಲಕ ಎಂ.ಗಣೇಶ್, ನಿರ್ದೇಶಕರುಗಳಾದ ಕೆಆರ್. ಸತ್ಯನಾರಾಯಣ್, ಎಂ.ಎನ್. ದೇವರಾಜು, ನಾಗಭೂಷಣ ಆರಾಧ್ಯ ಮಹಾದೇವ್, ಕುಮಾರ್, ಪಣಿರಾಜ್, ಚಂದ್ರಶೇಖರ್, ದಿನೇಶ್ ಕುಮಾರ್, ಎಸ್.ಎಸ್.ವೇಣು, ಜಯಲಕ್ಷ್ಮೀ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

## ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕುರಿತು ತರಬೇತಿ ಕಾರ್ಯಕ್ರಮ



ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಡಿ. 12– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿಸಿಎ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಬೆಂಗಳೂರಿನ ಐಬಿಎಂ ಟ್ರೈನರ್ ದಿಲನ್ ಸೋಮಣ್ಣ ಉದ್ಘಾಟಿಸಿದರು. ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ ಪ್ರಾಮುಖ್ಯತೆಯ ಬಗ್ಗೆ ತರಬೇತಿಯಲ್ಲಿ ತಿಳಿಸಿಕೊಟ್ಟರು. ಇದಕ್ಕೆ ಸಂಬಂಧಿಸಿದಂತೆ Microsoft Azure Tools ಬಗ್ಗೆ ತಿಳಿಸಿಕೊಟ್ಟರು. ಈ ನಾಲ್ಕು ದಿನಗಳ ತರಬೇತಿಯಲ್ಲಿ Azure Services, Foundry Models ಬಗ್ಗೆ ಮಾಹಿತಿ ನೀಡಲಾಯಿತು. Azure ನಲ್ಲಿ AI ಏಜೆಂಟ್‌ಗಳನ್ನು ತಯಾರು ಮಾಡುವ ಬಗ್ಗೆ, ಕಂಪ್ಯೂಟರ್ ವಿಷನ್ ಸಲ್ಯೂಷನ್‌ಗಳು, Azure ಬಳಸಿ ನ್ಯಾಚುರಲ್ ಲಾಂಗ್ವೇಜ್ ಪ್ರೋಸೆಸ್ಸಿಂಗ್‌ನ (NLP) ಪರಿಹಾರಗಳು ಈ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಕೌಶಲ್ಯಗಳನ್ನು ಕಲಿಸಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಐಸಿಟಿ ಅಕಾಡೆಮಿ ಹಾಗೂ ಐಬಿಎಂನ ಸಹಯೋಗದೊಂದಿಗೆ ಆಯೋಜಿಸಿರುವ ಈ ಕಾರ್ಯಕ್ರಮ ಕೃತಕ ಬುದ್ಧಿಮತ್ತೆಯ ಕೌಶಲ್ಯವನ್ನು ವಿದ್ಯಾರ್ಥಿಗಳು ಕಲಿತು ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ವಿವರಿಸಿದರು. ಇತ್ತೀಚಿನ ದಿನಗಳಲ್ಲಿ ಎಐ ತಂತ್ರಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಇರುವುದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಗಳಿಸಿಕೊಳ್ಳಲು ವಿಫುಲ ಅವಕಾಶವಿದ್ದು, ಕಾಲೇಜು ಇದಕ್ಕೆ ಅವಕಾಶವನ್ನು ಕಲ್ಪಿಸಿದೆ ಎಂದು ತಿಳಿಸಿದರು.

ಆಡಳಿತ ನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್ ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಎಐನ ಬಳಕೆ ಅಪಾರವಾಗಿದ್ದು, ಜೀವ ವಿಜ್ಞಾನ ಕ್ಷೇತ್ರದಲ್ಲಿಯೂ ಸಹ ಅದರ ಪ್ರಾಮುಖ್ಯತೆಯನ್ನು ತಿಳಿಸಿ ಹೇಳುತ್ತಾ, ವಿದ್ಯಾರ್ಥಿಗಳಿಗೆ ಇದೊಂದು ಉತ್ತಮ ಅವಕಾಶವಾಗಿದ್ದು, ಇದರ ಸದ್ಬಳಕೆಯನ್ನು ವಿದ್ಯಾರ್ಥಿಗಳು ಮಾಡಿಕೊಳ್ಳಿ ಎಂದು ಹೇಳಿದರು.

ಬಿಸಿಎ ವಿಭಾಗದ ಮುಖ್ಯಸ್ಥ ಎ ರಾಧೇಶ್, ಶ್ರೀಮತಿ ಅಪೂರ್ವ ಡಿ, ಶ್ರೀಮತಿ ನಿತ್ಯಶ್ರೀ, ಶ್ರೀಮತಿ ಪ್ರಿಯ ವಿ ಎನ್, ಅನ್‌ಮೋಲ್ ಉಪಸ್ಥಿತರಿದ್ದರು.

## 30ಕ್ಕೂ ಹೆಚ್ಚು ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ



ವಾರ್ಡ್ ನಂ.8ರ 30 ಕ್ಕೂ ಹೆಚ್ಚು ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಮೈಸೂರು, ಡಿ. 12– ಮೈಸೂರು ಮಹಾನಗರ ಪಾಲಿಕೆ, ನಾಗರಿಕ ಸೇವಾ ಕೇಂದ್ರ, ಎಂಸಿಸಿ ವಲಯ ಕಚೇರಿ 7 ವತಿಯಿಂದ ಎಂಸಿಸಿ ವಾರ್ಡ್ ನಂ.8ರ ಹನುಮಂತ ನಗರ, ಬನ್ನಿಮಂಟಪ, ಹುಡ್ಕೋ, ವಂದೇ ಮಾತರಂ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ 30ಕ್ಕೂ ಹೆಚ್ಚು ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಈ ವೇಳೆ ನಗರಪಾಲಿಕೆ ವಲಯ ಕಚೇರಿ 7ರ ಸಿಬ್ಬಂದಿ ಸೋಮು ಮತ್ತು ಸಮಾಜ ಸೇವಕ ಮೊಹಮ್ಮದ್ ಖಲೀಲ್–ಉರ್–ರೆಹಮಾನ್, ಹಾರೂನ್ ರಶೀದ್, ಯೂನಿಕ್ ಯೂತ್ ಫೌಂಡೇಶನ್, ರಾಜೀವ್ ನಗರದ ಅಧ್ಯಕ್ಷ ಮುದಾಸಿರ್ ಅಲಿಖಾನ್, ಕಾರ್ಯದರ್ಶಿ ಮುಜಾಕಿರ್ ಅಲಿಖಾನ್ (ವಕೀಲರು), ಡಿಸಿಸಿ ಸದಸ್ಯರಾದ ಮಜೀದ್ ಅಹ್ಮದ್, ಮೆಹಬೂಬ್ ಖಾದ್ರಿ, ಅಜೀಜ್ ಸೇಠ್ ನಗರ, ಡಿಸಿಸಿ ಅಲ್ಪಸಂಖ್ಯಾತ ವಿಭಾಗದ ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಮೊಹಮ್ಮದ್ ನವಾಜ್ ಷರೀಫ್, ಸಮಾಜ ಸೇವಕ ಷಣ್ಮುಗಂ, ಸಲೀಂ ಅಹ್ಮದ್ ಮತ್ತಿತರರು ಉಪಸ್ಥಿತರಿದ್ದರು.

## ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ ದೇವಸ್ಥಾನಗಳ ಅಭಿವೃದ್ಧಿಗಾಗಿ 50.99 ಕೋಟಿ ರೂ. ಬಿಡುಗಡೆ

### ವಿಧಾನ ಪರಿಷತ್‌ನಲ್ಲಿ ಎಂಎಲ್‌ಸಿ ಕೆ.ವಿವೇಕಾನಂದ ಪ್ರಶ್ನೆಗೆ ಮುಜರಾಯಿ ಸಚಿವರ ಉತ್ತರ



ಕೆ.ವಿವೇಕಾನಂದ

ಮೈಸೂರು, ಡಿ.12(ಜಿಎ)– ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿರುವ ದೇವಸ್ಥಾನಗಳ ಅಭಿವೃದ್ಧಿಗಾಗಿ 50.99 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗರೆಡ್ಡಿ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ವಿಧಾನ ಪರಿಷತ್ ಕಲಾಪದಲ್ಲಿ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿಗೆ ಸರ್ಕಾರ 2023ರಿಂದ 2025ನೇ ವರೆಗೂ ಎಷ್ಟು ಅನುದಾನ ನೀಡಿದೆ ಎಂಬ ಪ್ರಶ್ನೆಗೆ ಮುಜರಾಯಿ ಸಚಿವರು ಉತ್ತರಿಸಿದರು. 2023–24ರಲ್ಲಿ ಮೈಸೂರು ಜಿಲ್ಲೆಗೆ 6.43 ಕೋಟಿ ರೂ., ಮಂಡ್ಯ ಜಿಲ್ಲೆಗೆ 2.69 ಕೋಟಿ ರೂ., ಹಾಸನ 2.78 ಕೋಟಿ ರೂ., ಚಾಮರಾಜನಗರಕ್ಕೆ 1.7 ಕೋಟಿ ರೂ ಸೇರಿದಂತೆ 12.98 ಕೋಟಿ ರೂ. ನೀಡಲಾಗಿದೆ.

2024–25ರಲ್ಲಿ ಮೈಸೂರು ಜಿಲ್ಲೆಗೆ 19.67 ಕೋಟಿ ರೂ., ಮಂಡ್ಯ ಜಿಲ್ಲೆಗೆ 6.85 ಕೋಟಿ ರೂ., ಹಾಸನ 5.4 ಕೋಟಿ ರೂ., ಚಾಮರಾಜನಗರ 31.2 ಕೋಟಿ ರೂ. 34.71 ಕೋಟಿ ರೂ. ಸೇರಿದಂತೆ 34.71 ಕೋಟಿ ರೂ. ಅನುದಾನ ನೀಡ ಲಾಗಿದೆ. 2025ರ ಡಿಸೆಂಬರ್‌ವರೆಗೂ ಮೈಸೂರಿಗೆ 1.80 ಕೋಟಿ ರೂ., ಮಂಡ್ಯ 35 ಲಕ್ಷ ರೂ., ಹಾಸನ 1 ಕೋಟಿ ರೂ., ಚಾಮರಾಜನಗರಕ್ಕೆ 15 ಲಕ್ಷ ರೂ. ಸೇರಿದಂತೆ 3.30 ಕೋಟಿ ರೂ. ಅನುದಾನ ನೀಡಲಾಗಿದೆ ಮಾಹಿತಿ ನೀಡಿದರು.

ಕೆ.ವಿವೇಕಾನಂದ ಅವರು ಈ ನಾಲ್ಕು ಜಿಲ್ಲೆಗಳಲ್ಲಿ ದೇವಸ್ಥಾನಗಳ ಕಟ್ಟಡ ಬಹಳ ದುಸ್ಥಿತಿಯಲ್ಲಿರುವುದರಿಂದ ದೇವಸ್ಥಾನ ಅಭಿವೃದ್ಧಿಗೆ ಹೆಚ್ಚಿನ ವಿಶೇಷ ಅನುದಾನವನ್ನು ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದ್ದು, ಅದರಕ್ಕೆ ಉತ್ತರಿಸಿರುವ ಸಚಿವರು, ರಾಜ್ಯದಾದ್ಯಂತ ಶಿಥಿಲಾವಸ್ಥೆಯಲ್ಲಿರುವ ದೇವಾಲಯ, ಮಠ ಮತ್ತು ಸಂಸ್ಥೆಗಳ ಜೀರ್ಣೋದ್ಧಾರಕ್ಕಾಗಿ ಶಾಸಕರು, ಸಚಿವರು, ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳನ್ವಯ ಜೀರ್ಣೋದ್ಧಾರ, ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗುತ್ತಿದೆ ಎಂದು ಸದನಕ್ಕೆ ಉತ್ತರ ನೀಡಿದ್ದಾರೆ.

## ಡಾ.ನ.ರತ್ನರ 'ಅಯಾನ್ ಶಾಂತಿ ಕುಟೀರ' ಇಂಗ್ಲಿಷ್ ಅನುವಾದ ಕೃತಿ ಬಿಡುಗಡೆ

### ವಯಸ್ಸಾದವರಿಗೆ ಪಾತ್ರ ಕಲ್ಪಿಸಲೆಂದೇ ನಾಟಕ ರಚಿಸಿದವರು ನ. ರತ್ನ: ಗಣ್ಯರ ಗುಣಗಾನ




ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರಲ್ಲಿ 'ರಂಗರತ್ನ ಮೈಸೂರು' ಸಂಸ್ಥೆ ಆಯೋಜಿಸಿದ್ದ ಡಾ.ನ.ರತ್ನ ರಚಿಸಿರುವ 'ಅಯಾನ್ ಶಾಂತಿ ಕುಟೀರ' ನಾಟಕದ ಇಂಗ್ಲಿಷ್ ಅನುವಾದದ ಪುಸ್ತಕವನ್ನು ಹಿರಿಯ ರಂಗಕರ್ಮಿ ಪ್ರೊ.ರಾಮೇಶ್ವರಿ ವರ್ಮ ಬಿಡುಗಡೆ ಮಾಡಿದರು.

ಮೈಸೂರು,ಡಿ.12(ಎಂಟಿವೈ)– ಸುಳ್ಳಿನ ವಿರುದ್ಧ ಹೋರಾಡುತ್ತಿದ್ದ ರಂಗಕರ್ಮಿ ಡಾ.ನ.ರತ್ನ ಅವರು ಸತ್ಯದ ಕಡೆ ಹೆಚ್ಚು ಗಮನ ಹರಿಸುತ್ತಿದ್ದರು ಎಂದು ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಯು.ಎ. ಶರತ್ ಅನಂತ ಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ 'ರಂಗರತ್ನ ಮೈಸೂರು' ಸಂಸ್ಥೆ ಆಯೋಜಿಸಿದ್ದ ಡಾ.ನ.ರತ್ನ ರಚಿಸಿರುವ 'ಅಯಾನ್ ಶಾಂತಿ ಕುಟೀರ' ನಾಟಕದ ಇಂಗ್ಲಿಷ್ ಅನುವಾದ ಪುಸ್ತಕ ಬಿಡುಗಡೆ ಹಾಗೂ 'ರಂಗರತ್ನ ಪ್ರಶಸ್ತಿ' ಪ್ರಧಾನ ಸಮಾರಂಭದಲ್ಲಿ ಮಾತನಾಡಿದ ಅವರು, ನ.ರತ್ನ ಪ್ರತಿಯೊಬ್ಬರಲ್ಲೂ ಪ್ರತಿಭೆ ಹುಡುಕುತ್ತಿದ್ದರು. ಅಲ್ಲದೆ, ಎಲ್ಲರಿಗೂ ಅವಕಾಶ ನೀಡುತ್ತಿದ್ದರು. ನಟನೆ ಬರದೆ ಹಿಂದುಳಿದಿದ್ದ ಹಾಗೂ ನಟಿಸಲು ಪರದಾಡುತ್ತಿದ್ದ ವಿದ್ಯಾರ್ಥಿಗಳನ್ನೇ ತಿದ್ದಿ ತೀಡುವ ಮೂಲಕ ನಟನೆಯಲ್ಲಿ ಒಳ್ಳೆಯ ಪರಿಣಿತಿ ಹೊಂದುವಂತೆ ಮಾಡುತ್ತಿದ್ದರು. ನಟನೆಯಲ್ಲಿ ಹಿಂದುಳಿದವರೇ ರತ್ನ ಅವರ ನೆಚ್ಚಿನ ವಿದ್ಯಾರ್ಥಿಗಳಾಗಿದ್ದರು. ಅಸತ್ಯದ ವಿರುದ್ಧ ಹೋರಾಡಿ, ಸತ್ಯದ ಕಡೆ ಸಾಗಿದರು. ಸರಳ ಜೀವನ ನಡೆಸಿದರು.

ವಯಸ್ಸಾದಂತೆ ಅಂತರಗಳು ಕಡಿಮೆಯಾಗುತ್ತವೆ. ಹೊಸ ಹೊಸ ಸವಾಲುಗಳು ಎದುರಾಗುತ್ತವೆ. ಕಾಲಾಂತ್ಯ ಬಂದಾಗ ಕೆಲವು ಪ್ರಶ್ನೆಗಳು ಉದ್ಭವವಾಗುತ್ತವೆ. ಹೀಗಾಗಿಯೇ ಅವರು ಅಯಾನ್ ಶಾಂತಿ ಕುಟೀರ ನಾಟಕ ಬರೆದರು. ರತ್ನ ಅವರಿಗೆ ಕೇವಲ ಗುರುತಿಸುವ ಕಣ್ಣು ಮಾತ್ರ ಇದ್ದದ್ದು. ನಾಟಕದ ನಂತರ ಬಹುತೇಕರು ಸಿನಿಮಾದ ಕಡೆ ಮುಖ ಮಾಡುತ್ತಿದ್ದಾರೆ. ನಾಟಕಕ್ಕೆ ಇರುವ ಶಕ್ತಿಯೇ ಬೇರೆ ಎಂದರು.

ಹಿರಿಯ ರಂಗಕರ್ಮಿ ಪ್ರೊ.ರಾಮೇಶ್ವರಿ ವರ್ಮ ಮಾತನಾಡಿ, ಈ ಹಿಂದೆ ಹಿರಿಯ ಕಲಾವಿದರು ಅಭಿನಯಿಸಲು ನಾಟಕವೇ ಇರಲಿಲ್ಲ. ತಾತನ ಪಾತ್ರ ಬಿಟ್ಟರೆ ಅಜ್ಜಿಯ ಪಾತ್ರ ಇರುವುದೇ ಇಲ್ಲ ಎಂದು ಅರಿತ ನ.ರತ್ನ ಅವರು ವಯಸ್ಸಾದವರಿಗಾಗಿಯೇ ನಾಟಕ ಬರೆಯುತ್ತೇನೆ ಎಂದು ಹೇಳಿ ನಾಟಕ ರಚಿಸಿದರು. ಯಾರು ಯಾರು ಯಾವ ಪಾತ್ರ ಮಾಡಬೇಕೆಂದು ಅವರೇ ನಿರ್ಧರಿಸುತ್ತಿದ್ದರು.

'ರಂಗ ರತ್ನ ಪ್ರಶಸ್ತಿ' ಪುರಸ್ಕೃತೆ ಡಾ.ಸಹನಾ ಪಿಂಜಾನ ಮಾತನಾಡಿ, ನಾ ರತ್ನ ಅವರು ಇಲ್ಲದಿದ್ದರೆ ನಾವು ಅಸಂಗತ ನಾಟಕಗಳನ್ನು ಕೇಳಲು ಹಾಗೂ ನೋಡಲು ಆಗುತ್ತಿರಲಿಲ್ಲ. ಕೇವಲ ಪಾಶ್ಚಾತ್ಯ ಮಾಧ್ಯಮಕ್ಕೆ ಸೀಮಿತವಾದ ಇಂತಹ ನಾಟಕಗಳನ್ನು ಎಲ್ಲರೂ ನೋಡುವ ಹಾಗೂ ಓದುವ ಹಾಗೆ ಮಾಡಿದ್ದು ನ. ರತ್ನ ಅವರ 'ಗೋಡೆ ಬೇಕೆ ಗೋಡೆ' ನಾಟಕ ಇಂದಿನ ಸಮಾಜಕ್ಕೆ ಹತ್ತಿರವಾದ ನಾಟಕವಾಗಿದೆ ಎಂದರು ಹೇಳಿದರು.

ಇದೇ ಸಂದರ್ಭದಲ್ಲಿ ಡಾ.ನರತ್ನ ಅವರು ರಚಿಸಿರುವ 'ಅಯಾನ್ ಶಾಂತಿ ಕುಟೀರ' ನಾಟಕದ ಇಂಗ್ಲೀಷ್ ಅನುವಾದದ ಪುಸ್ತಕವನ್ನು ಹಿರಿಯ ರಂಗಕರ್ಮಿ ಪ್ರೊರಾಮೇಶ್ವರಿ ವರ್ಮ ಬಿಡುಗಡೆ ಮಾಡಿದರು. ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಯು.ಎ.ಶರತ್ ಅನಂತ ಮೂರ್ತಿ ಅವರು ಡಾ.ಸಹನಾ ಪಿಂಜಾರ ಅವರಿಗೆ ರಂಗ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಬೆಲ್ಲಿ ಧ್ಯಾನ ಮಾಸ್ಟರ್ ತರ್ನೀವ್, ನಾ ರತ್ನ ಅವರ ಪುತ್ರ ಅಜಿತ್ ರತ್ನ, ರತ್ನ ಮಿರ್ಲೆ ಉಪಸ್ಥಿತರಿದ್ದರು.

## ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ, ಸೇವಾ ಟ್ರಸ್ಟ್‌ನ 4ನೇ ವಾರ್ಷಿಕೋತ್ಸವ

ಮೈಸೂರು, ಡಿ.12(ಜಿಎ)–ಮಂಡಿ ಮೊಹಲ್ಲಾದಲ್ಲಿರುವ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ಡಿ.16ರಂದು ಸಂಜೆ 4.30ಕ್ಕೆ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಟ್ರಸ್ಟ್‌ನ 4ನೇ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯಶಸ್ವಿ ಲೋಕೇಶ್, ಲಯನ್ ಗೋಲ್ಡನ್ ಟಿ. ಸುರೇಶ್, ರಘುರಾಂ ವಾಜಪೇಯಿ, ವಿಕ್ರಂ ಅಯ್ಯಂಗಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ತಾವು ಉದ್ಘಾಟಿಸಲಿದ್ದು, ಅಧ್ಯಕ್ಷ ಎ.ಕಾಂತರಾಜು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಹಂಸ ಧ್ವನಿ ಭಜನಾ ಮಂಡಳಿಯ ಭುವನೇಶ್ವರಿ ಮಂಜುನಾಥ್, ವಿದುಷಿ ಡಾ.ಎಂ.ಟಿ.ಶ್ರುತಿ ರಂಜಿನಿ, ಧನುರ್ ವೀಣಾ ಪೀಠ ತಂಡದಿಂದ ಹೆಚ್.ಎಸ್.ತಾಂಡವ ಮೂರ್ತಿ ನಿರ್ದೇಶನದಲ್ಲಿ ಪಿಟೀಲು ವಾದನ ಮೊದಲಾದ ಕಾರ್ಯಕ್ರಮಗಳಿರಲಿವೆ. ಕರ್ನಾಟಕ ಪೊಲೀಸ್ ವಾದ್ಯವೃಂದದ ಆರ್. ದಾಸಪ್ಪ ಅವರನ್ನು ಅಭಿನಂದಿಸಲಾವುದು ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಕಾಂತರಾಜು, ಸುಗುಣ ಕಾಂತರಾಜು, ಚಂದ್ರು, ಮಂಜುನಾಥ್ ಉಪಸ್ಥಿತರಿದ್ದರು.






3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಚ್.ಎಂ.ಜವರೇಗೌಡರು
(ನಿವೃತ್ತ ಶಿಕ್ಷಕರು)
ಜನನ : 01-01-1940 ಮರಣ : 13-12-2022

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀಮತಿ ನಳಿನ ಮತ್ತು ಶ್ರೀ ಜಯಕುಮಾರ್, ಶ್ರೀಮತಿ ಪ್ರತಿಭಾ ಮತ್ತು ಶ್ರೀ ರವಿಶಂಕರ್, ಶ್ರೀಮತಿ ನಳಿನಿ ಮತ್ತು ಹೆಚ್.ಜೆ.ರಾಘವೇಂದ್ರ (ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷರು, ಮೈಸೂರು ಜಿಲ್ಲಾ ಹಾಗೂ ಮಾಜಿ ಗ್ರಾಪಂ ಉಪಾಧ್ಯಕ್ಷರು) ಮಗಳು ಅಳಿಯಂದಿರಾದ ಶ್ರೀಮತಿ ಮಾಲತಿ ಮತ್ತು ಶ್ರೀ ನಾಗರಾಜು, ಶ್ರೀಮತಿ ಮಂಜುಳ ಮತ್ತು ಶ್ರೀ ನಾಗೇಂದ್ರ ಶ್ರೀಮತಿ ಪದ್ಮಿನಿ ಮತ್ತು ಶ್ರೀ ಜಯರಾಮು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ಹುಯಿಲಾಳು ಗ್ರಾಮಸ್ಥರು

ಮೈಸೂರು ಮಿತ್ರ 46
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು









